بِسْمِ اللهِ الرَّحْمٰنِ الرَّحِيْمِ نَحْمَدُهٗ وَنُصَلِّى عَلٰى رَسُوْلِهِ الْكَرِيْمِ وَعَلٰى عَبْدِهِ الْمَسِيْحِ الْمَوْعُوْد

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

ಕನ್ನಡ **ಬದರ್** ವಾರ ಪತ್ರಿಕೆ

WEEKLY BADAR QADIAN KANNADA

ವರ್ಷ: 04

ಸಂಚಿಕೆ: 08

ವಾರ್ಷಿಕ ಶುಲ್ಕ ರೂ.600/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

23 ಫೆಬ್ರವರಿ 2023, 23 ತಬ್ಲೀಗ್ 1402 ಹಿಜರಿ ಶಮ್‌ಸಿ,
02 ಶಅ್‌ಬಾನ್ 1444 ಹಿಜರಿ ಖಮರಿ.


## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ- **ಆಮೀನ್**

اَللّٰهُمَّ اَيِّدْ اِمَامَنَا بِرُوْحِ الْقُدُسِ
وَبَارِكْ لَنَا فِىْ عُمُرِهٖ وَاَمْرِهٖ

## ಅಲ್ಲಾಹನ ಉಪದೇಶ

يٰۤاَيُّهَا الَّذِيْنَ اٰمَنُوْا لَا تَخُوْنُوا اللّٰهَ وَالرَّسُوْلَ وَتَخُوْنُوْۤا اَمٰنٰتِكُمْ وَاَنْتُمْ تَعْلَمُوْنَ (سورۃ انفال:28)

(ಅಲ್-ಅನ್‌ಫಾಲ್: 28)

**ಅಂದರೆ: ಎಲೈ ಸತ್ಯವಿಶ್ವಾಸಿಗಳೇ, ನೀವು ಅಲ್ಲಾಹನಿಗೂ ಪ್ರವಾದಿಗೂ ವಿಶ್ವಾಸಘಾತ ಮಾಡಬಾರದು. ನೀವು ತಿಳಿದುಕೊಂಡೂ ನಿಮ್ಮ ವಿಶ್ವಸ್ತನಿಧಿಗಳಲ್ಲಿ ವಂಚನೆ ಮಾಡಬೇಡಿರಿ.**

## ಪ್ರವಾದಿ ಮುಹಮ್ಮದ್(ಸ)ರವರ ಉಪದೇಶ

### ಮದೀನದ ಪ್ರಾಮುಖ್ಯತೆ

**(1871)** ಹಝ್ರತ್ ಅಬೂಹುರೈರ(ರ) ವರದಿ ಮಾಡುತ್ತಾರೆ. ರಸೂಲುಲ್ಲಾಹ್(ಸ) ನುಡಿದರು. ನನಗೆ ಎಂತಹ ಪಟ್ಟಣದಲ್ಲಿ ಹೋಗುವ ಆಜ್ಞೆ ಆಗಿದೆ ಎಂದರೆ ಅದು ಎಲ್ಲಾ ಪಟ್ಟಣಗಳನ್ನು ನುಂಗಿಹಾಕುವುದು. ಅದನ್ನು ಯಸ್ರಬ್ ಎನ್ನುತ್ತಾರೆ. ಆ ಪಟ್ಟಣ ಮದೀನ ಆಗಿದೆ. ಅದು ಪಾಪಿ ಜನರನ್ನು ತ್ಯಾಜ್ಯ ವಸ್ತುಗಳಂತೆ ತೆಗೆದು ಹಾಕುವುದು, ಅಗ್ನಿಯಲ್ಲಿ ತಪಿಸುತ್ತಿರುವ ಕಬ್ಬಿಣದಿಂದ ಕಲ್ಮಶಗಳನ್ನು ಸುಟ್ಟು ಹಾಕುವಂತೆ.

**ಟಿಪ್ಪಣಿ:** ಹಝ್‌ರತ್ ಸಯ್ಯದ್ ಝೈನುಲ್ ಆಬಿದೀನ್ ವಲಿಯಲ್ಲ ಶಾಹ್ ಸಾಹಿಬ್ ಅದರ ವ್ಯಾಖ್ಯಾನದಲ್ಲಿ ಬರೆಯುತ್ತಾರೆ. ಮದೀನದ ಪಾವಿತ್ರ್ಯತೆ ದುಷ್ಕರ್ಮಿ ಜನರು ದೂರವಾದ ನಂತರವೇ ಉಳಿಯಲು ಸಾಧ್ಯವಿತ್ತು. ಈ ಘಟನೆಗಳು ಹಝ್‌ರತ್ ರಸೂಲುಲ್ಲಾಹ್(ಸ) ರವರ ಈ ಹೇಳಿಕೆಯನ್ನು ಅಕ್ಷರಶಃ ಸತ್ಯವೆಂದು ಸಾಬೀತುಗೊಳಿಸಿದೆ. ಯಹೂದಿ ಸಮುದಾಯದವರು ಒಡಂಬಡಿಕೆಯನ್ನು ಮುರಿದು ಹಾಕಿದರು ಮತ್ತು ಹೊರಗಿನ ಶತ್ರುಗಳೊಂದಿಗೆ ಸೇರಿ ಒಳಸಂಚು ಮಾಡಿಕೊಂಡು ಮದೀನ ಮೇಲೆ ಹಲ್ಲೆ ನಡೆಸಿದರು. ಅಂತಿಮವಾಗಿ ತನ್ನ ವಿದ್ರೋಹದಿಂದಾಗಿ ಒಬ್ಬರ ನಂತರ ಇನ್ನೊಬ್ಬರು ಮದೀನದಿಂದ ಹೊರಹಾಕಲ್ಪಟ್ಟರು. ಹಝ್ರತ್ ರಸೂಲುಲ್ಲಾಹ್(ಸ) ರವರ ಹೇಳಿಕೆಯ ಇನ್ನೊಂದು ಭಾಗ ಪೂರ್ತಿಯಾದದ್ದು ಯಾವಾಗ ಎಂದರೆ ಮದೀನವನ್ನು ಇಸ್ಲಾಮಿನ ಮೊದಲ ಕೇಂದ್ರವಾಗಿ ಮಾರ್ಪಟ್ಟಿತು. ಖಲಿಫ ರಾಶಿದಾದ ಪವಿತ್ರ ಕಾಲಾವಧಿಗಳಲ್ಲಿ ಮಹೋನ್ನತವಾದ ವಿಜಯಗಳು ದೊರೆತವು. ಇತರ ಪಟ್ಟಣಗಳನ್ನು ನುಂಗುವುದರ ಅರ್ಥ ಇತರ ಪಟ್ಟಣಗಳ ಮೇಲೆ ವಿಜಯ ಸಾಧಿಸುವುದು ಎಂದಾಗಿದೆ.

**(ಸಹೀಹ್ ಬುಖಾರಿ ಸಂಪುಟ-3, ಕಿತಾಬ್ ಫಝಾಯಿಲುಲ್ ಮದೀನ 2008)**

**ಈ ಸಮಯ ಇಸ್ಲಾಮಿನ ಮೇಲೆ ಬಂದ ಆಪತ್ತುಗಳನ್ನು ದೂರ ಮಾಡುವ ಕಾರ್ಯದಲ್ಲಿ ಓರ್ವ ಮುಸ್ಲಿಮನಾದ ಕಾರಣದಿಂದ ಪಾಲ್ಗೊಳ್ಳುವುದು ಅನಿವಾರ್ಯವಾಗಿದೆ.**

## ಸಯ್ಯದುನಾ ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು

### ವಿಧಿ ವಿಷಯ

ಅವರು ಹೇಳಿದರು: "ಈಗ ನಮ್ಮ ವಿರೋಧಿಗಳಲ್ಲಿ ಅನೇಕ ಜನರಿದ್ದಾರೆ ಅವರು ನಮ್ಮ ಜಮಾಅತ್ತಿನಲ್ಲಿ ಸೇರುವುದು ವಿಧಿ ವಿಷಯವಾಗಿದೆ. ಅವರು ವಿರೋಧಿಸುತ್ತಾರೆ, ಆದರೆ ದೇವದೂತರುಗಳು ಅವರನ್ನು ನೋಡಿ ನೀವು ಅಂತಿಮವಾಗಿ ಅವರೊಂದಿಗೆ ಸೇರುತ್ತೀರಿ ಎಂದು ನಗುತ್ತಾರೆ. ಅವರು ನಮ್ಮ ಒಂದು ರಹಸ್ಯ ಜಮಾಅತ್ ಆಗಿದೆ ಅವರು ಒಂದು ದಿವಸ ನಮ್ಮೊಂದಿಗೆ ಸೇರಿಕೊಳ್ಳುತ್ತಾರೆ."

### ಈ ಕಾಲಘಟ್ಟದ ಮಹತ್ತರ ಆರಾಧನೆ

ಈ ಕಾಲಾವಧಿಯಲ್ಲಿ ಇಸ್ಲಾಮಿನ ಮೇಲೆ ಬಂದ ಆಪತ್ತುಗಳನ್ನು ದೂರ ಮಾಡುವ ಕಾರ್ಯದಲ್ಲಿ ಓರ್ವ ಮುಸ್ಲಿಮನಾದ ಕಾರಣದಿಂದ ಪಾಲ್ಗೊಳ್ಳುವುದು ಅನಿವಾರ್ಯವಾಗಿದೆ. ಈ ಗೊಂದಲವನ್ನು ದೂರೀಕರಿಸುವುದರಲ್ಲಿ ಪಾಲ್ಗೊಳ್ಳುವುದೇ ಈ ಕಾಲಘಟ್ಟದ ಮಹತ್ತರ ಆರಾಧನೆಯಾಗಿರುತ್ತದೆ. ಈ ಸಮಯ ಹರಡಿಕೊಂಡಂತಹ ಪಾಪಗಳನ್ನು ಮತ್ತು ಅಪಹಾಸ್ಯಗಳನ್ನು ತನ್ನ ಭಾಷಣಗಳ ಮೂಲಕ, ಜ್ಞಾನಗಳ ಮೂಲಕ ಮತ್ತು ಎಲ್ಲಾ ಶಕ್ತಿಗಳಿಂದಲು ಲೋಕದಿಂದ ದುರ ಮಾಡಲು ಮನ: ಪೂರ್ವಕವಾದ ಪ್ರಯತ್ನಗಳನ್ನು ಕೈಗೊಳ್ಳಬೇಕಾಗಿದೆ. ಇಹಲೋಕದಲ್ಲಿಯೇ ಐಶ್ವರ್ಯದ ಸ್ವಾದ ಪಡೆದರೆ ಏನು ಪ್ರಯೋಜನ, ಇಹಲೋಕದಲ್ಲಿ ಪುಣ್ಯ ಪಡೆದರೆ ಏನು ಪಡೆದಂತೆ? ಪರಲೋಕದ ಪುಣ್ಯವನ್ನು ಗಳಿಸಿಕೊಳ್ಳಿ. ಅದು ಅಪರಿಮಿತವಾಗಿವೆ. ಏಕದೇವತ್ವಕ್ಕಾಗಿ ಪ್ರತಿಯೊಬ್ಬರು, ಸ್ವಯಂ ಅಲ್ಲಾಹನಿಗೆ ತನ್ನ ಏಕತ್ವದ ಬಗ್ಗೆ ಇದ್ದ ಹೆಮ್ಮೆಯ ರೀತಿಯ ಉತ್ಸಾಹವಿರಬೇಕಾಗಿದೆ. ಯೋಚಿಸಿ ನೋಡಿ ಲೋಕದಲ್ಲಿ ಈ ರೀತಿಯ ಪೀಡಿತರು ಎಲ್ಲಿದ್ದಾರೆ. ನಮ್ಮ ನಬಿ(ಸ) ರವರಂತಹ ಪೀಡನೆಗೆ ಒಳಗಾದವರು ಯಾರಿದ್ದಾರೆ. ಯಾವ ಯಾವ ಅಶ್ಲೀಲ ಭಾಷೆಗಳನ್ನು ಅವರ ವಿರುದ್ಧ ಬಳಸಲಾಗಿಲ್ಲ? ಯಾವ ಆರೋಪವನ್ನು ಅವರ ವಿರುದ್ಧ ಮಾಡಲಿಲ್ಲ? ಇದು ಮುಸಲ್ಮಾನರು ಮೌನವಹಿಸುವಂತಹ ಕಾಲವೆ? ಈ ಸಮಯದಲ್ಲೂ ಸಹ ಎದ್ದೇಳದಿದ್ದರೆ, ಮತ್ತು ಸತ್ಯದ ಪರವಾಗಿ ಸಾಕ್ಷ್ಯ ವಹಿಸಲಿಲ್ಲವಾದರೆ, ಅವಿಶ್ವಾಸಿಗಳು ನಮ್ಮ ನಬಿ(ಸ) ರವರ ಮೇಲೆ ಹೊರಿಸುತ್ತಿರುವ ಆರೋಪ. ಜನರನ್ನು ದಾರಿ ತಪ್ಪಿಸುತ್ತಿರುವುದನ್ನು ಸರಿ ಎನ್ನಬೇಕಾಗುತ್ತದೆ. ನೆನಪಿಡಿರಿ. ನಿಸ್ಸಂಶಯವಾಗಿಯೂ ಅವರು ಅಂತ್ಯ ದಿನದಂದು ಕೇಳಲ್ಪಡುವರು. ಏನೆಲ್ಲ ನಿಮಗೆ ಜ್ಞಾನವಿದೆಯೋ, ಅರ್ಹತೆಗಳಿವೆಯೋ ಅವುಗಳನ್ನು ಈ ಮಾರ್ಗದಲ್ಲಿ ಬಳಕೆ ಮಾಡಿ ಜನರನ್ನು ಆಪತ್ತಿನಿಂದ ರಕ್ಷಿಸಿ. ಹದೀಸಿನಿಂದ ಸಾಬೀತಾಗಿರುತ್ತದೆ. ನೀವು ದಜ್ಜಾಲನನ್ನು ಹತ್ಯೆ ಮಾಡದಿದ್ದರೂ ಅದು ಹತನಾಗುವುದು ಶತಸಿದ್ಧ. ಸಮಯಕ್ಕೆ ಸರಿಯಾಗಿ ಎಚ್ಚೆತ್ತುಕೊಳ್ಳುವವರೇ ಜಾಣರು" ಎಂಬ ಮಾತು ಪ್ರಸಿದ್ಧವಿದೆ. ಹದಿಮೂರನೇ ಶತಮಾನದಿಂದಲೇ ಈ ಆಪತ್ತುಗಳು ಪ್ರಾರಂಭವಾದವು. ಇದೀಗ ಅವು ಅಂತ್ಯಗೊಳ್ಳುವ ಸಮಯ ಸಮೀಪವಾಗಿದೆ. ಕಾರಣ ಪ್ರತಿಯೊಬ್ಬರ ಕರ್ತವ್ಯವಾಗಿದೆ. ಎಷ್ಟು ಸಾಧ್ಯವಿದೆಯೋ ಅಷ್ಟು ಪ್ರಯತ್ನ ಮಾಡಬೇಕು ಮತ್ತು ಜನರಿಗೆ ಪ್ರಕಾಶದ ಮಾರ್ಗ ತೋರಿಸಬೇಕು.

**(ಮಲ್ಫೂಝಾತ್ ಸಂಪುಟ-1, ಪುಟ 355-356, 357 ಮುದ್ರಣ 2018 ಖಾದಿಯಾನ್)**

**ವಸ್ತುಗಳ ಪಾವಿತ್ರ್ಯತೆ ಮತ್ತು ಪಾವಿತ್ರ್ಯವೇ ಮೂಲ ಸ್ಥಾನಮಾನವಾಗಿದೆ ಮತ್ತು ಪಾವಿತ್ರ್ಯವು ಒಂದು ಬಂಧನವಾಗಿದೆ ಎಂದು ಪವಿತ್ರ ಖುರ್‌ಆನ್‌ನ ಪದಗಳು ಸೂಚಿಸುತ್ತವೆ. ಸರ್ವಶಕ್ತನಾದ ಅಲ್ಲಾಹನು ಅನುಮತಿಸಿರುವುದನ್ನು ಹೊರತುಪಡಿಸಿ ಇನ್ನುಳಿದ ಎಲ್ಲಾ ವಸ್ತುಗಳನ್ನು ನಿಷೇಧಿಸಲಾಗಿದೆ ಎಂದು ಕೆಲವರು ಭಾವಿಸುತ್ತಾರೆ, ಆದರೆ ಇದು ನಿಜವಲ್ಲ. ಪಥ್ಯದಿಂದ ಅಥವಾ ಚಿಹ್ನೆಯಿಂದ ನಿಷೇಧಿಸಲ್ಪಟ್ಟಿರುವುದನ್ನು ಹೊರತುಪಡಿಸಿ ಎಲ್ಲವೂ ಮನುಷ್ಯನಿಗೆ ಅನುಮತಿಸಲಾಗಿದ**

ಸಯ್ಯದ್‌ನಾ ಹಝ್‌ರತ್ ಮುಸ್ಲಿಹ್ ಮೌಊದ್(ರ) ಸೂರಃ ಅನ್ನಹಲ್ ಆಯತ್ 16 **ಇನ್ನಮಾ ಹರ್ರಮ ಅಲೈಕುಮುಲ್ ಮೈತತ ವದ್ದಮ ವ ಲಹ್ಮಲ್ ಖಿನ್‌ಝೀರ್ ವಮಾ ಉಹಿಲ್ಲ ಲಿಗೈರಿಲ್ಲಾಹಿ ಬಿಹೀ; ಫಮನಿಝ್‌ತುರ್ರ ಗೈರ ಬಾಗಿಂವ್ವಲಾ ಆದಿನ್ ಫಇನ್ನಲ್ಲಾಹ ಗಫೂರುರ್ರಹೀಮ್** (ಅನುವಾದ: ಸತ್ತ ಪ್ರಾಣಿ, ರಕ್ತ, ಹಂದಿಮಾಂಸ

*(ಪುಟ 08 ರಲ್ಲಿ ಮುಂದುವರಿಸಲಾಗಿದೆ)*

# ಖುತ್ಬ ಜುಮುಅ

ಅಲ್ಲಾಹನು ನಿಮ್ಮನ್ನು ವ್ಯರ್ಥಗೊಳಿಸುವನು ಎಂದು ಭಾವಿಸಬೇಡಿರಿ. ನೀವು ಅಲ್ಲಾಹನ ಕೈಯಿಂದ ನೆಲದಲ್ಲಿ ಬಿತ್ತಲ್ಪಟ್ಟ ಬೀಜವಾಗಿದ್ದೀರಿ. ಈ ಬೀಜ ಬೆಳೆಯುವುದು ಮತ್ತು ಫಲ ನೀಡುವುದು. ಅದರ ರೆಂಬೆಗಳು ಎಲ್ಲೆಡೆ ಹರಡುವುವು ಮತ್ತದು ದೊಡ್ಡದಾದ ಒಂದು ಮರವಾಗುವುದು. ಇನ್‌ಶಾ ಅಲ್ಲಾಹ್. ಅಲ್ಲಾಹನ ಮಾತನ್ನು ನಂಬುವವನು ಮತ್ತು ಮಧ್ಯೆದಲ್ಲಿ ಬರುವ ಆಪತ್ತುಗಳಿಗೆ ಹೆದರದೇ ಇರುವವನು ಅನುಗ್ರಹೀತನು. ಏಕೆಂದರೆ ನಿಮ್ಮನ್ನು ಪರೀಕ್ಷಿಸಲಿಕ್ಕಾಗಿ ಆಪತ್ತುಗಳು ಬರುವುದು ಅವಶ್ಯ. (ಹಝ್ರತ್ ಮಸೀಹ್ ಮೌಊದ್(ಅ))

**ಕೆಲವು ದಿನಗಳ ಹಿಂದೆ ಆಫ್ರಿಕ ಭೂಖಂಡದ ದೇಶವಾದ ಬುರ್ಕಿನಾಫಾಸೋದಲ್ಲಿ ಪ್ರೇಮ, ನಿಷ್ಠೆ, ಪ್ರಾಮಾಣಿಕತೆ, ನಂಬಿಕೆ ಮತ್ತು ದೃಢವಿಶ್ವಾಸದಿಂದ ತುಂಬಿರುವ ಜಮಾಅತಿನ ಸದಸ್ಯರು ಒಟ್ಟಾಗಿ ತೋರಿಸಿದ ಮಾದರಿ ಅದ್ಭುತಕರವಾಗಿದೆ. ಅದೊಂದು ಸಮಾನತೆಯಿಲ್ಲದ ಮತ್ತು ಅತುಲ್ಯವಾದ ಮಾದರಿಯಾಗಿದೆ.**

ಅಲ್ಲಾಹನ ಮಾರ್ಗದಲ್ಲಿ ಜೀವ ನೀಡುವುದರಿಂದ ಅವರು ಅಮರರಾಗುವುದರೊಂದಿಗೆ ಜಮಾಅತಿನ ಜೀವಕ್ಕೂ ಅವರು ಕಾರಣಕರ್ತರಾಗುತ್ತಾರೆ. ಇವರೇ ಜೀವಂತವಾಗಿ ಬಾಕಿಯುಳಿದವರ ಜೀವನ ಮತ್ತು ಪ್ರಗತಿಗಳಿಗೆ ಮಾರ್ಗಗಳಾಗುತ್ತಾರೆ. ಹೀಗಿರುವಾಗ ಅವರನ್ನು ಹೇಗೆ ಮೃತರೆಂದು ಹೇಳಲು ಸಾಧ್ಯ?

ಜನವರಿ 11ರಂದು ಇಶಾದ ಸಮಯದಲ್ಲಿ 9 ಅಹ್ಮದೀ ಹಿರಿಯರನ್ನು ಮಸೀದಿಯ ಅಂಗಳದಲ್ಲಿ ಇತರ ಅಹ್ಮದಿಯರ ಮುಂದೆ ಇಸ್ಲಾಂ ಅಹ್ಮದಿಯ್ಯತ್ತನ್ನು ನಿರಾಕರಿಸದೇ ಇದ್ದ ಕಾರಣದಿಂದ ಒಬ್ಬೊಬ್ಬರನ್ನಾಗಿ ವಧಿಸಿ ಶಹೀದ್ ಮಾಡಲಾಯಿತು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್.**

ನನ್ನ ತಲೆಯನ್ನು ಕೊಯ್ಯಬೇಕಾದರೆ ಕೊಯ್ಯಿರಿ, ಆದರೆ ನಾನು ಅಹ್ಮದಿಯ್ಯತ್ ಉಪೇಕ್ಷಿಸುವುದಿಲ್ಲ. ಯಾವ ಸತ್ಯವನ್ನು ನಾನು ಗಳಿಸಿರುವೆನೋ ಅದರಿಂದ ಹಿಂದೆ ಸರಿಯಲು ಸಾಧ್ಯವಲ್ಲ. ಸತ್ಯವಿಶ್ವಾಸದ ಮುಂದೆ ಜೀವಕ್ಕೆ ಇರುವ ಬೆಲೆಯಾದರೂ ಏನು?

ಎಲ್ಲ ಅಹ್ಮದೀ ಹಿರಿಯರು ಪರ್ವತದಂತಹ ಸ್ಥಿರಚಿತ್ತತೆಯನ್ನು ಪ್ರಕಟಿಸುತ್ತಾ ಧೈರ್ಯದಿಂದ ಶಹಾದತನ್ನು ಅಪ್ಪಿಕೊಳ್ಳಲು ತಯಾರಾದರು. ಯಾರೂ ಕಿಂಚಿತ್ತೂ ದೌರ್ಬಲ್ಯವನ್ನು ತೋರಿಸಲೂ ಇಲ್ಲ, ಅಹ್ಮದಿಯ್ಯತ್ತನ್ನು ಬಿಡಲೂ ಇಲ್ಲ. ಒಬ್ಬರ ನಂತರ ಇನ್ನೊಬ್ಬರೊಂತೆ ಶಹೀದ್ ಆಗುತ್ತಾ ಹೋದರು. ಆದರೆ ಯಾರ ವಿಶ್ವಾಸವು ಚಂಚಲಗೊಳ್ಳಲಿಲ್ಲ. ಎಲ್ಲರೂ ಮುಂದುಮುಂದಾಗಿ ಸುದೃಢವಾದ ಸತ್ಯವಿಶ್ವಾಸ ಮತ್ತು ಧೈರ್ಯವನ್ನು ಪ್ರಕಟಿಸಿದರು. ಸತ್ಯವಿಶ್ವಾಸದ ಧ್ವಜವನ್ನು ಮೇಲೆತ್ತಿಕೊಂಡು ಅಲ್ಲಾಹನ ಸನ್ನಿಧಿಯಲ್ಲಿ ತಮ್ಮ ಜೀವಗಳನ್ನು ಸಮರ್ಪಿಸಿದರು.

ಹಝ್ರತ್ ಸಾಹಿಬ್‌ಝಾದ ಅಬ್ದುಲ್ಲತೀಫ್ ಶಹೀದ್ ಸಾಹಿಬ್‌ರ ಬಗ್ಗೆ ಪ್ರಸ್ತಾಪಿಸುತ್ತಾ ಹಝ್ರತ್ ಮಸೀಹ್ ಮೌಊದ್(ಅ) ಹೇಳಿದರು: "ಅಲ್ಲಾಹನು ಅವರಂತಹ ಅನೇಕ ಪ್ರತಿನಿಧಿಗಳನ್ನು ಸೃಷ್ಟಿಸುವನು." ಹಝ್ರತ್ ಮಸೀಹ್ ಮೌಊದ್(ಅ) ಕಂಡ ಕನಸನ್ನು ಅವರು ಹೀಗೆ ವ್ಯಾಖ್ಯಾನಿಸಿದ್ದರು. ಸಾಹಿಬ್‌ಝಾದ ಅಬ್ದುಲ್ಲತೀಫ್ ಸಾಹಿಬ್‌ರ ನಂತರ ಅಲ್ಲಾಹನು ಅವರಂತಹ ಅನೇಕ ಪ್ರತಿನಿಧಿಗಳನ್ನು ಉಂಟುಮಾಡುವನು ಎಂದು ನನಗೆ ಪ್ರತೀಕ್ಷೆ ಇದೆ. ಇಂದು ಆಫ್ರಿಕದ ನಿವಾಸಿಗಳು ಒಟ್ಟಾಗಿ ಈ ಮಾದರಿಯನ್ನು ತೋರಿಸಿದರು ಮತ್ತು ಅವರ ಸರಿಯಾದ ಪ್ರತಿನಿಧಿಗಳಾದರು.

ಒಟ್ಟಿನಲ್ಲಿ ಶಹೀದ್ ಆದವರು ಅಹ್ಮದಿಯ್ಯತ್ತಿನ ಬೆಳಗುವ ನಕ್ಷತ್ರಗಳಾಗಿರುವರು. ಇವರು ತಮ್ಮ ಹಿಂದೆ ಒಂದು ಮಾದರಿಯನ್ನು ಬಿಟ್ಟು ಹೋಗಿರುವರು. ಅಲ್ಲಾಹನು ಅವರ ಮಕ್ಕಳ ನಿಷ್ಠೆ ಮತ್ತು ಪ್ರಾಮಾಣಿಕತೆಯನ್ನು ವರ್ಧಿಸಲಿ. ಈ ಶಹಾದತಿನಿಂದ ಈ ಪ್ರದೇಶದಲ್ಲಿ ಅಹ್ಮದಿಯ್ಯತ್ ಕೊನೆಗೊಳ್ಳುವುದು ಎಂದು ಎದುರಾಳಿಗಳು ಭಾವಿಸಿರುವರು. ಆದರೆ ಇಲ್ಲಿ ಅಹ್ಮದಿಯ್ಯತ್ ಮುಂಚೆಗಿಂತ ಹೆಚ್ಚಾಗಿ ವರ್ಧಿಸುವುದು. ಇನ್‌ಶಾ ಅಲ್ಲಾಹ್.

ಅಲ್ಲಾಹನು ಈ ಶಹೀದ್‌ರ ಪದವಿಗಳನ್ನು ವರ್ಧಿಸಲಿ, ಅದನ್ನು ಫಲವತ್ತನ್ನಾಗಿ ಮಾಡಲಿ, ಅದರ ಪರಿಣಾಮವಾಗಿ ಹಝ್ರತ್ ಪೈಗಂಬರ್(ಸ)ರ ಅಧ್ಯಾಪನೆ ಲೋಕದಲ್ಲಿ ಹರಡುವುದನ್ನು ನಾವು ಕಾಣುವಂತಾಗಲಿ. ಮೌಢ್ಯತೆ ಲೋಕದಿಂದ ಕೊನೆಗೊಳ್ಳಲಿ ಮತ್ತು ಏಕದೇವನ ನೈಜ ಆಡಳಿತ ಲೋಕದಲ್ಲಿ ನೆಲೆನಿಲ್ಲಲಿ.

ಬುರ್ಕಿನಾಫಾಸೋವಿನ 9 ಅಹ್ಮದಿ ಶಹೀದ್‌ಗಳಯ ಹಾಗೂ ಡಾ॥ ಕರೀಮುಲ್ಲಾಹ್ ಝೀರ್ವಿ ಸಾಹಿಬ್ ಮತ್ತು ಕರೀಮುಲ್ಲಾ ಝೈರ್ವಿ ಸಾಹಿಬ್ ಅವರ ಪತ್ನಿ ಅಮತುಲ್ ಲತೀಫ್ ಝೈರ್ವಿ ಸಾಹಿಬರವರ ಗುಣಲಕ್ಷಣಗಳ ಪ್ರಸ್ತವನೆ ಹಾಗೂ ನಮಾಝೆ ಜನಾಝ ನಿರ್ವಹಣೆ

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಟಿಲ್‌ಫೋರ್ಡ್, ಯು.ಕೆ, ಇಸ್ಲಾಮಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **20-01-2023** ರಂದು ನೀಡಿದ **ಖುತ್ಬ ಜುಮುಅ**

اَشْهَدُ اَنْ لَّا اِلٰهَ اِلَّا اللّٰهُ وَحْدَهٗ لَا شَرِيْكَ لَهٗ وَاَشْهَدُ اَنَّ مُحَمَّدًا عَبْدُهٗ وَرَسُوْلُهٗ
اَمَّا بَعْدُ فَاَعُوْذُ بِاللّٰهِ مِنَ الشَّيْطٰنِ الرَّجِيْمِ - بِسْمِ اللّٰهِ الرَّحْمٰنِ الرَّحِيْمِ -
اَلْحَمْدُ لِلّٰهِ رَبِّ الْعٰلَمِيْنَ ○ الرَّحْمٰنِ الرَّحِيْمِ ○ مٰلِكِ يَوْمِ الدِّيْنِ ○ اِيَّاكَ نَعْبُدُ وَاِيَّاكَ نَسْتَعِيْنُ ○
اِهْدِنَا الصِّرَاطَ الْمُسْتَقِيْمَ ○ صِرَاطَ الَّذِيْنَ اَنْعَمْتَ عَلَيْهِمْ ۙ غَيْرِ الْمَغْضُوْبِ عَلَيْهِمْ وَلَا الضَّآلِّيْنَ ○
وَلَا تَقُوْلُوْا لِمَنْ يُّقْتَلُ فِيْ سَبِيْلِ اللّٰهِ اَمْوَاتٌ ؕ بَلْ اَحْيَآءٌ وَّلٰكِنْ لَّا تَشْعُرُوْنَ ○ وَلَنَبْلُوَنَّكُمْ
بِشَيْءٍ مِّنَ الْخَوْفِ وَالْجُوْعِ وَنَقْصٍ مِّنَ الْاَمْوَالِ وَالْاَنْفُسِ وَالثَّمَرٰتِ ؕ وَبَشِّرِ الصّٰبِرِيْنَ ○ الَّذِيْنَ اِذَآ
اَصَابَتْهُمْ مُّصِيْبَةٌ ۙ قَالُوْٓا اِنَّا لِلّٰهِ وَاِنَّآ اِلَيْهِ رٰجِعُوْنَ ○ (البقرة:155-157)

ದೇವಮಾರ್ಗದಲ್ಲಿ ಹತ್ಯೆಗೀಡಾದವರ ಕುರಿತು ಅವರು ಮೃತಪಟ್ಟವರೆಂದು ಹೇಳಬೇಡಿರಿ. ಅವರು ಮೃತರಲ್ಲ; ಜೀವಂತರು. ಆದರೆ ನೀವು ಅದನ್ನು ಗ್ರಹಿಸುವುದಿಲ್ಲ. ನಿಶ್ಚಯವಾಗಿಯೂ ನಿಮ್ಮನ್ನು ನಾವು ಕೆಲವು ಬಗೆಯ ಭಯಾಶಂಕೆ ಮತ್ತು ಹಸಿವಿನಿಂದಲೂ ಧನನಷ್ಟ, ಪ್ರಾಣಹಾನಿ ಮತ್ತು ಫಲನಷ್ಟಗಳಿಂದಲೂ ಪರೀಕ್ಷಿಸುವೆವು. ಹೇ ಪ್ರವಾದಿ, ನೀನು ಸಹನಶೀಲರಿಗೆ ಶುಭ ವಾರ್ತೆಯನ್ನು ತಿಳಿಸು-ತಮಗೆ ಏನಾದರೂ ವಿಪತ್ತು ಬಂದೆರಗಿದರೆ, ಅವರು ಗಾಬರಿಗೊಳ್ಳುವುದಿಲ್ಲ, ಬದಲು ನಾವು ನಿಶ್ಚಯವಾಗಿಯೂ ಅಲ್ಲಾಹನಗಾಗಿ ಇರುವವರು ಹಾಗೂ ನಿಶ್ಚಯವಾಗಿಯೂ ಅವನೆಡೆಗೆಯೇ ಮರಳುವವರಾಗಿದ್ದೇವೆ ಎಂದು ಹೇಳುತ್ತಾರೆ.

ಅಲ್ಲಾಹನ ಮಾರ್ಗದಲ್ಲಿ ಜೀವತ್ಯಾಗ ಮಾಡುವವರು ಮೃತರಲ್ಲ, ಜೀವಂತರು ಎಂದು ಅಲ್ಲಾಹನು ಹೇಳುತ್ತಾನೆ. ಅಹ್ಮದಿಯಾ ಜಮಾಅತಿನಲ್ಲಿ ಕಳೆದ ನೂರು ವರ್ಷಗಳಿಗಿಂತ ಹೆಚ್ಚು ಕಾಲದಿಂದ ಅಲ್ಲಾಹನ ಮಾರ್ಗದಲ್ಲಿ ಜೀವತ್ಯಾಗಗಳನ್ನು ಮಾಡಲಾಗುತ್ತಿದೆ. ಅವರ ತ್ಯಾಗಗಳು ವ್ಯರ್ಥವಾಯಿತೇ? ಖಂಡಿತವಿಲ್ಲ. ಅಲ್ಲಾಹನು ಹುತಾತ್ಮರ ಸ್ಥಾನವನ್ನು ಉನ್ನತಗೊಳಿಸುವುದರೊಂದಿಗೆ ತನ್ನ ವಾಗ್ದಾನದ ಪ್ರಕಾರ ಅಹ್ಮದಿಯಾ ಜಮಾಅತಿಗೆ ಮೊದಲಿಗಿಂತ ಹೆಚ್ಚು ಅಭಿವೃದ್ಧಿಗಳನ್ನು ದಯಪಾಲಿಸುತ್ತಾ ಇದ್ದಾನೆ. ಈ ಹುತಾತ್ಮರು ಅವರಿಗೆ ಲಭಿಸಬೇಕಾದ ಸ್ಥಾನವನ್ನು ಪರಲೋಕದಲ್ಲಿ ಪಡೆದರು ಮತ್ತು ಅವರ ಪದವಿಗಳು ಸದಾ

ಉನ್ನತಗೊಳ್ಳುತ್ತಾ ಇವೆ. ಅದರೊಂದಿಗೆ ಈ ಲೋಕದಲ್ಲೂ ಅವರ ಹೆಸರುಗಳು ಸದಾ ಕಾಲಕ್ಕೆ ಬೆಳಗಿದುವು. ಅಲ್ಲಾಹನ ಮಾರ್ಗದಲ್ಲಿ ಜೀವ ನೀಡುವುದರಿಂದ ಅವರು ಅಮರರಾಗುವುದರೊಂದಿಗೆ ಜಮಾಅತಿನ ಜೀವಕ್ಕೂ ಅವರು ಕಾರಣಕರ್ತರಾಗುತ್ತಾರೆ. ಇವರೇ ಜೀವಂತವಾಗಿ ಬಾಕಿಯುಳಿದವರ ಜೀವನ ಮತ್ತು ಪ್ರಗತಿಗಳಿಗೆ ಮಾರ್ಗಗಳಾಗುತ್ತಾರೆ. ಹೀಗಿರುವಾಗ ಅವರನ್ನು ಹೇಗೆ ಮೃತರೆಂದು ಹೇಳಲು ಸಾಧ್ಯ? ಅಹ್ಮದಿಯಾ ಜಮಾಅತಿನಲ್ಲಿ ಈ ಜೀವತ್ಯಾಗದ ಪರಂಪರೆ ಹಝ್ರತ್ ಸಾಹಿಬ್‌ಝಾದ ಸಯ್ಯದ್ ಅಬ್ದುಲ್ಲತೀಫ್ ಶಹೀದ್(ರ)ರ ಜೀವತ್ಯಾಗದಿಂದ ಶುರುವಾಗಿತ್ತು. ಈ ಸೌಭಾಗ್ಯ ಸಾಮಾನ್ಯವಾಗಿ ಅಫ್ಘಾನಿಸ್ತಾನ, ಭಾರತ ಮತ್ತು ಪಾಕಿಸ್ತಾನದ ಅಹ್ಮದಿಯರಿಗೆ ಲಭಿಸುತ್ತಿತ್ತು. 2005ರಲ್ಲಿ ಆಫ್ರಿಕದಲ್ಲೂ ಕಾಂಗೋದ ಒಬ್ಬ ನಿಷ್ಠಾವಂತ ಅಹ್ಮದೀ ಕೇವಲ ಜಮಾಅತಿಗಾಗಿ ಜೀವತ್ಯಾಗವನ್ನು ಮಾಡಿದ್ದರು. ಆದರೆ ಕೆಲವು ದಿನಗಳ ಹಿಂದೆ ಆಫ್ರಿಕ ಭೂಖಂಡದ ದೇಶವಾದ ಬುರ್ಕಿನಾಫಾಸೋದಲ್ಲಿ ಪ್ರೇಮ, ನಿಷ್ಠೆ, ಪ್ರಾಮಾಣಿಕತೆ, ನಂಬಿಕೆ ಮತ್ತು ದೃಢವಿಶ್ವಾಸದಿಂದ ತುಂಬಿರುವ ಜಮಾಅತಿನ ಸದಸ್ಯರು ಒಟ್ಟಾಗಿ ತೋರಿಸಿದ ಮಾದರಿ ಅದ್ಭುತಕರವಾಗಿದೆ. ಅದೊಂದು ಸಮಾನತೆಯಿಲ್ಲದ ಮತ್ತು ಅತುಲ್ಯವಾದ ಮಾದರಿಯಾಗಿದೆ.

ಹಝ್ರತ್ ಮಸೀಹ್ ಮೌಊದ್(ಅ)ರ ಸತ್ಯತೆಯನ್ನು ನಿರಾಕರಿಸಿದರೆ ಮತ್ತು ಈಸಾ(ಅ) ಆಕಾಶದಲ್ಲಿ ಜೀವಂತರಾಗಿರುವರು ಹಾಗೂ ಆಕಾಶದಿಂದ ಇಳಿಯುವರು ಎಂದು ಸಮ್ಮತಿಸಿದರೆ ಜೀವಂತವಾಗಿ ಉಳಿಸುವೆವು ಎಂದು ಅವರೊಡನೆ ಹೇಳಲಾಗಿತ್ತು. ಆದರೆ ಪರ್ವತಗಳಿಗಿಂತ ಸುದೃಢ ನಂಬಿಕೆ ಮತ್ತು ದೃಢವಿಶ್ವಾಸದಿಂದ ತುಂಬಿದ ಜನರು ಹೀಗೆ ಉತ್ತರಿಸಿದರು: ಜೀವವಂತು ಇಂದಲ್ಲ ನಾಳೆ ಹೋಗುವುದು. ಅದನ್ನು ಉಳಿಸಲು ನಾವು ನಮ್ಮ ಸತ್ಯವಿಶ್ವಾಸವನ್ನು ಮಾರಲು ಸಾಧ್ಯವಿಲ್ಲ. ನಾವು ನೋಡಿದಂತಹ ಸತ್ಯವನ್ನು ನಮ್ಮಿಂದ ಬಿಡಲು ಸಾಧ್ಯವಲ್ಲ. ಹೀಗೆ ಒಬ್ಬರ ನಂತರ ಇನ್ನೊಬ್ಬರೊಂತೆ ತಮ್ಮ ಜೀವತ್ಯಾಗವನ್ನು ಮಾಡುತ್ತಾ ಹೋದರು.

ಅಹ್ಮದೀ ಹೆಂಗಸರು ಮತ್ತು ಮಕ್ಕಳು ಈ ದೃಶ್ಯವನ್ನು ನೋಡುತ್ತಿದ್ದರು. ಆದರೆ ಯಾರೂ ರೋದಿಸಲಿಲ್ಲ.

ಒಟ್ಟಿನಲ್ಲಿ ಹಝ್ರತ್ ಮಸೀಹ್ ಮೌಊದ್(ಅ)ರ ಕಾಲದ ಹಝ್ರತ್ ಸಾಹಿಬ್‌ಝಾದ ಅಬ್ದುಲ್ಲತೀಫ್(ರ)ರ ನಂತರ ಈ ಜನರು ಆಫ್ರಿಕದಲ್ಲಿ ಮಾತ್ರವಲ್ಲ ಅಹ್ಮದಿಯಾ ಲೋಕದಲ್ಲಿ ತಮ್ಮ ತ್ಯಾಗಗಳ ಒಂದು ಹೊಸ ಚರಿತ್ರೆಯನ್ನು ಬರೆದರು. ತಮ್ಮ ಲೌಕಿಕ ಜೀವಗಳನ್ನು ತ್ಯಾಗ ಮಾಡಿಕೊಂಡು ಸದಾ ಕಾಲದ ಜೀವನವನ್ನು ಗಳಿಸುವವರಾದರು. ಜೀವ, ಸಂಪತ್ತು, ಸಮಯವನ್ನು ತ್ಯಾಗ ಮಾಡುವುದರ ಪ್ರತಿಜ್ಞೆಯನ್ನು ಈಡೇರಿಸಿದರು. ಎಷ್ಟು ಉತ್ತಮವಾಗಿ ಈಡೇರಿಸಿದರು ಎಂದರೆ, ನಂತರ ಬಂದು, ಹಿಂದಿನವರಿಗಿಂತ ಮುಂದಾದರು. ಅಲ್ಲಾಹನ ಮಾರ್ಗದಲ್ಲಿ ತ್ಯಾಗಗಳನ್ನು ಮಾಡುವವರಿಗೆ ನೀಡಲಾದ ಸುವಾರ್ತೆಗಳಿಗೆ ಇವರಲ್ಲಿ ಪ್ರತಿಯೊಬ್ಬರನ್ನು ಅಲ್ಲಾಹನು ವಾರಸುದಾರರನ್ನಾಗಿ ಮಾಡಲಿ.

ಈಗ ಸಂಕ್ಷೇಪವಾಗಿ ಈ ಹುತಾತ್ಮರ ಜೀವಿತ ಸ್ಥಿತಿಗಳನ್ನು ಮುಂದಿರಿಸುತ್ತೇನೆ. ಅದರಿಂದ ಅವರ ವಿಶ್ವಾಸದ ದೃಢತೆಯ ಬಗ್ಗೆ ಗೊತ್ತಾಗುವುದು. ಲಭಿಸಿದ ವಿವರಗಳ ಪ್ರಕಾರ ಬುರ್ಕಿನಾಫಾಸೋದ ಡೋರಿ ಪಟ್ಟಣದಲ್ಲಿ ಹೊಸದಾಗಿ ನೆಲೆಸಲಾದ ಮಹ್‌ದಿಯಾಬಾದ್ ಎಂಬ ಸ್ಥಳದಲ್ಲಿ ಜಮಾಅತ್ ಇದೆ. ಜನವರಿ 11ರಂದು ಇಶಾದ ಸಮಯದಲ್ಲಿ 9 ಅಹ್ಮದೀ ಹಿರಿಯರನ್ನು ಮಸೀದಿಯ ಅಂಗಳದಲ್ಲಿ ಇತರ ಅಹ್ಮದಿಯರ ಮುಂದೆ ಇಸ್ಲಾಂ ಅಹ್ಮದಿಯ್ಯತ್ತನ್ನು ನಿರಾಕರಿಸದೇ ಇದ್ದ ಕಾರಣದಿಂದ ಒಬ್ಬೊಬ್ಬರನ್ನಾಗಿ ವಧಿಸಿ ಶಹೀದ್ ಮಾಡಲಾಯಿತು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್.**

ರಿಪೋರ್ಟಿನ ಪ್ರಕಾರ ಇಶಾದ ಸಮಯದಲ್ಲಿ ನಾಲ್ಕು ಮೋಟರ್‌ಸೈಕಲಿನಲ್ಲಿ ಆಯುಧಧಾರಿಗಳಾದ ಎಂಟು ಮಂದಿಗಳು ಮಸೀದಿಗೆ ಬಂದರು. ಈ ಆಯುಧಧಾರಿಗಳಾದ ಜನರು ಅಹ್ಮದಿಯಾ ಮಸೀದಿಗೆ ಬರುವುದಕ್ಕೆ ಮುಂಚಿತವಾಗಿ ಸಮೀಪದಲ್ಲಿರುವ ವಹಾಬಿಯರ ಮಸೀದಿಯಲ್ಲಿ ತಂಗಿದ್ದರು. ಅಲ್ಲಿ ಅವರು ಮಗ್ರಿಬಿನಿಂದ ಇಶಾದ ಸಮಯವನ್ನು ಕಳೆದರು. ಆದರೆ ಅಲ್ಲಿ ಯಾರನ್ನೂ ಏನೂ ಮಾಡಿರಲಿಲ್ಲ. ಏಕೆಂದರೆ ಅವರು ಕೇವಲ ಅಹ್ಮದಿಯರಿಗಾಗಿಯೇ ಬಂದಿದ್ದರು. ಈ ಭಯೋತ್ಪಾದಕರು ಅಹ್ಮದಿಯಾ ಮಸೀದಿಗೆ ಬಂದಾಗ ಇಶಾದ ಬಾಂಗ್ ಅಝಾನ್ ನೀಡಲಾಗುತ್ತಿತ್ತು. ನಮಾಝ್ ಮಾಡಲು ಕೆಲವರು ಬಂದಾಗಿದ್ದರು. ಉಳಿದವರು ಕೂಡ ಬರುತ್ತಿದ್ದರು. ಅಝಾನ್ ಮುಗಿದ ನಂತರ, ಸಹೋದರರು ಬೇಗನೇ ಮಸೀದಿಗೆ ಬನ್ನಿರಿ, ಕೆಲವರಿಗೆ ನಿಮ್ಮೊಡನೆ ಮಾತನಾಡಲಿಕ್ಕಿದೆ ಎಂದು ಮುಅಝ್ಝಿನ್‌ರಿಂದ ಘೋಷಿಸಲಾಯಿತು. ಜನರು ಮಸೀದಿಗೆ ಬಂದಾಗ ಮಸೀದಿಯ ಇಮಾಂ ಯಾರೆಂದು ಭಯೋತ್ಪಾದಕರು ಕೇಳಿದರು.

ನಾನು ಮಸೀದಿಯ ಇಮಾಂ ಆಗಿರುವೆನು ಎಂದು ಅಲ್‌ಹಾಜ್ ಇಬ್ರಾಹೀಂ ಬಿದೀಗ ಸಾಹಿಬ್ ಹೇಳಿದರು. ನಾಯಿಬ್ ಇಮಾಂ ಯಾರೆಂದು ಅವರು ಕೇಳಿದರು. ನಾನು ನಾಯಿಬ್ ಇಮಾಂ ಆಗಿರುವೆನು ಎಂದು ಉಮರ್ ಅಗ್ ಅಬ್ದುರ್ರಹ್ಮಾನ್ ಸಾಹಿಬ್ ಹೇಳಿದರು. ನಮಾಝ್ ನಿರ್ವಹಿಸಲು ಅನುಮತಿ ಕೊಡಿರಿ ಎಂದು ಭಯೋತ್ಪಾದಕರೊಡನೆ ನಮಾಝಿಗೆ ಸಮಯವಾದಾಗ ಇಮಾಂ ಇಬ್ರಾಹೀಂ ಸಾಹಿಬ್ ಹೇಳಿದರು. ಆದರೆ ಅವರು ನಮಾಝ್ ನಿರ್ವಹಿಸಲು ಅನುಮತಿ ನೀಡಲಿಲ್ಲ.

ಅಹ್ಮದಿಯಾ ಜಮಾಅತಿನ ವಿಶ್ವಾಸಗಳ ಬಗ್ಗೆ ಆಯುಧಧಾರಿಗಳು ಬಹಳಷ್ಟು ಪ್ರಶ್ನೆಗಳನ್ನು ಕೇಳಿದರು. ಅದರ ಉತ್ತರಗಳನ್ನು ಇಮಾಂ ಸಾಹಿಬ್‌ರು ಸಮಾಧಾನಚಿತ್ತರಾಗಿ ಮತ್ತು ಧೈರ್ಯದಿಂದ ನೀಡಿದರು. ನಾವು ಮುಸ್ಲಿಮರಾಗಿರುವೆವು ಮತ್ತು ಹಝ್ರತ್ ಪೈಗಂಬರ್(ಸ)ರನ್ನು ನಂಬುವವರಾಗಿರುವೆವು ಎಂದು ಇಮಾಂ ಸಾಹಿಬ್‌ರು ಹೇಳಿದರು.

ನಿಮ್ಮ ಸಂಬಂಧ ಯಾವ ಪಂಗಡದೊಂದಿಗೆ ಆಗಿದೆ ಎಂದು ಅವರು ಕೇಳಿದರು. ನಮ್ಮ ಸಂಬಂಧ ಅಹ್ಮದಿಯಾ ಮುಸ್ಲಿಂ ಜಮಾಅತಿನೊಂದಿಗೆ ಆಗಿದೆ ಎಂದು ಇಮಾಂ ಸಾಹಿಬ್ ಹೇಳಿದರು. ನಿಮ್ಮ ವಿಶ್ವಾಸದ ಪ್ರಕಾರ ಹಝ್ರತ್ ಈಸಾ(ಅ) ಜೀವಂತವಿರುವರೋ ಮೃತಪಟ್ಟಿರುವರೋ ಎಂದು ಭಯೋತ್ಪಾದಕರು ಕೇಳಿದರು. ಹಝ್ರತ್ ಈಸಾ(ಅ) ಮೃತಪಟ್ಟಿರುವರು ಎಂದು ಇಮಾಂ ಸಾಹಿಬ್ ಹೇಳಿದರು. ಭಯೋತ್ಪಾದಕರು ಹೇಳಿದರು: ಇಲ್ಲ, ಈಸಾ(ಅ) ಆಕಾಶದಲ್ಲಿ ಜೀವಂತರಾಗಿರುವರು. ಮರಳಿ ಬಂದು ದಜ್ಜಾಲ್‌ನನ್ನು ಕೊಲ್ಲುವರು ಮತ್ತು ಮುಸ್ಲಿಮರ ಸಮಸ್ಯೆಗಳನ್ನು ಬಗೆಹರಿಸುವರು. ಈ ಜನರು ಇದೇ ಪ್ರತೀಕ್ಷೆಯಲ್ಲಿ ಕುಳಿತುಕೊಂಡಿರುವರು. ಅನಂತರ ಇಮಾಂ ಮಹ್‌ದಿ ಯಾರೆಂದು ಅವರು ಕೇಳಿದರು. ಹಝ್ರತ್ ಮಿರ್ಝಾ ಗುಲಾಂ ಅಹ್ಮದ್ ಸಾಹಿಬ್ ಇಮಾಂ ಮಹ್‌ದಿ ಮತ್ತು ಮಸೀಹ್ ಮೌಊದ್ ಆಗಿ ಆಗಮಿಸಿರುವರು ಎಂದು ಇಮಾಂ ಸಾಹಿಬ್ ಹೇಳಿದರು. ಕೊನೆಗೆ ಆಯುಧಧಾರಿಗಳಾದ ಈ ಜನರು ಹೇಳಿದರು: ಅಹ್ಮದಿಯರು ಮುಸ್ಲಿಮರಲ್ಲ. ಬದಲಾಗಿ ಅಪ್ಪಟ ಕಾಫಿರ್‌ಗಳಾಗಿರುವರು.

ಅನಂತರ ಈ ಭಯೋತ್ಪಾದಕರು ಇಮಾಂ ಸಾಹಿಬ್‌ರನ್ನು ಮಸೀದಿಯೊಂದಿಗೆ ಸೇರಿಕೊಂಡಿದ್ದ ಟೈಲರಿಂಗ್ ಸೆಂಟರಿಗೆ ಕೊಂಡು ಹೋದರು. ಅಲ್ಲಿ ಹಝ್ರತ್ ಮಸೀಹ್ ಮೌಊದ್(ಅ) ಮತ್ತು ಖಲೀಫರ ಫೋಟೋಗಳನ್ನು ಇರಿಸಲಾಗಿದ್ದುವು. ಆ ಫೋಟೋಗಳನ್ನು ತೆಗೆದುಕೊಂಡು ಇಮಾಂ ಸಾಹಿಬ್‌ರ ಜೊತೆಗೆ ಅವರು ಮಸೀದಿಗೆ ಮರಳಿ ಬಂದರು. ಅನಂತರ ಒಂದೊಂದು ಫೋಟೋಗಳ ಕುರಿತು ಇಮಾಂ ಸಾಹಿಬ್‌ರೊಡನೆ ಪ್ರಶ್ನೆಗಳನ್ನು ಕೇಳಿದರು. ಹಝ್ರತ್ ಮಸೀಹ್ ಮೌಊದ್(ಅ) ಮತ್ತು ಖಲೀಫರ ಹೆಸರುಗಳನ್ನು ಮತ್ತು ಕಿರುಪರಿಚಯವನ್ನು ಇಮಾಂ ಸಾಹಿಬ್ ನೀಡಿದರು. ಹಝ್ರತ್ ಮಸೀಹ್ ಮೌಊದ್(ಅ) ಇಮಾಂ ಮಹ್‌ದಿಯಾಗಿ ಮತ್ತು ಮಸೀಹ್ ಮೌಊದ್ ಆಗಿ ಆಗಮಿಸಿರುವರು ಎಂದು ಇಮಾಂ ಸಾಹಿಬ್ ಹೇಳಿದರು. ಮಿರ್ಝಾ ಗುಲಾಂ ಅಹ್ಮದ್ ಸಾಹಿಬ್‌ರ ಪ್ರವಾದಿತ್ವ ವಾದ ಸುಳ್ಳೆಂದು ಭಯೋತ್ಪಾದಕರು ಹೇಳಿದರು. ನಊದುಬಿಲ್ಲಾಹ್. ಅನಂತರ ಮಸೀದಿಯಲ್ಲಿ ಇದ್ದ ಅಹ್ಮದಿಯರಲ್ಲಿ ಮಕ್ಕಳ, ಯುವಕರ, ಹಿರಿಯರ ಬೇರೆ ಬೇರೆ ಗ್ರೂಪ್‌ಗಳನ್ನು ಮಾಡಿದರು. ಆ ಸಮಯದಲ್ಲಿ ಮಸೀದಿಯಲ್ಲಿ ಮಕ್ಕಳು, ಯುವಕರು, ಹಿರಿಯರು ಮತ್ತು ಮಹಿಳೆಯರು ಸಮೇತ ಅರುವತ್ತು ಎಪ್ಪತ್ತು ಜನರು ಇದ್ದರು. ಹೆಂಗಸರ ಭಾಗದಲ್ಲಿ ನಮಾಝಿಗಾಗಿ ಹತ್ತರಷ್ಟು ಲಜ್ನ ಇದ್ದರು. ವಯಸ್ಸಿನ ಆಧಾರದಲ್ಲಿ ಗ್ರೂಪ್ಸ್‌ಗಳನ್ನು ವಿಂಗಡಿಸಿದ ನಂತರ ಮಸೀದಿಯ ಅಂಗಳಕ್ಕೆ ಹೋಗಲು ಭಯೋತ್ಪಾದಕರು ಹಿರಿವಯಸ್ಸಿನವರೊಡನೆ ಹೇಳಿದರು. ಆ ಸಮಯದಲ್ಲಿ 10 ಅನ್ಸಾರ್‌ಗಳು ಮಸೀದಿಯಲ್ಲಿ ಇದ್ದರು. ಅವರಲ್ಲಿ ಒಬ್ಬರು ಅಂಗವಿಕಲರಾಗಿದ್ದರು. ಆ ವ್ಯಕ್ತಿ ಕೂಡ ಇತರ ಅನ್ಸಾರ್ ಸಹೋದರರೊಡನೆ ಎದ್ದು ಹೊರಗೆ ಹೋಗಲು ತಯಾರಾದಾಗ, ನೀವು ಯಾವುದೇ ಕೆಲಸಕ್ಕೆ ಬಾರದವರಾಗಿರುವಿರಿ. ಮಸೀದಿಯಲ್ಲೇ ಕುಳಿತುಕೊಳ್ಳಿರಿ ಎಂದು ಹೇಳಿದರು. ಉಳಿದ 9 ಮಂದಿಗಳನ್ನು ಅಂಗಳಕ್ಕೆ ಕೊಂಡು ಹೋದರು. ಮಸೀದಿಯ ಅಂಗಳದಲ್ಲಿ ನಿಲ್ಲಿಸಿಕೊಂಡು ಇಮಾಂ ಇಬ್ರಾಹೀಂ ಬದೀಗ ಸಾಹಿಬ್‌ರೊಡನೆ ಭಯೋತ್ಪಾದಕರು ಹೇಳಿದರು: ನೀವು ಅಹ್ಮದಿಯ್ಯತ್ ಬಿಡುವುದಾದರೆ ನಾವು ನಿಮ್ಮನ್ನು ಉಳಿಸುವೆವು. ಇಮಾಂ ಸಾಹಿಬ್ ಹೇಳಿದರು: ನನ್ನ ತಲೆಯನ್ನು ಕೊಯ್ಯಬೇಕಾದರೆ ಕೊಯ್ಯಿರಿ, ಆದರೆ ನಾನು ಅಹ್ಮದಿಯ್ಯತ್ ಉಪೇಕ್ಷಿಸುವುದಿಲ್ಲ. ಯಾವ ಸತ್ಯವನ್ನು ನಾನು ಗಳಿಸಿರುವೆನೋ ಅದರಿಂದ ಹಿಂದೆ ಸರಿಯಲು ಸಾಧ್ಯವಲ್ಲ. ಸತ್ಯವಿಶ್ವಾಸದ ಮುಂದೆ ಜೀವಕ್ಕೆ ಇರುವ ಬೆಲೆಯಾದರೂ ಏನು?

ಭಯೋತ್ಪಾದಕರು ಇಮಾಂ ಸಾಹಿಬ್‌ರ ಕುತ್ತಿಗೆಯಲ್ಲಿ ದೊಡ್ಡ ಚಾಕುವನ್ನು ಇರಿಸಿದರು. ಅವರನ್ನು ಮಲಗಿಸಿ ಅವರ ತಲೆಯನ್ನು ಕೊಯ್ಯಲು

ಬಯಸಿದರು. ಆದರೆ ಇಮಾಂ ಸಾಹಿಬ್ ಹೇಳಿದರು: ಮಲಗಿ ಸಾಯುವುದಕ್ಕಿಂತ ನಿಂತುಕೊಂಡು ಸಾಯುವುದನ್ನು ನಾನು ಇಷ್ಟಪಡುವೆನು. ಆಗ ಅವರು ಇಮಾಂ ಸಾಹಿಬ್‌ರನ್ನು ಗುಂಡು ಹಾರಿಸಿಕೊಂಡು ಶಹೀದ್ ಮಾಡಿದರು.

ಹೀಗೆ ಮೊದಲ ಶಹಾದತ್ ಇಮಾಂ ಅಲ್‌ಹಾಜ್ ಇಬ್ರಾಹೀಂ ಸಾಹಿಬ್‌ರದ್ದಾಗಿತ್ತು.

ಇಮಾಂ ಸಾಹಿಬ್‌ರನ್ನು ಕ್ರೂರವಾಗಿ ಶಹೀದ್ ಮಾಡಿದ ನಂತರ, ಉಳಿದ ಜನರು ಭಯಗೊಂಡು ತಮ್ಮ ವಿಶ್ವಾಸದಿಂದ ಹಿಂದೆ ಸರಿಯುವರು ಎಂದು ಭಯೋತ್ಪಾದಕರು ಭಾವಿಸಿದರು. ಹೀಗೆ ಅವರು ಮುಂದಿನ ಹಿರಿಯ ಅಹ್ಮದಿಯೊಡನೆ ಹೇಳಿದರು: ನೀವು ಅಹ್ಮದಿಯ್ಯತ್ತನ್ನು ಬಿಡುತ್ತೀರೋ ಅಥವಾ ಇಮಾಂ ಸಾಹಿಬ್‌ರ ಅವಸ್ಥೆ ನಿಮ್ಮದೂ ಆಗಬೇಕೇ?

ಆಗ ಆ ಹಿರಿಯ ವ್ಯಕ್ತಿ ಬಹಳ ಧೈರ್ಯ ಮತ್ತು ಕೆಚ್ಚೆದೆಯಿಂದ ಹೇಳಿದರು: ಅಹ್ಮದಿಯ್ಯತ್ತನ್ನು ನಿರಾಕರಿಸಲು ಸಾಧ್ಯವಲ್ಲ. ಯಾವ ಮಾರ್ಗದಲ್ಲಿ ಹೋಗಿಕೊಂಡು ಇಮಾಂ ಸಾಹಿಬ್ ಜೀವತ್ಯಾಗ ಮಾಡಿದರೋ ನಾವು ಸಹ ಅದೇ ಮಾರ್ಗದಲ್ಲಿ ಚಲಿಸುವೆವು. ಹೀಗೆ ಅವರನ್ನು ಕೂಡ ಗುಂಡು ಹಾರಿಸಿ ಶಹೀದ್ ಮಾಡಲಾಯಿತು.

ಉಳಿದ ವ್ಯಕ್ತಿಗಳೊಡನೆ ಒಬ್ಬೊಬ್ಬರಾಗಿ ಭಯೋತ್ಪಾದಕರು ಹೇಳಿದರು: ಇಮಾಂ ಮಹ್‌ದಿಯನ್ನು ನಿರಾಕರಿಸಿರಿ, ಅಹ್ಮದಿಯ್ಯತ್ತನ್ನು ಬಿಟ್ಟುಬಿಡಿರಿ. ಹಾಗಾದರೆ ಅವರೊಡನೆ ಏನೂ ಮಾಡಲಾರೆವು, ಜೀವಂತವಾಗಿ ಬಿಟ್ಟುಬಿಡುವೆವು.

ಎಲ್ಲ ಅಹ್ಮದೀ ಹಿರಿಯರು ಪರ್ವತದಂತಹ ಸ್ಥಿರಚಿತ್ತತೆಯನ್ನು ಪ್ರಕಟಿಸುತ್ತಾ ಧೈರ್ಯದಿಂದ ಶಹಾದತನ್ನು ಅಪ್ಪಿಕೊಳ್ಳಲು ತಯಾರಾದರು. ಯಾರೂ ಕಿಂಚಿತ್ತೂ ದೌರ್ಬಲ್ಯವನ್ನು ತೋರಿಸಲೂ ಇಲ್ಲ, ಅಹ್ಮದಿಯ್ಯತ್ತನ್ನು ಬಿಡಲೂ ಇಲ್ಲ. ಒಬ್ಬರ ನಂತರ ಇನ್ನೊಬ್ಬರೊಂತೆ ಶಹೀದ್ ಆಗುತ್ತಾ ಹೋದರು. ಆದರೆ ಯಾರ ವಿಶ್ವಾಸವು ಚಂಚಲಗೊಳ್ಳಲಿಲ್ಲ. ಎಲ್ಲರೂ ಮುಂದುಮುಂದಾಗಿ ಸುದೃಢವಾದ ಸತ್ಯವಿಶ್ವಾಸ ಮತ್ತು ಧೈರ್ಯವನ್ನು ಪ್ರಕಟಿಸಿದರು. ಸತ್ಯವಿಶ್ವಾಸದ ಧ್ವಜವನ್ನು ಮೇಲೆತ್ತಿಕೊಂಡು ಅಲ್ಲಾಹನ ಸನ್ನಿಧಿಯಲ್ಲಿ ತಮ್ಮ ಜೀವಗಳನ್ನು ಸಮರ್ಪಿಸಿದರು.

ಪ್ರತಿಯೊಬ್ಬ ಶಹೀದ್‌ರ ಮೇಲೆ ಕನಿಷ್ಠ ಮೂರು ಗುಂಡುಗಳನ್ನು ಹಾರಿಸಲಾಗಿದ್ದುವು. ಈ ಒಂಬತ್ತು ಶಹೀದ್‌ರಲ್ಲಿ ಇಬ್ಬರು ಅವಳಿ ಜವಳಿ ಸಹೋದರರು ಕೂಡ ಇದ್ದರು. 8 ವ್ಯಕ್ತಿಗಳನ್ನು ಶಹೀದ್ ಮಾಡಿದ ನಂತರ ಕೊನೆಗೆ 44 ವಯಸ್ಸಿನ ಉಮರ್ ಅಗ್ ಅಬ್ದುರ್ರಹ್ಮಾನ್ ಸಾಹಿಬ್ ಉಳಿದರು. ವಯಸ್ಸಲ್ಲಿ ಎಲ್ಲ ಶಹೀದರಿಗಿಂತ ಕಿರಿಯವರಾಗಿದ್ದರು. ಭಯೋತ್ಪಾದಕರು ಹೇಳಿದರು: ನೀವು ಯುವಕ, ಅಹ್ಮದಿಯ್ಯತನ್ನು ನಿರಾಕರಿಸಿಕೊಂಡು ತಮ್ಮ ಜೀವವನ್ನು ಉಳಿಸಿರಿ. ಆಗ ಅವರು ಬಹಳ ಧೈರ್ಯದಿಂದ ಹೇಳಿದರು: ಯಾವ ಮಾರ್ಗದಲ್ಲಿ ನಡೆಯುತ್ತಾ ನನ್ನ ಹಿರಿಯರು ಸತ್ಯಕ್ಕಾಗಿ ಜೀವತ್ಯಾಗ ಮಾಡಿದರೋ ನಾನು ಕೂಡ ಇಮಾಂ ಸಾಹಿಬ್ ಮತ್ತು ಹಿರಿಯರ ಹೆಜ್ಜೆಗುರುತುಗಳನ್ನು ಹಿಂಬಾಲಿಸುತ್ತಾ ಸತ್ಯವಿಶ್ವಾಸಕ್ಕಾಗಿ ತಮ್ಮ ಜೀವತ್ಯಾಗ ಮಾಡಲು ತಯಾರಾಗಿರುವೆನು. ಆಗ ಅವರನ್ನು ಕೂಡ ಕ್ರೂರವಾಗಿ ಶಹೀದ್ ಮಾಡಲಾಯಿತು.

ಹಝ್ರ‌ತ್ ಸಾಹಿಬ್‌ಝಾದ ಅಬ್ದುಲ್ಲತೀಫ್ ಶಹೀದ್ ಸಾಹಿಬ್‌ರ ಬಗ್ಗೆ ಪ್ರಸ್ತಾಪಿಸುತ್ತಾ ತಧ್‌ಕಿರತುಲ್ ಶಹಾದತೈನಿನಲ್ಲಿ ಒಂದು ಕನಸಿನ ಪ್ರಸ್ತಾಪವನ್ನು ಪುಸ್ತಕದ ಕೊನೆಯಲ್ಲಿ ಹಝ್ರ‌ತ್ ಮಸೀಹ್ ಮೌಊದ್(ಅ) ಪ್ರಸ್ತಾಪಿಸಿರುವರು. ಅವರು ಹೇಳಿದರು: ಅಲ್ಲಾಹನು ಅವರಂತಹ ಅನೇಕ ಪ್ರತಿನಿಧಿಗಳನ್ನು ಸೃಷ್ಟಿಸುವನು. (ತಝ್‌ಕಿರತುಶ್ಶಹದತೈನ್, ರೂಹಾನಿ ಖಝಾಈನ್, ಸಂಪುಟ–20, ಪುಟ–76)

ಹಝ್ರ‌ತ್ ಮಸೀಹ್ ಮೌಊದ್(ಅ) ಕಂಡ ಕನಸನ್ನು ಅವರು ಹೀಗೆ ವ್ಯಾಖ್ಯಾನಿಸಿದ್ದರು. ಸಾಹಿಬ್‌ಝಾದ ಅಬ್ದುಲ್ಲತೀಫ್ ಸಾಹಿಬ್‌ರ ನಂತರ ಅಲ್ಲಾಹನು ಅವರಂತಹ ಅನೇಕ ಪ್ರತಿನಿಧಿಗಳನ್ನು ಉಂಟುಮಾಡುವನು ಎಂದು ನನಗೆ ಪ್ರತೀಕ್ಷೆ ಇದೆ.

ಇಂದು ಆಫ್ರಿಕದ ನಿವಾಸಿಗಳು ಒಟ್ಟಾಗಿ ಈ ಮಾದರಿಯನ್ನು ತೋರಿಸಿದರು ಮತ್ತು ಅವರ ಸರಿಯಾದ ಪ್ರತಿನಿಧಿಗಳಾದರು.

ಭಯೋತ್ಪಾದಕರು ಮಸೀದಿಯಲ್ಲಿ ಬಂದು ಪ್ರಶ್ನೆಗಳನ್ನು ಕೇಳಿದ್ದು, ವಿಶ್ವಾಸದ ಬಗ್ಗೆ ವಿಶದವಾಗಿ ಚರ್ಚೆ ಮಾಡಿದ್ದು ಎಲ್ಲ ಕಾರ್ಯಗಳನ್ನು ಮಾಡಿಕೊಂಡು ಮಸೀದಿಯಿಂದ ಹೋದದ್ದು ಎಲ್ಲವು ಸೇರಿ ಸುಮಾರು ಒಂದುವರೆ ಗಂಟೆ ಸಮಯವಾಗಿತ್ತು. ಈ ಸಂದರ್ಭದಲ್ಲಿ ಮಕ್ಕಳೂ ಉಳಿದ ವ್ಯಕ್ತಿಗಳೂ ಯಾವ ನೋವು ಮತ್ತು ಕಷ್ಟದಿಂದ ಸಮಯ ಕಳೆದರೋ ಅದರ ಅಂದಾಜನ್ನು ಮಾಡಬಹುದಾಗಿದೆ. ಅವರ ಮುಂದೆ ಅವರ ಹಿರಿಯರನ್ನು ಶಹೀದ್ ಮಾಡಲಾಗುತ್ತಿತ್ತು. ಮಸೀದಿಯಿಂದ ಹೊರಟು ಭಯೋತ್ಪಾದಕರು ಬೇಗನೇ ಪರಾರಿಯಾಗಿರಲಿಲ್ಲ. ಬದಲಾಗಿ ಸಾಕಷ್ಟು ಸಮಯ ಮಹ್‌ದಿಯಾಬಾದಿನಲ್ಲೇ ಇದ್ದರು. ಆಯುಧಧಾರಿಗಳಾದ ಭಯೋತ್ಪಾದಕರು ಮಸೀದಿಯಲ್ಲಿ ಇದ್ದ ಜನರನ್ನು ಬೆದರಿಸಿದರು. ನೀವು ಎಲ್ಲರೂ ಅಹ್ಮದಿಯ್ಯತ್ ಬಿಟ್ಟರೆ ನಿಮಗೆ ಉತ್ತಮ, ನಾವು ಪುನಃ ಬರುವೆವು. ನೀವು ಅಹ್ಮದಿಯ್ಯತ್ತನ್ನು ಉಪೇಕ್ಷಿಸದಿದ್ದರೆ ಅಥವಾ ಯಾರಾದರೂ ಮಸೀದಿಯನ್ನು ತೆರೆಯಲು ಪ್ರಯತ್ನಿಸಿದರೆ ನಾವು ನಿಮ್ಮೆಲ್ಲರನ್ನು ಮುಗಿಸುವೆವು ಎಂದು ಭಯೋತ್ಪಾದಕರು ಹೇಳಿದರು.

ಈ ಮಹ್‌ದಿಯಾಬಾದಿನ ಜಮಾಅತಿನ ಆರಂಭ ಯಾವಾಗ ಆಯಿತು ಎಂಬುದರ ಬಗ್ಗೆ ಹೀಗೆ ಬರೆಯಲಾಗಿದೆ. 1998ರ ಕೊನೆಯಲ್ಲಿ ಇಲ್ಲಿ ವ್ಯವಸ್ಥಾಪಿತವಾದ ಮಿಶನ್ ಆರಂಭವಾಗಿತ್ತು. ವೇಗವಾಗಿ ಜಮಾಅತ್ ಅಭಿವೃದ್ಧಿಗೊಂಡಿತು. 1999ರಲ್ಲಿ ತಕ್‌ನೇವೇಲ್ ಗ್ರಾಮದ ಅನೇಕರು ಅಹ್ಮದಿಯರಾದರು ಮತ್ತು ಒಂದು ನಿಷ್ಠಾವಂತ ಜಮಾಅತ್ ಅಲ್ಲಿ ಸ್ಥಾಪನೆಗೊಂಡಿತು. ಈ ಗ್ರಾಮದ ಇಮಾಂ ಅಲ್‌ಹಾಜ್ ಇಬ್ರಾಹೀಂ ಬದೀಗ ಸಾಹಿಬ್‌ರು ಅಹ್ಮದಿಯ್ಯತ್ ಸ್ವೀಕಾರ ಮಾಡುವುದಕ್ಕೆ ಮುಂಚಿತವಾಗಿ ಅವರು ಈ ಪ್ರದೇಶದ ಅತಿ ದೊಡ್ಡ ವಹಾಬಿ ಇಮಾಂ ಆಗಿದ್ದರು. ಅವರು ಬಹಳ ಅನ್ವೇಷಣೆ ನಡೆಸಿದ ನಂತರ ಬೈಅತ್ ಮಾಡಿದ್ದರು. ಬೈಅತ್ತಿನ ನಂತರ ಒಬ್ಬ ಆವೇಶಭರಿತ ಪ್ರಚಾರಕ, ನಿರ್ಭೀತ ಮುಬಲ್ಲಿಗ್, ಶಕ್ತಿಶಾಲಿ ಸಿಪಾಯಿ ಆಗಿ ಮುಂದೆ ಬಂದರು. ಅವರು ಬೈಅತ್ ಮಾಡಿದಾಗ ಅವರ ಸ್ನೇಹಿತರಾದ ಕೆಲವು ಪಂಡಿತರು ಕೇಳಿದರು: ನೀವೇಕೆ ಅಹ್ಮದಿಯ್ಯತ್ತನ್ನು ನಂಬಲು ಹೋಗುತ್ತೀರಿ? ಅವರು ಹೇಳಿದರು: ಚಿನ್ಹವನ್ನು ನಾನು ನೋಡಿರುವಾಗ, ಅಲ್ಲಾಹನು ನಂಬಲು ಆದೇಶವನ್ನು ನೀಡಿರುವಾಗ, ಹಝ್ರ‌ತ್ ಪೈಗಂಬರ್(ಸ)ರ ಹದೀಸುಗಳಲ್ಲಿರುವ ಭವಿಷ್ಯವಾಣಿಗಳು ಈಡೇರುತ್ತಿರುವಾಗ, ಪವಿತ್ರ ಖುರ್‌ಆನ್ ಅವರ ಸತ್ಯತೆಗೆ ಸಾಕ್ಷ್ಯವಹಿಸುತ್ತಿರುವಾಗ ನಾನು ಹೇಗೆ ನಿರಾಕರಿಸಲಿ ಮತ್ತು ಅದರಿಂದ ದೂರವಿರಲು ಸಾಧ್ಯ?

ಹೇಗಿದ್ದರೂ ಇಮಾಂ ಸಾಹಿಬ್ ಬಹಳ ಅರಿವುಳ್ಳ ವ್ಯಕ್ತಿಯಾಗಿದ್ದರು. ಈ ಗ್ರಾಮದ ಎಲ್ಲರೂ ತಮಾಶಿಕ್ ಗೋತ್ರದವರಾಗಿರುವರು ಮತ್ತು ತಮಾಶಿಕ್ ಭಾಷೆಯಲ್ಲಿ ಮಾತನಾಡುತ್ತಾರೆ. ತಮಾಷಿಕ್ ಜನರ ಸಂಖ್ಯೆ ಎರಡು ಲಕ್ಷವೆಂದು ಹೇಳಲಾಗುತ್ತದೆ. ಇವರು ಬುರ್ಕಿನಾಫಾಸೋ, ನೈಜೀರಿಯ, ಮಾಲಿ ಮತ್ತು ಅಲ್‌ಜೀರಿಯದಲ್ಲಿ ನೆಲೆಸಿರುವರು. ಇಲ್ಲಿಯ ಶೇಕಡ 99.9 ಜನರು ಮುಸ್ಲಿಮರಾಗಿರುವರು. ಹೆಚ್ಚಾಗಿ ತೀವ್ರ ವಹಾಬಿ ವಿಶ್ವಾಸವನ್ನು ಹೊಂದಿರುವರು. ತಮಾಶಿಕ್ ಜನರಲ್ಲಿ ಬಹಳ ಕಡಿಮೆ ಜನರು ಮಾತ್ರ ಅಹ್ಮದಿಯಾಗಿರುವರು. ಆದರೆ ಬುರ್ಕಿನಾಫಾಸೋದಲ್ಲಿ ಮಹ್‌ದಿಯಾಬಾದಿನ ತಮಾಶಿಕ್ ನಿವಾಸಿಗಳು ಹಝ್ರ‌ತ್ ಮಸೀಹ್ ಮೌಊದ್(ಅ)ರನ್ನು ಬೈಅತ್ ಮಾಡುವುದರಲ್ಲಿ ಮುಂದಾಗಿರುವರು. ಈಗ ಇಷ್ಟು ದೊಡ್ಡ ತ್ಯಾಗವನ್ನು ಮಾಡಿಕೊಂಡು ತಮ್ಮದಾದ ವಿಶಿಷ್ಟ ಪದವಿಯನ್ನು ಗಳಿಸುವರು.

2004ರಲ್ಲಿ ಈ ಪ್ರದೇಶದಲ್ಲಿ ಚಿನ್ನದ ಬಹಳ ದೊಡ್ಡ ಭಂಡಾರ ಕಂಡುಹಿಡಿಯಲಾಯಿತು. ಆಗ ಮೈನಿಂಗ್ ಕಂಪೆನಿಯವರು ಈ ಗ್ರಾಮಕ್ಕೆ ಸಮೀಪವೇ ಇರುವ ಒಂದು ಜಾಗದಲ್ಲಿ ಮನೆಗಳನ್ನು ನಿರ್ಮಿಸಿ ಜನರನ್ನು ಅಲ್ಲಿಗೆ ಸ್ಥಳಾಂತರಿಸಿದರು. ಹೀಗೆ ಸ್ಥಳಾಂತರಗೊಂಡ ಜನರಲ್ಲಿ ಬಹುತೇಕರು ಅಹ್ಮದಿಯರಾಗಿದ್ದರು. ಕೆಲವೇ ಜನರು ಇತರರಾಗಿದ್ದರು. ಹೊಸ ಗ್ರಾಮವು ಬಹುತೇಕ ಅಹ್ಮದಿಯರದ್ದೇ ಆಗಿತ್ತು. ಈ ಗ್ರಾಮಕ್ಕೆ ಹೊಸ ಹೆಸರನ್ನು ಇರಿಸಬೇಕು ಎಂದು ಇಬ್ರಾಹೀಂ ಸಾಹಿಬ್‌ರು ಸಲಹೆ ನೀಡಿದರು. ಈ ಗ್ರಾಮಕ್ಕೆ ಹೊಸ ಹೆಸರು ಇರಿಸಲು ಇಬ್ರಾಹೀಂ ಸಾಹಿಬ್‌ರು ನನಗೆ ಪತ್ರ ಬರೆದರು. ಹೀಗೆ ಆ ಗ್ರಾಮಕ್ಕೆ ಮಹ್‌ದಿಯಾಬಾದ್ ಎಂದು ಹೆಸರಿಸಲಾಯಿತು. 2008ರಲ್ಲಿ ಇಲ್ಲಿ IAAAE ಯ ಅಧೀನದಲ್ಲಿ ಮಾಡೆಲ್ ವಿಲೇಜ್ ಸಹ ಮಾಡಲಾಯಿತು. ನೀರು ಮತ್ತು ವಿದ್ಯುತ್ತಿನ ಸೌಕರ್ಯಗಳನ್ನು ಒದಗಿಸಲಾಯಿತು. ಇದು ಲೋಕದಲ್ಲೇ ಮೊದಲ ಮಾಡಲ್ ವಿಲೇಜ್ ಪ್ರೊಜೆಕ್ಟ್ ಆಗಿತ್ತು. ಇದರ ಅಧೀನದಲ್ಲಿ ವಿದ್ಯುತ್, ನೀರು, ಟೈಲರಿಂಗ್ ಸ್ಕೂಲ್ ಮುಂತಾದ ಸೌಕರ್ಯಗಳನ್ನು ಒದಗಿಸಲಾಯಿತು.

ಅವರ ತದ್‌ಫೀನ್ ಬಗ್ಗೆ ವರದಿಗಾರರು ಹೇಳಿದರು: ಭಯೋತ್ಪಾದಕರು ಮಸೀದಿಯಲ್ಲಿ ಒಂದೂವರೆ ಗಂಟೆಗಳ ಕಾಲ ಕಳೆದು ಭಯದ ವಾತಾವರಣವನ್ನು ಸೃಷ್ಟಿಸಿದ್ದರು ಮತ್ತು ಶಹೀದ್ ಆದವರ ಶವಗಳನ್ನು ರಾತ್ರಿಯಿಡೀ ಅದೇ ಸ್ಥಳದಲ್ಲಿ ಬಿದ್ದಿದ್ದವು. ಭಯೋತ್ಪಾದಕರು ಗ್ರಾಮದಿಂದ ಹೊರಗೆ ಹೋಗಲಿಲ್ಲ ಮತ್ತು ಯಾರಾದರೂ ಶವವನ್ನು ಎತ್ತಲು ಹೋದರೆ, ಅವರನ್ನೂ ಸಹ ಕೊಲ್ಲುತ್ತಾರೆ ಎಂಬ ಭಯವೂ ಇತ್ತು. ಸಮೀಪದಲ್ಲಿ ಸೇನೆಯ ಡೇರೆಯೂ ಇತ್ತು. ಘಟನೆಯ ಬಗ್ಗೆ ಅವರಿಗೆ ಮಾಹಿತಿ ನೀಡಲಾಯಿತು ಆದರೆ ಅಲ್ಲಿಂದ ಯಾರೂ ಬರಲಿಲ್ಲ ಅಥವಾ ಭದ್ರತಾ ಏಜೆನ್ಸಿಗಳಿಂದ ಯಾರೂ ಬೆಳಿಗ್ಗೆ ತನಕ ತಲುಪಲಿಲ್ಲ. ನಂತರ ಶಹೀದ್ ಆದವರನ್ನು ಜನವರಿ 12 ರಂದು ಬೆಳಿಗ್ಗೆ 10 ಗಂಟೆಗೆ ಮೆಹದಿಯಾಬಾದ್‌ನಲ್ಲಿ ದಫನ್ ಮಾಡಲಾಯಿತು.

ಈಗ ಪ್ರತಿಯೊಬ್ಬ ಶಹೀದರ ಸಂಕ್ಷೇಪವಾದ ಪರಿಚಯವನ್ನು ನಾನು ಕೊಡುತ್ತೇನೆ.

ಇಮಾಮರಾದ ಅಲ್‌ಹಾಜ್ ಇಬ್ರಾಹೀಂ ಬದೀಗ ಸಾಹಿಬ್‌ರ ಬಗ್ಗೆ ಮೊದಲು ಪ್ರಸ್ತಾಪಿಸಲಾಗಿತ್ತು. ಶಹಾದತಿನ ಸಮಯದಲ್ಲಿ ಅವರಿಗೆ 68 ವರ್ಷ ಪ್ರಾಯವಾಗಿತ್ತು. ಶಿಕ್ಷಣಕ್ಕಾಗಿ ಸೌದಿ ಅರೇಬಿಯದಲ್ಲಿ ತಂಗಿದ್ದರು. ತಮಾಶಿಕ್ ಭಾಷೆಯ ಬಹಳ ದೊಡ್ಡ ಆಲಿಂ ಆಗಿದ್ದರು. ಆ ಭಾಷೆಯ ಪವಿತ್ರ ಖುರ್‌ಆನಿನ ವ್ಯಾಖ್ಯಾನಗಾರರು ಸಹ ಆಗಿದ್ದರು. 1999ರಲ್ಲಿ ಬೈಅತ್ ಮಾಡಿದ್ದರು. ಅಹ್ಮದಿಯಾಗುವುದಕ್ಕೆ ಮುಂಚೆ ಅವರು ಅನೇಕ ಗ್ರಾಮಗಳ ಸರದಾರರಾಗಿದ್ದರು. ಈ ಪ್ರದೇಶದ ದೊಡ್ಡ ದೊಡ್ಡ ಪಂಡಿತರು ಅವರ ಬಳಿ ಕುಳಿತುಕೊಂಡು ಅರಿವು ಗಳಿಸುವುದನ್ನು ಹಿರಿಮೆ ಎಂದು ಭಾವಿಸುತ್ತಿದ್ದರು. ವರ್ಷದಲ್ಲಿ ಕನಿಷ್ಠ ಒಂದು ಬಾರಿ ಪೂರ್ತಿ ಪ್ರದೇಶದ ಪಂಡಿತರು ಮತ್ತು ಇಮಾಮರು ಅವರ ಬಳಿಗೆ ಬಂದು ತಂಗುತ್ತಿದ್ದರು ಮತ್ತು ಅವರಿಂದ ಪ್ರಯೋಜನ ಪಡೆಯುತ್ತಿದ್ದರು. ಇವರ ಸಂಖ್ಯೆ ಐನ್ನೂರು ತನಕ ಇರುತ್ತಿತ್ತು ಮತ್ತು ಒಂದು ವಾರದ ವರೆಗೆ ತಂಗುತ್ತಿದ್ದರು. ಪ್ರದೇಶದ ಪಂಡಿತರ ಮತ್ತು ಇಮಾಮರ ವಾರ್ಷಿಕ ಮೀಟಿಂಗ್ ಅವರ ಬಳಿ ಆಗುತ್ತಿತ್ತು ಎಂದು ಹೇಳಬಹುದಾಗಿದೆ. ಅವರ ಒಬ್ಬ ಶಿಷ್ಯರು ಹೇಳುತ್ತಾರೆ: ಆ ದಿನಗಳಲ್ಲಿ ಇಮಾಂ ಸಾಹಿಬ್‌ರು ಹೇಳುತ್ತಿದ್ದರು. ಈಗ ಸತ್ಯ ಪ್ರಕಟವಾಗಿಲ್ಲ. ಏಕೆಂದರೆ ಸತ್ಯವನ್ನು ಅಂಗೀಕರಿಸುವವರು ಕಡಿಮೆಯಾಗಿರುತ್ತಾರೆ. ಈಗ ನೂರಾರು ಇಮಾಮರು ನನ್ನ ಬಳಿಯಲ್ಲಿ ಬಂದು ಕುಳಿತುಕೊಳ್ಳುತ್ತಿದ್ದಾರೆ. ಬಾಹ್ಯವಾಗಿ ಪರಸ್ಪರ ಮುಸ್ಲಿಮರೆಂದು ಭಾವಿಸುತ್ತಾರೆ. ಆದರೆ ಸತ್ಯ ಪ್ರಕಟವಾದರೆ ನಂಬುವವರು ಬಹಳ ಕಡಿಮೆಯಾಗುವರು. ಈ ಜನರು ನನ್ನ ಬಳಿಯಿಂದಲೂ ಎದ್ದು ಹೋಗುವರು. ಅದರ ನಂತರ ಎಂದಿನಂತೆ ಪ್ರವಾದಿಗಳನ್ನು ವಿರೋಧಿಸುವ ರೀತಿಯಲ್ಲೇ ಈ ಜನರು ಕೂಡ ವಿರೋಧ ಶುರು ಮಾಡುವರು.

ಇಬ್ರಾಹೀಮ್ ಸಾಹಿಬ್‌ರಲ್ಲಿ ಒಳಿತು, ದೇವಭಕ್ತಿ, ಅರಿವು ಇತ್ತು. ಆದ್ದರಿಂದ ಸತ್ಯವು ಪ್ರಕಟಗೊಳ್ಳಲು ಬಾಕಿಯಿದೆ ಎಂದು ಕಾಲದ ಸ್ಥಿತಿಗಳಿಂದ ಅಂದಾಜು ಮಾಡಿದ್ದರು.

ಸತ್ಯ ತಲುಪಿದರೆ ಖಂಡಿತ ನಂಬುವೆನು ಎಂದು ಅವರು ಮನಸ್ಸಿನಲ್ಲೇ ತೀರ್ಮಾನ ಮಾಡಿಕೊಂಡಿದ್ದರು. 1998ರಲ್ಲಿ ಡೋರಿಯಲ್ಲಿ ವ್ಯವಸ್ಥಾಪಿತವಾದ ಅಹ್ಮದಿಯಾ ಮಿಶನ್ ಸ್ಥಾಪನೆಯಾಗಿರುವ ಮಾಹಿತಿ ಇಮಾಂ ಸಾಹಿಬಿಗೆ ತಲುಪಿತು. ತಬ್ಲೀಗ್ ಮಾಡುತ್ತಿದ್ದಾಗ ಒಂದು ಮಾರ್ಕೆಟಿನಲ್ಲಿ ಅಲ್‌ಹಾಜ್ ಬದೀಗ ಸಾಹಿಬ್ ಮೊದಲ ಬಾರಿ ಅಹ್ಮದಿಯ್ಯತ್ತಿನ ಹೆಸರನ್ನು ಆಲಿಸಿದ್ದರು. ಅಹ್ಮದಿಯರು ಈಸಾ ಮಸೀಹರ ಮರಣದಲ್ಲಿ ನಂಬುತ್ತಾರೆ ಮತ್ತು ಮಸೀಹ್ ಮೌಊದ್‌ರ ಆಗಮನದ ಸುವಾರ್ತೆಯನ್ನು ನೀಡುತ್ತಾರೆ ಎಂದು ಅವರಿಗೆ ಗೊತ್ತಾಯಿತು. ಹೀಗೆ ಇಬ್ರಾಹೀಂ ಬದೀಗ ಸಾಹಿಬ್‌ರು 7 ವ್ಯಕ್ತಿಗಳೊಂದಿಗೆ ಸತ್ಯಾನ್ವೇಷಣೆಗಾಗಿ ಮಿಶನ್ ಹೌಸಿಗೆ ಬಂದರು. ಬಹಳಷ್ಟು ಅನ್ವೇಷಣೆ ನಡೆಸಿದ ನಂತರ ಬೈಅತ್ ಮಾಡಿದರು. ತಮ್ಮ ಪ್ರದೇಶದಲ್ಲಿ ಮೊದಲ ಅಹ್ಮದಿಯೆಂಬ ಸೌಭಾಗ್ಯವನ್ನು ಪಡೆದರು.

ಈ ಜನರು ಬಡವರು, ಅವರಿಗೆ ಹಣದ ಲಾಲಸೆ ಕೊಟ್ಟು ಬೈಅತ್ ಮಾಡಲಾಗುತ್ತದೆ, ಅವರಿಗೆ ದೀನಿನ ಯಾವುದೇ ಅರಿವಿಲ್ಲ ಎಂದು ವಿರೋಧಿಗಳು ಹೇಳುತ್ತಾರೆ. ಈ ಶಹೀದರು ಅವರ ಬಾಯಿಗಳನ್ನು ಮುಚ್ಚಿಸಿರುವರು. ಮನವರಿಕೆ ಮಾಡಿಕೊಂಡು ಸತ್ಯವನ್ನು ಸ್ವೀಕಾರ ಮಾಡಿಕೊಂಡರು ಮತ್ತು ತ್ಯಾಗದ ಉನ್ನತ ಮಾದರಿಯನ್ನು ಸ್ಥಾಪಿಸಿದರು.

ಅವರು ಜಮಾಅತಿನ ನಿರ್ಭೀತ ಸಿಪಾಯಿಯಾಗಿದ್ದರು. ಭಯವಿಲ್ಲದ ಪ್ರಚಾರಕ ಮತ್ತು ಸರಿಯಾದ ಅರ್ಥದಲ್ಲಿ ತ್ಯಾಗಶೀಲ ಅಹ್ಮದಿಯಾಗಿದ್ದರು. ಅವರ ಪ್ರಯತ್ನಗಳ ಮೂಲಕ ಪೂರ್ತಿ ಪ್ರದೇಶದಲ್ಲಿ ಅಹ್ಮದಿಯ್ಯತ್ ಹರಡಿತು ಮತ್ತು ಅನೇಕ ಜಮಾಅತುಗಳ ಸ್ಥಾಪನೆಯಾಯಿತು. ತಬ್ಲೀಗ್ ಮಾಡುವ ಆವೇಶ ಹೊಂದಿದ್ದರು. ಅಹ್ಮದಿಯ್ಯತ್ ಸ್ವೀಕಾರ ಮಾಡುವುದಕ್ಕೆ ಮುಂಚೆ ಅವರ ವಿಶ್ವಾಸದ ಪ್ರಕಾರ ವಹಾಬಿಯಲ್ಲದೇ ಉಳಿದ ಎಲ್ಲ ಪಂಗಡಗಳು ಕಾಫಿರ್‌ಗಳಾಗಿದ್ದುವು. ಟಿ.ವಿ. ನೋಡುವುದು, ಫುಟ್‌ಬಾಲ್ ಆಡುವುದು ಅಥವಾ ನೋಡುವುದು, ಸ್ಕೂಲಿಗೆ ಹೋಗುವುದು, ಫೋಟೋ ತೆಗೆಯುವುದು ಎಲ್ಲವೂ ಅವರ ಪ್ರಕಾರ ಹರಾಂ ಆಗಿತ್ತು. ಆದರೆ ಅವರು ಅಹ್ಮದಿಯ್ಯತ್ ಸ್ವೀಕಾರ ಮಾಡಿದಾಗ ಅವರು ಹಳೆಯ ಈ ಚಿಂತೆಯಿಂದ ಹೊರಗೆ ಬಂದರು. ಸತ್ಯವೇನೆಂದು ಜನರಿಗೂ ಹೇಳಿಕೊಟ್ಟರು. 2000ರಲ್ಲಿ ಯು.ಕೆ.ಗೆ ಬಂದು ಹಝ್ರ‍್ರತ್ ಖ಼ಲೀಫತುಲ್ ಮಸೀಹ್ ರಾಬಿರನ್ನು ಜಲ್ಸ ವೇಳೆಯಲ್ಲಿ ಭೇಟಿಯಾಗುವ ಸೌಭಾಗ್ಯವನ್ನು ಪಡೆದರು.

ತಬ್ಲೀಗ್ ಮಾಡುವ ಆವೇಶ ಅವರಿಗೆ ಇತ್ತು.

ಅಹ್ಮದಿಯ್ಯತ್ ಸ್ವೀಕಾರ ಮಾಡುವುದಕ್ಕೆ ಮುಂಚಿತವಾಗಿಯೇ ಅವರು ಪ್ರಭಾವಶಾಲಿ ವ್ಯಕ್ತಿಯಾಗಿದ್ದರು. ನಾನು ಹೇಳಿದಂತೆ ಅನೇಕ ಗ್ರಾಮಗಳ ಚೀಫ್ ಆಗಿದ್ದರು. ಅಹ್ಮದಿಯ್ಯತ್ ಸ್ವೀಕಾರ ಮಾಡಿದ ನಂತರ ಅವರು ತಮ್ಮನ್ನು ತಬ್ಲೀಗಿಗಾಗಿ ವಖ್‌ಫ್ ಮಾಡಿದರು. ಬೇರೆ ಯಾವುದೇ ಸಂಗತಿಯ ಪರಿವೆಯೇ ಇಲ್ಲವೆಂದು ತೋರುತ್ತಿತ್ತು. ಅವರು ತಬ್ಲೀಗಿಗಾಗಿ ವಾಟ್ಸಪ್ ಗ್ರೂಪ್ ಮಾಡಿಕೊಂಡಿದ್ದರು. ಅದರಲ್ಲಿ ವಿಶೇಷವಾಗಿ ತಮಾಶಿಕ್ ಜನರಿಗಾಗಿ ಒಂದು ಗ್ರೂಪ್ ಇತ್ತು. ಆ ಗ್ರೂಪಿನಲ್ಲಿ ಮಾಲಿ, ನೈಜೀರಿಯ, ಘಾನ, ಸೌದಿ ಅರೇಬಿಯ, ಲಿಬಿಯ, ಐವರಿಕೋಸ್ಟ್ ಮುಂತಾದ ದೇಶಗಳ ಜನರು ಇದ್ದರು. ನಿರಂತರವಾಗಿ ಅವರಿಗೆ ತಬ್ಲೀಗ್ ಮಾಡುತ್ತಿದ್ದರು. ದಿನರಾತ್ರಿ ಆಡಿಯೋ ಸಂದೇಶಗಳನ್ನು ರಿಕಾರ್ಡ್ ಮಾಡಿಕೊಂಡು ಕಳುಹಿಸುತ್ತಿದ್ದರು. ಅದಕ್ಕೆ ಉತ್ತರವಾಗಿ ಎದುರಾಳಿಗಳು ಅವರಿಗೆ ಬೈಗುಳದ ಮೆಸೇಜ್‌ಗಳನ್ನು ಕಳುಹಿಸುತ್ತಿದ್ದರು. ವಿರೋಧಗಳು ನಡೆಯುತ್ತಿದ್ದುವು. ಕೊಲೆ ಬೆದರಿಕೆ ಕೂಡ ಕೊಡುತ್ತಿದ್ದರು. ಆದರೆ ಅವರು ಎಂದೂ ಯಾರೊಂದಿಗೂ ಕೋಪದಿಂದ ಮಾತನಾಡುತ್ತಿರಲಿಲ್ಲ. ಬದಲಾಗಿ ನಿಮಗೆ ಬರುವ ಖರ್ಚನ್ನು ನಾನು ಕೊಡುತ್ತೇನೆ ನೀವು ನನ್ನನ್ನು ವಧಿಸಿರಿ ಎಂದು ಕೊಲೆ ಬೆದರಿಕೆ ನೀಡುತ್ತಿದ್ದವರೊಡನೆ ಅವರು ಹೇಳುತ್ತಿದ್ದರು. ಸ್ಥಿತಿಗತಿಗಳು ಕೆಟ್ಟು ಹೋದಾಗ ಅವರು ಮುಬಲ್ಲಿಗ್ ಮತ್ತು ಮುಅಲ್ಲಿಮರೊಡನೆ ಹೀಗೆ ಹೇಳುತ್ತಿದ್ದರು: ಸ್ಥಿತಿಗತಿಗಳು ಸರಿಯಿಲ್ಲ, ಆದ್ದರಿಂದ ನಾವು ತಬ್ಲೀಗಿಗಾಗಿ ಹೊರಡಲು ಸಾಧ್ಯವಿಲ್ಲವೆಂದು ಹೇಳುವುದು ವ್ಯರ್ಥವಾದ ನೆಪವಾಗಿದೆ. ಸೋಶಿಯಲ್ ಮೀಡಿಯದ ಮೂಲಕ ತಬ್ಲೀಗ್ ಮಾಡಿರಿ, ಯಾರ ಬಳಿಯಾದರೂ ಫೋನಿನಲ್ಲಿ ನೆಟ್ ಪ್ಯಾಕೇಜ್ ಮಾಡಲು ಹಣವಿಲ್ಲದಿದ್ದರೆ ನನ್ನಿಂದ ಪಡೆಯಿರಿ. ಸೋಶಿಯಲ್ ಮೀಡಿಯ ಗ್ರೂಪ್‌ಗಳನ್ನು ಮಾಡಿಕೊಂಡು ಮನೆಯಲ್ಲಿ ಕುಳಿತುಕೊಂಡು ತಬ್ಲೀಗಿನ ಜಿಹಾದಿನಲ್ಲಿ ಭಾಗಿಗಳಾಗಿರಿ.

ಅವರಿಗೆ ಒಂದು ಆವೇಶ ಮತ್ತು ಆಸಕ್ತಿ ಇತ್ತು. ಮುಬಲ್ಲಿಗ್‌ರಾದ ನಾಸಿರ್ ಸದ್ದೂ ಸಾಹಿಬ್ ಹೇಳುತ್ತಾರೆ: ನಾನು 1997ರಲ್ಲಿ ಬುರ್ಕಿನಾಫಾಸೋಗೆ ಬಂದೆನು. ಹಝ್ರ‍್ರತ್ ಖ಼ಲೀಫತುಲ್ ಮಸೀಹ್ ರಾಬಿ(ರಹ್) ನನಗೆ ದಾವತೇ ಇಲಲ್ಲಾಹ್‌ದ ಕೆಲಸ ಒಪ್ಪಿಸಿದರು. ನನಗೆ ಇಲ್ಲಿಯ ಭಾಷೆ ಗೊತ್ತಿರಲಿಲ್ಲ. ಆದ್ದರಿಂದ ಪ್ಲಾನಿಂಗ್ ಮಾಡಲು 3 ತಿಂಗಳ ಸಮಯ ಬೇಕಾಗಿ ಬಂತು. ಅನಂತರ ನಾನು ಗ್ರಾಮಗಳಿಗೆ ಭೇಟಿ ನೀಡಿದೆ. ಒಂದು ಗ್ರಾಮದ ಇಮಾಮರ ಬಳಿಗೂ ಹೋದೆನು. ಈಸಾ ಮಸೀಹ್‌ರ ಮರಣ ಮತ್ತು ಮಹ್‌ದಿ ಇಮಾಮರ ಆಗಮನದ ವಾರ್ತೆ ಲಭಿಸಿದಾಗ ಇಬ್ರಾಹೀಂ ಬದೀಗ ಸಾಹಿಬ್‌ರು ಏಳು ವ್ಯಕ್ತಿಗಳೊಂದಿಗೆ ನಮ್ಮ ಮಿಶನ್ ಹೌಸಿಗೆ ಬಂದರು. ಅಲ್ಲಿ ಪ್ರಶ್ನೋತ್ತರಗಳು ನಡೆದುವು. ಮೂರು ದಿನಗಳ ತನಕ ಅವರು ನನ್ನ ಬಳಿಯಲ್ಲಿದ್ದರು. ಈ ಮೂರು ದಿನಗಳಲ್ಲಿ ಅವರೂ ನಿದ್ದೆ ಮಾಡಲಿಲ್ಲ, ನನ್ನನ್ನು ನಿದ್ದೆ ಮಾಡಲು ಬಿಡಲಿಲ್ಲ. ಅನಂತರ ಈ ಜನರು ಹೊರಟು ಹೋದರು. ದಿನಾಲೂ ಬೆಳಿಗ್ಗೆಯಿಂದ ಸಂಜೆಯ ವರೆಗೆ ಮಾತುಕತೆ ನಡೆಯುತ್ತಿತ್ತು. ಮುಂದಿನವಾರ ಪುನಃ ತಮ್ಮ ಹೊಸ ಇಮಾಮರ ಜೊತೆಗೆ ಬಂದರು. ಸತ್ಯಾನ್ವೇಷಣೆಯ ಈ ರೀತಿ ಮೂರು ತಿಂಗಳ ತನಕ ಮುಂದುವರೆಯಿತು. ಅವರಿಗೆ ಹೆಚ್ಚಿನ ಪ್ರಶ್ನೆಗಳಿಗೆ ಉತ್ತರಗಳು ಲಭಿಸಿದುವು. ಆದರೆ ಅಹ್ಮದಿಯ್ಯತ್ ಸ್ವೀಕಾರ ಮಾಡುವುದಾಗಿ ಎಂದಿಗೂ ಹೇಳಲಿಲ್ಲ. ಹೇಗಿದ್ದರೂ ನಾನು ಹಝ್ರ‍್ರತ್ ಖ಼ಲೀಫತುಲ್ ಮಸೀಹ್ ರಾಬಿ(ರಹ್)ರಿಗೆ ದುಆಗಾಗಿ ಬರೆಯುತ್ತಿದ್ದೆ. ಒಂದು ದಿನ ಇಮಾಂ ಸಾಹಿಬ್ ಬಂದು ಬೈಅತ್ ಫಾರಮ್ ಭರ್ತಿ ಮಾಡಿದರು. ಇಮಾಂ ಸಾಹಿಬ್‌ರೊಡನೆ ನಾನು ಕೇಳಿದೆ: ಉಳಿದ ಜನರು ಕೂಡ ಸತತವಾಗಿ ಬರುತ್ತಿದ್ದರಲ್ಲವೇ? ಅವರೆಲ್ಲಿ, ಅವರು ಯಾವಾಗ ಸ್ವೀಕಾರ ಮಾಡುವರು? ಆಗ ಅವರು ಹೇಳಿದರು: ಅವರೆಲ್ಲರೂ ಸ್ವೀಕಾರ ಮಾಡುವರು. ಆದರೆ ನಾನು ಮೊತ್ತಮೊದಲು ಅಹ್ಮದಿಯ್ಯತಿನಲ್ಲಿ ಪ್ರವೇಶಿಸಲು ಬಯಸುತ್ತಿದ್ದೆ. ಆದ್ದರಿಂದ ನಾನು ಬಂದಿದ್ದೇನೆ.

ಖ಼ಿಲಾಫತಿನೊಂದಿಗೆ ಅಪಾರವಾದ ನಿಷ್ಠೆಯ ಸಂಬಂಧವನ್ನು ಅವರು ಹೊಂದಿದ್ದರು.

ಬುರ್ಕಿನಾಫಾಸೋ ಜಮಾಅತಿನ ಅಮೀರ್ ಸಾಹಿಬ್ ಬರೆಯುತ್ತಾರೆ: 45ರಷ್ಟು ಗ್ರಾಮಗಳು ಅವರ ಅಧೀನದಲ್ಲಿತ್ತು. ಅವರು ಹಜ್ಜಿಗೆ ಹೋಗಿದ್ದರು ಮತ್ತು ಅಲ್ಲಿದ್ದುಕೊಂಡು ಶಿಕ್ಷಣವನ್ನು ಗಳಿಸಿದರು. ಬಹಳ ಉತ್ತಮವಾಗಿ ಅರಬಿ ಅರಿತಿದ್ದರು ಮತ್ತು ಮಾತನಾಡುತ್ತಿದ್ದರು. ಆ ಪೂರ್ತಿ ಪ್ರದೇಶದಲ್ಲಿ ಬಹಳ ತಬ್ಲೀಗ್ ಮಾಡಿದರು. ಸೈಕಲಿನಲ್ಲಿ ಗ್ರಾಮಗಳಿಗೆ ಹೋಗುತ್ತಿದ್ದರು ಮತ್ತು ಅಲ್ಲಾಹನ ಅನುಗ್ರಹದಿಂದ ಈ ಪ್ರದೇಶದಲ್ಲಿ ಅನೇಕ ಜನರನ್ನು ಅಹ್ಮದಿಯ್ಯತ್ತಿನ ಪ್ರಕಾಶದಿಂದ ಬೆಳಗಿಸಿದರು. ಅವರ ಮೂಲಕ ಆ ಪ್ರದೇಶದ ದೊಡ್ಡ ದೊಡ್ಡ ಪಂಡಿತರು ಅಹ್ಮದಿಯ್ಯತ್ತಿನಲ್ಲಿ ಪ್ರವೇಶಿಸಿದರು. ಈ ಪ್ರದೇಶಗಳ ಹೆಚ್ಚಿನ ಜಮಾಅತುಗಳು ಅವರ ತಬ್ಲೀಗಿನ ಕಾರಣದಿಂದ ಸ್ಥಾಪಿತಗೊಂಡಿದ್ದುವು. ನಾನು ಲಂಡನಿಗೆ ಹೋದರೆ, ಖ಼ಲೀಫತುಲ್

ಮಸೀಹರು ಹೇಗಿರುವರು ಎಂದು ಕೇಳುತ್ತಿದ್ದರು. ಬಹಳವಾಗಿ ಪ್ರೀತಿಸುತ್ತಿದ್ದರು.

ಅವರ ಪ್ರೀತಿಯ ಒಂದು ಉದಾಹರಣೆ ಏನೆಂದರೆ, ಎಂ.ಟಿ.ಎ.ಯಲ್ಲಿ ಮಕ್ಕಳ ಜೊತೆಗೆ ಖಲೀಫತುಲ್ ಮಸೀಹ್‌ರ ಕ್ಲಾಸ್ ನಡೆಯುವಾಗ, ಉರ್ದು ಭಾಷೆ ಕಿಂಚಿತ್ತು ಗೊತ್ತಿಲ್ಲದಿದ್ದರೂ ಎಲ್ಲವೂ ಗೊತ್ತಾಗುತ್ತಿರುವಂತೆ ಬಹಳ ಮಗ್ನತೆಯಿಂದ ನೋಡುತ್ತಿದ್ದರು ಮತ್ತು ಹೀಗೆ ಹೇಳುತ್ತಿದ್ದರು: ಇದನ್ನು ನೋಡುತ್ತಾ ಕುಳಿತುಕೊಳ್ಳುವುದೇ ನನ್ನ ವಿಶ್ವಾಸವನ್ನು ವರ್ಧಿಸಲು ಮತ್ತು ಅಭಿವೃದ್ಧಿಗೊಳಿಸಲು ಕಾರಣವಾಗುತ್ತದೆ.

ಅತಿಥಿ ಸತ್ಕಾರಿ ಮತ್ತು ಮೌನ ಪ್ರಕೃತದ್ದವರಾಗಿದ್ದರು. ಆದರೆ ಜಮಾಅತಿನ ಪರವಾಗಿ ಹೇಳಬೇಕಾಗಿ ಬಂದರೆ ಬಹಳ ಆವೇಶದಿಂದ ಹೇಳುತ್ತಿದ್ದರು. ಒಬ್ಬ ಪರಿಪೂರ್ಣ ಮುಬಲ್ಲಿಗ್ ಆಗಿದ್ದರು. ವೈಯಕ್ತಿಕ ಮತ್ತು ಸಾಮೂಹಿಕವಾಗಿ ಸಾಕಷ್ಟು ಸಂವಾದಗಳನ್ನು ಮತ್ತು ಪ್ರಶ್ನೋತ್ತರಗಳನ್ನು ಮಾಡಿಕೊಂಡಿದ್ದರು.

ಅಲ್ಲಿಯ ಮುರಬ್ಬಿಯಾದ ಮುಹಿಬ್ಬುಲ್ಲಾಹ್ ಸಾಹಿಬ್‌ರು ಹೇಳುತ್ತಾರೆ: ನನಗೆ ವೈಯಕ್ತಿಕವಾಗಿ ಅವರ ಪರಿಚಯವಿದೆ. ಏಕೆಂದರೆ ನಾನು ಹೆಚ್ಚಾಗಿ ಅಲ್ಲಿಗೆ ಹೋಗುತ್ತಿದ್ದೆ. ಖಿಲಾಫತಿನೊಂದಿಗೆ ಅಪಾರವಾದ ಪ್ರೀತಿ ಹೊಂದಿದವರೂ ಅತಿಥಿ ಸತ್ಕಾರಿಯೂ ಆಗಿದ್ದರು. ಯುವಕರು ಪೂರ್ತಿ ದಿವಸ ಕೆಲಸದಲ್ಲಿ ಇರುವಾಗ ಅಲ್ಲಿನ ಹಿರಿಯರು ಮಸೀದಿಯ ದಿಣ್ಣೆಯಲ್ಲಿ ಕುಳಿತುಕೊಂಡು ಎಂ.ಟಿ.ಎ. ನೋಡುತ್ತಿದ್ದರು. ಈ ಹಿರಿಯರು ಹುತಾತ್ಮರಾದಾಗ ನನಗೆ ಒಬ್ಬ ಯುವಕನ ಫೋನ್ ಕರೆ ಬಂತು. ಅವನು ಹೇಳಿದನು: ಈ ರೀತಿಯಾಗಿ ನಮ್ಮ ಹಿರಿಯರನ್ನು ಶಹೀದ್ ಮಾಡಲಾಗಿದೆ. ಅಹ್ಮದಿಯ್ಯತಿನಿಂದ ಹಿಂದೆ ಸರಿದರೆ ಜೀವಂತವಾಗಿ ಉಳಿಸಲಾಗುವುದು ಎಂದು ಹೇಳಲಾಗಿತ್ತು. ಆದರೆ ಹಿರಿಯರು ಶಹಾದತಿಗೆ ಆದ್ಯತೆ ನೀಡಿದರು. ಈ ಭಯೋತ್ಪಾದಕರು ನಮ್ಮನ್ನು ಕೂಡ ಶಹೀದ್ ಮಾಡಿದರೆ ನಾವು ಅಹ್ಮದಿಯ್ಯತ್ತಿನಿಂದ ಹಿಂದೆ ಸರಿಯಲಾರೆವು. ಈಗ ಶಹೀದ್ ಆದದ್ದು ಕೇವಲ ಒಂಬತ್ತು ಹಿರಿಯರು. ಖುದ್ದಾಮ್, ಲಜ್ನಗಳಾದ ನಮ್ಮೆಲ್ಲರನ್ನು ಶಹೀದ್ ಮಾಡಿದರೂ ನಾವು ಅಹ್ಮದಿಯ್ಯತ್ ಬಿಡಲಾರೆವು. ಇನ್‌ಶಾ ಅಲ್ಲಾಹ್. ಈ ಜಮಾಅತಿನ ನಿಷ್ಠಾವಂತರಲ್ಲಿ ಹಿರಿಯರು ಉಂಟುಮಾಡಿದ ಸ್ಫೂರ್ತಿ ಇದಾಗಿದೆ. ಹಿರಿಯರ ತರಬೇತಿ ಇದ್ದರೆ ಆವೇಶ ಮತ್ತು ಸತ್ಯವಿಶ್ವಾಸ ಉಂಟಾಗುತ್ತದೆ.

ಲೋಕಲ್ ಮುಬಲ್ಲಿಗ್ ಆದ ಮಾಯಿಗಾ ತೇಜಾನ್ ಸಾಹಿಬ್ ಹೇಳುತ್ತಾರೆ: ಇಮಾಂ ಇಬ್ರಾಹೀಂ ಸಾಹಿಬ್‌ರಿಗೆ ಕೊಲೆಯ ಬೆದರಿಕೆಗಳು ಬರುತ್ತಿದ್ದುವು. ಇಬ್ರಾಹೀಂ ಸಾಹಿಬ್‌ರು ತಮ್ಮ ಕುಟುಂಬ ಮತ್ತು ಸಂಬಂಧಿಕರೊಂದಿಗೆ ಬಹಳ ಉತ್ತಮವಾಗಿ ವರ್ತಿಸುತ್ತಿದ್ದರು. ಎಲ್ಲರೊಡನೆ ಅನುಕಂಪ ತೋರಿಸುವುದು ಅವರ ಅಭ್ಯಾಸವಾಗಿತ್ತು. ಇತರರಿಗಾಗಿ ತ್ಯಾಗ ಮಾಡುವುದು ಅವರ ಗುಣವಾಗಿತ್ತು. ಪ್ರದೇಶದ ಜನರು ಅವರನ್ನು ಬಹಳ ಗೌರವಿಸುತ್ತಿದ್ದರು.

ಇಬ್ರಾಹೀಂ ಸಾಹಿಬ್‌ರು ಏನಾದರೂ ತೀರ್ಪು ಮಾಡಿದರೆ ಜನರು ಅದಕ್ಕೆ ಬೆಲೆ ಕೊಡುತ್ತಿದ್ದರು ಮತ್ತು ಅಂಗೀಕರಿಸುತ್ತಿದ್ದರು. ಅವರ ಶಿಷ್ಯರ ಸಂಖ್ಯೆ ಬಹಳಷ್ಟು ಇದೆ. ಅವರಲ್ಲಿ ಕೆಲವರು ನೆರೆ ದೇಶಗಳಲ್ಲಿ ಇಮಾಂ ಮತ್ತು ಮುಅಲ್ಲಿಮರಾಗಿ ಸೇವೆ ಮಾಡುತ್ತಿದ್ದಾರೆ. ಬುರ್ಕಿನಾಫಾಸೋದಲ್ಲೂ ಅನೇಕರು ಮುಅಲ್ಲಿಂ ಮತ್ತು ಲೋಕಲ್ ಮಿಶನರಿಯಾಗಿ ಕೆಲಸ ಮಾಡುತ್ತಿರುವರು. ಒಳಿತು, ದೇವಭಕ್ತಿ, ಒಳಿತಿನಲ್ಲಿ ಮುಂದಾಗುವುದರಲ್ಲಿ ಇತರರಿಗೆ ಮಾದರಿಯಾಗಿದ್ದರು. ಪ್ರತಿಯೊಂದು ಸಾಂಪತ್ತಿಕ ತ್ಯಾಗಗಳಲ್ಲಿ ಮೊತ್ತ ಮೊದಲು ಸ್ವತಃ ಧನತ್ಯಾಗಗಳನ್ನು ಮಾಡುತ್ತಿದ್ದರು. ಜಮಾಅತಿನ ಎಲ್ಲ ರೀತಿಯ ಕೆಲಸಗಳಲ್ಲಿ ಉತ್ಸಾಹದಿಂದ ಪಾಲ್ಗೊಳ್ಳುತ್ತಿದ್ದರು. ಐದು ಹೊತ್ತಿನ ನಮಾಝ್‌ಗಳನ್ನು ನಿರ್ವಹಿಸಲು ಮಸೀದಿಗೆ ಬರುತ್ತಿದ್ದರು. ತಹಜ್ಜುದ್ ನಮಾಝ್ ನಿಯತವಾಗಿ ನಿರ್ವಹಿಸುತ್ತಿದ್ದರು. ಜಮಾಅತಿನ ಯಾವುದಾದರೂ ಕಾರ್ಯಕ್ರಮದಲ್ಲಿ ಅವರು ಉಪಸ್ಥಿತರಿಲ್ಲವೆಂದಾದರೆ, ಅದರ ಅರ್ಥ ಅವರು ಒಂದೋ ರೋಗಿಯಾಗಿರುವರು ಅಥವಾ ಯಾತ್ರೆಯಲ್ಲಿರುವರು ಎಂದಾಗಿತ್ತು. ಜಮಾಅತಿನ ಕೆಲಸಗಳಲ್ಲಿ ಭಾಗವಹಿಸಲು ಖರ್ಚುಗಳ ಪರಿವೆ ಮಾಡುತ್ತಿರಲಿಲ್ಲ. ಅವರು ಎರಡು ವಿವಾಹಗಳನ್ನು ಮಾಡಿಕೊಂಡಿದ್ದರು. 11 ಮಕ್ಕಳನ್ನು ಅಲ್ಲಾಹನು ಅವರಿಗೆ ದಯಪಾಲಿಸಿರುವನು.

ಖಾಲಿದ್ ಮಹ್ಮೂದ್ ಬರೆಯುತ್ತಾರೆ: ನಿಷ್ಠೆ ಮತ್ತು ಪ್ರಾಮಾಣಿಕತೆಯಿಂದ ಕೂಡಿದವರಾಗಿದ್ದರು. ಖಿಲಾಫತಿನ ಪ್ರೇಮಿ ಮತ್ತು ತ್ಯಾಗಿಯಾದ ಅಹ್ಮದಿಯಾಗಿದ್ದರು. 2008 ರಲ್ಲಿ, ಖಿಲಾಫತ್ ಜುಬಿಲಿಯ ವರ್ಷ, ನಾನು ಘಾನಾಗೆ ಭೇಟಿ ನೀಡಿದಾಗ, ನಾನು ಅಲ್ಲಿಗೆ ಜಲ್ಸಾಗಿ ಹೋಗಿದ್ದೆ, ಬುರ್ಕಿನಾ ಫಾಸೊ ಮತ್ತು ಮಾಲಿಯಿಂದ ಸಾವಿರಾರು ಅಹ್ಮದಿ ಗೆಳೆಯರು ನನ್ನನ್ನು ಭೇಟಿಯಾಗಲು ಆಗಮಿಸಿದ್ದರು. ಈ ಸಂದರ್ಭದಲ್ಲಿ ಘಾನಾ ಜಮಾಅತ್ ನವರು ಊಟದ ಕೂಟ ಮತ್ತು ವಸತಿಗೆ ಉತ್ತಮ ವ್ಯವಸ್ಥೆ ಮಾಡಿದ್ದರು ಆದರೆ ಇದರ ನಡುವೆಯೂ ಡೋರಿಯಿಂದ ಬಂದಿದ್ದ ಕೆಲವು ಗೆಳೆಯರು ಕೂಡ ಸೇರಿದ್ದರು. ಅವರು ತಡವಾಗಿ ಆಹಾರವನ್ನು ಪಡೆಯುತ್ತಾರೆ. ನಂತರ ತಡರಾತ್ರಿ ಮಾರುಕಟ್ಟೆಯಿಂದ ಅವರಿಗೆ ಆಹಾರವನ್ನು ತಂದು ನೀಡಲಾಗುತ್ತದೆ. ಆದುದರಿಂದ ಅವರನ್ನು ಭೇಟಿಯಾದಾಗ ನನ್ನ ಪರವಾಗಿ ಕ್ಷಮೆಯಾಚಿಸಿ ಸಾಂತ್ವನ ಹೇಳಲು ತಿಳಿಸಿದ್ದೆ. ನಾನು ತಕ್ಷಣ ಅವರ ಬಳಿಗೆ ಹೋಗಿ ಕ್ಷಮೆಯಾಚಿಸಿದೆ ಎಂದು ಅವರು ಹೇಳುತ್ತಾರೆ. ಅವರು ಆ ಸಂದೇಶವನ್ನು ನೀಡಿದಾಗ, ಜಮಅತ್ತಿನ ಅಧ್ಯಕ್ಷರಾಗಿದ್ದ ಅಲ್-ಹಾಜ್ ಇಬ್ರಾಹಿಂ ಸಾಹಿಬ್ ಅವರು ಉಳಿದ ಜನರೊಂದಿಗೆ ಹೇಳಿದರು: ಖಲೀಫರನ್ನು ನೋಡಲು ನಾವು ಇಲ್ಲಿಗೆ ಬಂದಿದ್ದೇವೆ. ನಾವು ನೋಡಿದಾಗ ಮತ್ತು ಭೇಟಿಯಾದಾಗ, ನಮ್ಮ ಆಯಾಸ ಮತ್ತು ಹಸಿವು ಮುಗಿದಿದೆ. ಯಾವುದೇ ರೀತಿಯ ದೂರು ಅವರು ನೀಡಲಿಲ್ಲ ಬದಲಿಗೆ, ನಾವೆಲ್ಲರು ಒಟ್ಟಿಗೆ ಕುಳಿತು ಕೊಂಡು ಈ ಭೇಟಿಯ ಬಗೆಗಯೇ ಮಾತನಾಡುತ್ತಿದ್ದೇವೆ ಮತ್ತು ಆನಂದಿಸುತ್ತಿದ್ದೇವೆ. ಏನೇ ಇರಲಿ, ಅಷ್ಟು ದೂರದ ಪ್ರಯಾಣದ ನಂತರ, ಆ ಸಮಯದಲ್ಲಿ ಅನೇಕ ಜನರು ಸೈಕಲ್‌ನಲ್ಲಿ ಬಂದರು ಮತ್ತು ಅವರ ಈ ನಿಷ್ಠೆಯನ್ನು ನೋಡಿ ನನಗೆ ಆ ಸಮಯದಲ್ಲಿ ರಾಮಾಂಚಕವಾಯಿತು. ತಕ್ಷಣ ವ್ಯವಸ್ಥೆ ಮಾಡಲು ಪ್ರಯತ್ನಗಳು ನಡೆದವು, ಆದರೆ ಮತ್ತೊಂದೆಡೆ, ಅವರ ಪ್ರಾಮಾಣಿಕತೆ ಮತ್ತು ನಿಷ್ಠೆಯು ಆಶ್ಚರ್ಯಚಕಿತವಾಗಿತ್ತು. ಆಗಲೂ ನಾನು ಅವರಿಂದ ಅದೇ ಸಂದೇಶವನ್ನು ಸ್ವೀಕರಿಸಿದೆ ಮತ್ತು ಈ ಜನರು ಎಷ್ಟು ಬಲವಾದ ನಂಬಿಕೆಯನ್ನು ಹೊಂದಿದ್ದಾರೆಂದು ನನಗೆ ಆಶ್ಚರ್ಯವಾಯಿತು.

ಷರೀಫ್ ಊದಾ ಸಾಹಿಬ್ ಅವರು ಬೆನಿನ್‌ಗೆ ಭೇಟಿ ನೀಡಲು ಬಂದಾಗ, ಇಮಾಮ್ ಸಾಹಿಬ್ ಬುರ್ಕಿನಾ ಫಾಸೊದಿಂದ ಬಸ್ ಹತ್ತಿ ರಾತ್ರಿಯೆಲ್ಲಾ ಪ್ರಯಾಣಿಸಿ 1,000 ಕಿಲೋಮೀಟರ್ ಪ್ರಯಾಣಿಸಿ ಬೆಳಗಿನ ಜಾವ ಮೂರು ಗಂಟೆಗೆ ತಲುಪಿದರು ಎಂದು ಅಲ್-ಹಜ್ ಮಹ್ಮೂದ್ ದೇಕೋ ಸಾಹಿಬ್ ಎಂಬ ಮುಅಲ್ಲಿಮ್ ಸಾಹಿಬ್ ಹೇಳುತ್ತಾರೆ. ಇದು ಮೂವತ್ತು ಗಂಟೆಗಳ ದಣಿದ ಪ್ರಯಾಣವಾಗಿತ್ತು. ಅಲ್ಲಿನ ರಸ್ತೆಗಳೂ ಚೆನ್ನಾಗಿಲ್ಲ ಮತ್ತು ತುಂಬಾ ಜನಸಂದಣಿಯಿಂದ ಕೂಡಿತ್ತು. ಮುಂದೆ ಬಹಳ ದೂರ ಪಯಣಿಸಬೇಕಾಗಿತ್ತು, ಅವರೂ ಸಹ ಅವರ ಜೊತೆಯಲ್ಲಿಯೇ ಸಾಗಿ ಎಲ್ಲ ಕಾರ್ಯಕ್ರಮಗಳಲ್ಲಿ ಸೇರಿಕೊಂಡರು.

ಅವರಿಗೆ ಜಮಾಅತ್ತಿನ ಸೇವೆಯಲ್ಲಿ ಒಲವು ಇತ್ತು. ಬೆನಿನ್‌ನಲ್ಲಿನ ಮಸೀದಿಗಳನ್ನು ನೋಡಿ ಬಹಳ ಸಂತೋಷಪಟ್ಟು ಇಲ್ಲಿ ನೋಡಿ!! ಇದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಸತ್ಯತೆಗೆ ಪುರಾವೆಯಾಗಿದೆ ಎಂದು ಹೇಳುತ್ತಿದ್ದರು. ಹಾಗೆಯೇ ಅಹ್ಮದೀಯರೇತರದವರೊಂದಿಗಿನ ಚರ್ಚೆಗಳಲ್ಲಿ ಅರೇಬಿಕ್ ಭಾಷೆಯಲ್ಲಿ ನಿರರ್ಗಳವಾಗಿ ಭಾಷಣ ಮಾಡುತ್ತಿದ್ದರು. ಧರ್ಮಗುರುಗಳೊಂದಿಗೆ ಷರೀಫ್ ಊದಾ ಸಾಹಿಬ್ ಅವರ ಚರ್ಚೆ ನಡೆಯುತ್ತಿತ್ತು. ಆ ವೇಳೆ ಅವರು ಏನಾದರು ತಪ್ಪು ಹೇಳಿದಾಗ ಅವರಿಗೆ ಸಿಟ್ಟು ಬಂದು ಎದ್ದು ಉತ್ತರ ಕೊಡಬೇಕೆನ್ನುವಷ್ಟರಲ್ಲಿ ಅವರಿಗೆ ಸುಮ್ಮನಾಗಿಸುತ್ತಿದ್ದಾಗ ಅವರು ತಕ್ಷಣ ಸುಮ್ಮನೆ ಕುಳಿತುಕೊಳ್ಳುತ್ತಿದ್ದರು. ತದನಂತರ ಅಹ್ಮದೀಯೇತರು ಸರಿ, ನಾವು ಮುಸ್ಲಿಮರು ಎಂದು ನೀವು ಭಾವಿಸಿದರೆ, ನಮ್ಮ ಹಿಂದೆ ನಮಾಝ್ ನಿರ್ವಹಿಸಿ. ಎಂದು ಹೇಳಿದಾಗ ಅವರು ಆ ಸಮಯದಲ್ಲಿ ಎದ್ದುನಿಂತು ನಮ್ಮನ್ನು ನಾಸ್ತಿಕರು ಎಂದು ಕರೆಯುವವರು ಮತ್ತು ನಮ್ಮ ಮತ್ತು ಪ್ರಸ್ತುತ ಕಾಲಘಟ್ಟದ ಇಮಾಮ್ ರನ್ನು ಸ್ವೀಕರಿಸುವುದಿಲ್ಲವೋ ಅವರ ಹಿಂದೆ ನಾವು ನಮಾಝ್ ನಿರ್ವಹಿಸಲು ಹೇಗೆ ಸಾಧ್ಯ? ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ಕಾಲಘಟ್ಟದ ಇಮಾಮ್ ಎಂದು ಸ್ವೀಕರಿಸಿರಿ ನಂತರ ನಾವು ನಮಾಝ್ ನಿರ್ವಹಿಸುವೆವು.

ಬೆನಿನ್‌ನ ರಿಟೈರ್ಡ್ ಲೋಕಲ್ ಮುಅಲ್ಲಿಂ ಸಾಹಿಬ್ ಹೇಳುತ್ತಾರೆ: ಅವರು ಖಲೀಫತುಲ್ ಮಸೀಹ್‌ರೊಂದಿಗೆ ಪ್ರೀತಿಯ ಒಂದು ಜೀವಂತ ಚಿತ್ರವಾಗಿದ್ದರು.

ಇಬ್ರಾಹೀಂ ಬದೀಗ ಸಾಹಿಬ್ ಹೀಗೆ ಹೇಳುತ್ತಿದ್ದರು: ನನಗೆ ಅಹ್ಮದಿಯ್ಯತ್ತಿನ ಸಂದೇಶವನ್ನು ಪಾಕಿಸ್ತಾನಿ ಮುಬಲ್ಲಿಗ್ ತಲುಪಿಸಿದ ಅದೇ ದಿನದಿಂದ ನಾನು ಮನಸ್ಸಿನಲ್ಲಿ ಅಹ್ಮದಿಯಾಗಿದ್ದೆ.

ಲೋಕದ ವಿಜಯ ಕೇವಲ ಖಿಲಾಫತ್ ವ್ಯವಸ್ಥೆಯೊಂದಿಗೆ ಸಂಬಂಧವಿರಿಸಿಕೊಳ್ಳುವುದರಿಂದ ನಡೆಯುವುದು ಮತ್ತು ಇದೇ ಸರಿಯಾದ ಮಾರ್ಗವಾಗಿದೆ ಹಾಗೂ ಮರಣದ ವರೆಗೂ ಇದರಲ್ಲೇ ಸ್ಥಿರವಾಗಿರಬೇಕು ಎಂಬುದನ್ನು ನಾನು ಕಲಿತೆನು. ಅವರು ಹೇಳಿದ್ದನ್ನು ಮಾಡಿ ತೋರಿಸಿರುವರು ಎಂದು ಮುಅಲ್ಲಿಂ ಸಾಹಿಬ್ ಹೇಳುತ್ತಾರೆ.

ಬೆನಿನ್‌ನ ಲೋಕಲ್ ಮುಅಲ್ಲಿಂ ಈಸಾ ಸಾಹಿಬ್ ಹೇಳುತ್ತಾರೆ: ಒಂದು ದೀರ್ಘ ಕಾಲದಿಂದ ನನಗೆ ಅವರೊಂದಿಗೆ ಸಂಬಂಧವಿತ್ತು. ಯಾರೊಂದಿಗೂ ಯಾವುದೇ ಭಿನ್ನತೆಯಿಲ್ಲದ ಅಹ್ಮದಿಯಾಗಿದ್ದರು. ಅವರು ನೈಜವಾದ ಅಹ್ಮದಿಯಾಗಿದ್ದರು. ಅವರು ಪ್ರತಿಯೊಂದು ಕೆಲಸದಲ್ಲಿ ಮುಂದೆಯಿದ್ದರು. ತಬ್ಲೀಗಿನಲ್ಲೂ ಚಂದಾದಲ್ಲೂ ಎಲ್ಲ ವಿಷಯದಲ್ಲೂ ಮುಂದಿದ್ದರು. ಇದೇ ಕಾರಣದಿಂದ ಉಳಿದ 8 ಅನ್ಸಾರ್‌ಗಳು ಕೂಡ ಅವರ ಹಿಂದೆ ಸನ್ನದ್ಧರಾಗಿ ತಮ್ಮ ಜೀವಗಳನ್ನು ಅಲ್ಲಾಹನ ಮುಂದೆ ತ್ಯಾಗ ಮಾಡುವವರಾದರು.

ಬುರ್ಕಿನಾಫಾಸೋ ಜಾಮಿಅ ಅಹ್ಮದಿಯಾದ ಪ್ರಿನ್ಸಿಪಲ್ ಬರೆಯುತ್ತಾರೆ: ಒಬ್ಬ ವ್ಯಕ್ತಿ ಒಂದು ಕನಸನ್ನು ಕಂಡಿದ್ದರು. ಅದರ ಕುರಿತು ಹಝ್ರತ್ ಖಲೀಫತುಲ್ ಮಸೀಹ್ ರಾಬಿ(ರಹ್) ಪತ್ರದಲ್ಲಿ ಹೀಗೆ ಬರೆದರು: ಇದೊಂದು ಅನುಗ್ರಹೀತ ಕನಸಾಗಿದೆ. ದೇಶದ ಮಣ್ಣು ಸತ್ಯವನ್ನು ಸ್ವೀಕಾರ ಮಾಡಲು ತಯಾರಾಗಿದೆ. ನನ್ನ ಭೇಟಿಯ ನಂತರ ಸತ್ಯವನ್ನು ಸ್ವೀಕಾರಮಾಡಿಕೊಂಡು ಆ ದೇಶ ಬೆಳಗುವುದು. ಅಲ್ಲಾಹನು ಹಾಗೆಯೇ ಮಾಡಲಿ. (ಪತ್ರ: ಎಡೀಶ್ನಲ್ ವಕೀಲುತ್ತಬ್‌ಶೀರ್ ಸಾಹಿಬ್, ಲಂಡನ್ T.3360, 19-06-1990)

ಅಲ್ಲಿಗೆ ಖಲೀಫತುಲ್ ಮಸೀಹ್ ರಾಬಿ(ರಹ್) ಭೇಟಿ ನೀಡಿರಲಿಲ್ಲ. 2004ರಲ್ಲಿ ನಾನು ಭೇಟಿ ನೀಡಿದ್ದೆ. ನಾನು ಕೂಡ ಅವರಿಗೆ ಹೀಗೆ ಪತ್ರ ಬರೆದಿದ್ದೆ: ಈಗ ಬುರ್ಕಿನಾಫಾಸೋದಲ್ಲಿ ಅಹ್ಮದಿಯ್ಯತ್ತಿನ ಬೀಜ ಬಿತ್ತಲ್ಪಟ್ಟಿದೆ. ಅದು ಬೇಗನೇ ಸ್ಥಾಯಿಯಾದ ಫಲಗಳನ್ನು ನೀಡುವುದು.

ಬುರ್ಕಿನಾಫಾಸೋದ ಜನರು ನಿಜವಾಗಿಯೂ ಶ್ರೇಷ್ಠ ಜನರಾಗಿರುವರು. ಅಲ್ಲಾಹನು ಅವರನ್ನು ಅಹ್ಮದಿಯ್ಯತ್ತಿನ ಪ್ರಕಾಶದಿಂದ ಬೆಳಗಿಸಿರುವನು ಎಂಬುದರಲ್ಲಿ ನನಗೆ ಸಂತೋಷವಿದೆ. ಬುರ್ಕಿನಾಫಾಸೋದ ಜನರಲ್ಲಿ ಇರುವ ಉತ್ಸಾಹವು ಅದ್ಭುತಕರವಾಗಿದೆ. ನನ್ನ ಭೇಟಿಯ ಮುಂದಿನ ಎರಡು ಮೂರು ವರ್ಷಗಳಲ್ಲಿ ಮಹತ್ತಾದ ಪರಿಣಾಮಗಳು ಪ್ರಕಟಗೊಳ್ಳುವುವು. ಜಮಾಅತ್ ವೇಗವಾಗಿ ಪ್ರಗತಿಗೊಳ್ಳುವುದು. ಇನ್‌ಶಾ ಅಲ್ಲಾಹ್. ( ಪ ತ್ರ T. 9653, 01-05-2004)

ಇದು ನಾನು ನನ್ನ ಭೇಟಿಯ ನಂತರ ಬರೆದಿದ್ದೆ. ಆಫ್ರಿಕದ ಜಮಾಅತುಗಳಲ್ಲಿ ಬುರ್ಕಿನಾಫಾಸೋದ ಅಹ್ಮದಿಯರಲ್ಲಿ ನಾನು ನೋಡಿದ ಒಂದು ವಿಶೇಷವಾದ ಸಂಗತಿಯೇನೆಂದರೆ, ಭೇಟಿಯಾಗುವಾಗ ನನ್ನನ್ನು ಆಲಿಂಗಿಸಲು ಪ್ರಯತ್ನಿಸುತ್ತಿದ್ದರು. ಅವರ ಪ್ರೀತಿ ಕೂಡ ನೋಡಬೇಕಾದದ್ದೇ ಆಗಿತ್ತು. ಪ್ರಿನ್ಸಿಪಲ್ ಸಾಹಿಬ್ ಬರೆಯುತ್ತಾರೆ: ಇಂದು ಮಹ್‌ದಿಯಾಬಾದಿನ ನಿಷ್ಠಾವಂತರು ಅಸಾಧಾರಣವಾದ ತ್ಯಾಗವನ್ನು ಮಾಡಿಕೊಂಡು "ನಿಜವಾಗಿಯೂ ಮಹತ್ತಾದ ಜನರಾಗಿರುವರು" ಎಂಬ ಮಾತನ್ನು ಸ್ಥಿರೀಕರಿಸಿರುವರು.

ಎರಡನೇ ಪ್ರಸ್ತಾಪ ಅಲ್‌ಹಸನ್ ಅಗ್ ಮಾಲೀ ಆಯಿಲ್ ಸಾಹಿಬ್‌ರದ್ದಾಗಿದೆ. ಶಹಾದತಿನ ಸಮಯದಲ್ಲಿ ಅವರಿಗೆ 71 ವರ್ಷ ಪ್ರಾಯವಿತ್ತು. ವೃತ್ತಿಯಲ್ಲಿ ಕೃಷಿಕರಾಗಿದ್ದರು. 1999ರಲ್ಲಿ ಅಹ್ಮದಿಯ್ಯತ್ ಸ್ವೀಕಾರ ಮಾಡಿಕೊಂಡಿದ್ದರು. ಗ್ರಾಮದ ಆರಂಭಿಕ ಅಹ್ಮದಿಯರಲ್ಲಿ ಒಬ್ಬರಾಗಿದ್ದರು. ಬೈಅತ್ತಿನ ಸಮಯದಿಂದಲೇ ನಿಷ್ಠೆ ಮತ್ತು ಪ್ರಾಮಾಣಿಕತೆಯಲ್ಲಿ ಪ್ರಗತಿ ಹೊಂದುತ್ತಾ ಹೋದರು. ನಿಯತವಾಗಿ ಕಡ್ಡಾಯ ಮತ್ತು ತಹಜ್ಜುದ್ ನಮಾಝ್‌ಗಳನ್ನು ನಿರ್ವಹಿಸುತ್ತಿದ್ದರು. ಜಮಾಅತಿಗಾಗಿ ಜೀವ, ಸಂಪತ್ತು ಮತ್ತು ಸಮಯವನ್ನು ಅಸಾಮಾನ್ಯವಾಗಿ ತ್ಯಾಗ ಮಾಡುತ್ತಿದ್ದರು. ಅವರು ಬುರ್ಕಿನಾಫಾಸೋದ ಐದಾರು ಭಾಷೆಗಳನ್ನು ಮಾತನಾಡ ಬಲ್ಲವರಾಗಿದ್ದರು. ಜನರು ಅವರನ್ನು ಬಹಳವಾಗಿ ಇಷ್ಟಪಡುತ್ತಿದ್ದರು. ಜಮಾಅತಿನ ಯೋಜನೆಗಳಲ್ಲಿ ಉತ್ಸಾಹದಿಂದ ಪಾಲ್ಗೊಳ್ಳುತ್ತಿದ್ದರು. ಕಳೆದ ವರ್ಷ ಜಮಾಅತಿನ ವತಿಯಿಂದ ವಖ್ಫೇ ಆರ್‌ಝಿ ಮಾಡಲು ಯೋಜನೆ ಮಾಡಲಾದಾಗ ಮಹ್‌ದಿಯಾಬಾದ್ ಜಮಾಅತಿನಲ್ಲಿ ಮೊತ್ತ ಮೊದಲಾಗಿ ಅವರು ಹೆಸರನ್ನು ಬರೆಸಿದ್ದರು. ಮಹ್‌ದಿಯಾಬಾದ್ ಘಟನೆಯಲ್ಲಿ ಅವರ ಅವಳಿ ಸಹೋದರರಾದ ಸನ್ಮಾನ್ಯ ಹುಸೈನ್ ಅಲ್ ಮಾಲಿ ಆಯಿಲ್ ಸಾಹಿಬ್ ಸಹ ಶಹೀದ್ ಆಗಿದ್ದರು.

ಮುಂದಿನ ಪ್ರಸ್ತಾಪ ಹುಸ್ಸೈನಿ ಆಗ್‌ಮಾಲಿ ಆಯೀಲ್: ಇವರು 1999ರಲ್ಲಿ ಬೈಅತ್ ಮಾಡಿದ್ದರು. ತಮ್ಮ ಗ್ರಾಮದ ಆರಂಭಿಕ ಅಹ್ಮದಿಯರಲ್ಲಿ ಒಬ್ಬರಾಗಿದ್ದರು. ಈಗ ಝಯೀಮ್ ಅನ್ಸಾರುಲ್ಲಾಹ್ ಆಗಿ ಸೇವೆ ಸಲ್ಲಿಸುತ್ತಿದ್ದರು. ಅನ್ಸಾರ್ ಸಹೋದರರನ್ನು ಬಹಳ ಉತ್ತಮವಾಗಿ ವ್ಯವಸ್ಥಾಪಿತಗೊಳಿಸುವ ಸಾಮರ್ಥ್ಯವನ್ನು ಹೊಂದಿದ್ದರು. ಜಮಾಅತಿನ ಅನೇಕ ತರಬೇತಿ ಕಾರ್ಯಕ್ರಮಗಳನ್ನು ನಡೆಸುತ್ತಿದ್ದರು. ಮಸೀದಿಯ ಶುಚೀಕರಣ ಮತ್ತು ಇತರ ಸ್ಥಳಗಳಲ್ಲಿ ವಖಾರೇ ಅಮಲ್ ಮಾಡುತ್ತಿದ್ದರು. ಐದು ಹೊತ್ತಿನ ನಮಾಝ್ ಮಸೀದಿಯಲ್ಲಿ ನಿರ್ವಹಿಸುವುದು ಮತ್ತು ಚಂದ ನೀಡುವುದರಲ್ಲಿ ಕರಾರುವಕ್ಕಾಗಿದ್ದರು. ತಹಜ್ಜುದ್ ನಮಾಝ್ ನಿರ್ವಹಿಸುತ್ತಿದ್ದರು. ಅವರ ಅವಳಿ ಸಹೋದರರಾದ ಅಲ್‌ಹಸನ್ ಆಗ್‌ಮಾನಿಯಲ್ ಸಹ ಈ ಘಟನೆಯಲ್ಲಿ ಶಹೀದ್ ಆಗಿರುವರು. ಇಬ್ಬರು ಸಹೋದರರು ಒಂದೇ ದಿನ ಲೋಕಕ್ಕೆ ಬಂದರು ಮತ್ತು ಒಂದೇ ದಿನ ಲೋಕದಿಂದ ಹೊರಟು ಹೋದರು.

ಮುಂದಿನ ಪ್ರಸ್ತಾಪ ಹಮೀದ್ ಅಗ್ ಅಬ್ದುರ್ರಹ್ಮಾನ್ ಸಾಹಿಬ್‌ರದ್ದಾಗಿದೆ. ಇವರು ರೈತರಾಗಿದ್ದರು. 1999ರಲ್ಲಿ ಬೈಅತ್ ಮಾಡಿದ್ದರು. ಪರಿಶುದ್ಧ ಹೃದಯಿ ಮತ್ತು ತಾಳ್ಮೆಯುಳ್ಳವರಾಗಿದ್ದರು. ಜಮಾಅತಿನ ಕೆಲಸಗಳಲ್ಲಿ ಮೊದಲಿಗರ ಪಂಕ್ತಿಯಲ್ಲಿ ಗಣಿಸಲ್ಪಡುತ್ತಿದ್ದರು. ಇಮಾಂ ಸಾಹಿಬ್‌ರ ಸಹಾಯಕರಾಗಿದ್ದರು. ತನ್ನ ಕುಟುಂಬದವರನ್ನು ಕೂಡ ಜಮಾಅತಿನೊಂದಿಗೆ ಹೊಂದಿಕೊಂಡಿರಲು ಮತ್ತು ಜಮಾಅತಿನ ಕಾರ್ಯಕ್ರಮಗಳಲ್ಲಿ ಭಾಗಿಯಾಗಲು ಉಪದೇಶಿಸುತ್ತಿದ್ದರು. ಖಿಲಾಫತಿನೊಂದಿಗೆ ನಿಷ್ಠೆಯ ಸಂಬಂಧವನ್ನು ಇರಿಸಿಕೊಂಡಿದ್ದರು. ಬಹಳಷ್ಟು ಸಮಯವನ್ನು ಮಸೀದಿಯಲ್ಲಿ ಕಳೆಯುತ್ತಿದ್ದರು. ಎಂ.ಟಿ.ಎ.ದ ಪ್ರೋಗ್ರಾಮುಗಳನ್ನು ನೋಡುತ್ತಿರುತ್ತಿದ್ದರು. ವಿಶೇಷವಾಗಿ ಖುತ್ಬಗಳನ್ನು ನಿಯತವಾಗಿ ಮತ್ತು ಗಮನವಿಟ್ಟು ಕೇಳುತ್ತಿದ್ದರು.

ಸುಲಹ್ ಅಗ್ ಇಬ್ರಾಹೀಂ ಸಾಹಿಬ್: ಶಹಾದತಿನ ಸಮಯದಲ್ಲಿ ಅವರಿಗೆ 67 ವರ್ಷ ಪ್ರಾಯವಿದ್ದಿತ್ತು. ಇವರು ರೈತರಾಗಿದ್ದರು. ನಿಯತವಾಗಿ ಜಮಾಅತಾದ ನಮಾಝ್ ನಿರ್ವಹಿಸುತ್ತಿದ್ದರು. ಸರಿಯಾಗಿ ಚಂದಗಳನ್ನು ನೀಡುತ್ತಿದ್ದರು. ಮಜ್ಲಿಸ್ ಅನ್ಸಾರುಲ್ಲಾಹ್‌ದ ಕ್ರಿಯಾಶೀಲ ಸೇವಕರಾಗಿದ್ದರು. ಜಮಾಅತಿಗೆ ನಿಷ್ಠಾವಂತರಾಗಿದ್ದರು. ಇಬ್ರಾಹೀಮ್ ಸಾಹಿಬ್‌ರಿಗೆ ಸಹಾಯಕರಾಗಿದ್ದರು. ಅಲ್ಲಾಹನ ಅನುಗ್ರಹದಿಂದ ಅರಿವುಳ್ಳವರಾಗಿದ್ದರು. ಧಾರ್ಮಿಕ ಮತ್ತು ಶಿಕ್ಷಣ ಪರವಾದ ಮಾತುಕತೆಗಳನ್ನು ನಡೆಸುತ್ತಿದ್ದರು. ಅತ್ಯಂತ ತಾಳ್ಮೆಯುಳ್ಳ ಸಭ್ಯ ವ್ಯಕ್ತಿಯಾಗಿದ್ದರು. ಪ್ರತಿಯೊಬ್ಬರೊಡನೆ ಉತ್ತಮವಾಗಿ ವರ್ತಿಸುವುದು ಅವರ ಗುಣವಾಗಿತ್ತು. ಈ ದಿನಗಳಲ್ಲಿ ಈ ವರ್ಷ ಡೋರಿಯಿಂದ ಹೊರಟು ಯಾತ್ರೆ ಮಾಡುವುದು ಬಹಳ ಧೈರ್ಯದ ಕೆಲಸವಾಗಿದೆ. ಏಕೆಂದರೆ ಎಲ್ಲೆಡೆ ಭಯೋತ್ಪಾದಕರು ಆತಂಕವನ್ನು ಹರಡಿರುವರು. ಆದರೂ ಎಲ್ಲ ಅಪಾಯಗಳನ್ನು ನೋಡಿಯೂ ಅವರು ಮಹ್ದಿಯಾಬಾದಿನಿಂದ ಡಿಸೆಂಬರಿನ ಕೊನೆಯ ವಾರದಲ್ಲಿ ಬುರ್ಕಿನಾಫಾಸೋದಲ್ಲಿ ನಡೆಯುವ ಜಲ್ಸದಲ್ಲಿ ಭಾಗವಹಿಸಿದರು.

ಮುಂದಿನ ಪ್ರಸ್ತಾಪ ಉಸ್ಮಾನ್ ಅಗ್ ಸೋದೇ ಸಾಹಿಬ್‌ರದ್ದಾಗಿದೆ. ಅವರಿಗೆ 59 ವಯಸ್ಸಿತ್ತು. ನಿಷ್ಠಾವಂತ ಮತ್ತು ತ್ಯಾಗಶೀಲ ಅಹ್ಮದಿಯಾಗಿದ್ದರು. ಜಮಾಅತಿಗಾಗಿ ಸಂಪತ್ತು ಮತ್ತು ಸಮಯವನ್ನು ತ್ಯಾಗ ಮಾಡುವವರಾಗಿದ್ದರು. ಕೊನೆಗೆ ಅಲ್ಲಾಹನಿಗಾಗಿ ಜೀವತ್ಯಾಗವನ್ನು ಮಾಡಲು ಸೌಭಾಗ್ಯವನ್ನು ಪಡೆದರು. ಮಹ್‌ದಿಯಾಬಾದಿನ ಮಸೀದಿ ನಿರ್ಮಾಣದಲ್ಲಿ ಉತ್ಸಾಹದಿಂದ ಭಾಗವಹಿಸಿದ್ದರು. ಮಸೀದಿಯ ನಿರ್ಮಾಣ ಕಾಲದಲ್ಲಿ ನೀರನ್ನು ತರುತ್ತಿದ್ದರು ಮತ್ತು ಕೆಲಸಗಳಲ್ಲಿ ನಿರಂತರವಾಗಿ ಸಹಕರಿಸುತ್ತಿದ್ದರು. ಐದು ಹೊತ್ತಿನ ನಮಾಝ್‌ಗಳು ಮತ್ತು ತಹಜ್ಜುದ್ ನಮಾಝ್‌ಗಳನ್ನು ನಿಯತವಾಗಿ ನಿರ್ವಹಿಸುತ್ತಿದ್ದರು. ಸಂಪಾದಿಸುವುದರಲ್ಲಿ ಮೊದಲು ಚಂದದ ಹಣವನ್ನು ಪಾವತಿ ಮಾಡುತ್ತಿದ್ದರು. ಇಂತಹ ಚಿಂತೆಯಿರುವವರನ್ನು ಲಾಲಸೆಯಿಂದ ಬೈಅತ್ ಮಾಡಿರುವರು ಎಂದು ವಿರೋಧಿಗಳು ಹೇಳುವ ಹಾಗೆ ಯೋಚಿಸಲು ಸಾಧ್ಯವೇ? ಇವರು ವ್ಯಾಪಾರಿಯಾಗಿದ್ದರು. ಅತ್ಯಂತ ನಿಷ್ಠಾವಂತರಾಗಿದ್ದರು.

ಮುಂದಿನ ಪ್ರಸ್ತಾಪ ಅಗ್ ಅಲಿ ಅಗ್ ಮಗೋಯೇಲ್ ಸಾಹಿಬ್‌ರದ್ದಾಗಿದೆ. 1970ರಲ್ಲಿ ಜನಿಸಿದ್ದರು. ತಮ್ಮ ಪಿತನ ಜೊತೆಗೆ 1999ರಲ್ಲಿ ಅಹ್ಮದಿಯ್ಯತ್ ಸ್ವೀಕಾರ ಮಾಡಿಕೊಂಡಿದ್ದರು. ಇವರು ರೈತರಾಗಿದ್ದರು. ಬಿಲಾರೇ ಜಮಾಅತಿನ ಮುಅದ್ದಿನ್ ಆಗಿದ್ದರು. ಬಹಳ ನಿಷ್ಠಾವಂತ ಅಹ್ಮದಿಯಾಗಿದ್ದರು. ನಮಾಝ್‌ಗಳಲ್ಲಿ ಮತ್ತು ಚಂದಗಳಲ್ಲಿ ಉತ್ಸಾಹದಿಂದ ಭಾಗವಹಿಸುತ್ತಿದ್ದರು.

ಮುಂದಿನ ಪ್ರಸ್ತಾಪ ಮೂಸಾ ಅಗ್ ಅದ್‌ರಾಹಿ ಸಾಹಿಬ್: ಶಹಾದತಿನ ಸಮಯದಲ್ಲಿ ಅವರಿಗೆ 53 ವರ್ಷ ಪ್ರಾಯವಿದ್ದಿತ್ತು. ಇವರು ರೈತರಾಗಿದ್ದರು. ತಹಜ್ಜುದ್ ಮತ್ತು ಇತರ ನಮಾಝ್‌ಗಳನ್ನು ನಿಯತವಾಗಿ ನಿರ್ವಹಿಸುತ್ತಿದ್ದರು. ಮಗ್ರಿಬ್ ನಮಾಝಿಗೆ ಬಂದರೆ ಇಶಾ ನಮಾಝಿನ ನಂತರವೇ ಮರಳಿ ಹೋಗುತ್ತಿದ್ದರು. ಆ ನಡುವೆ ದೇವಸ್ಮರಣೆಯಲ್ಲಿ ನಿರತರಾಗುತ್ತಿದ್ದರು. ಒಬ್ಬ ನಿಷ್ಠಾವಂತ ಮತ್ತು ತ್ಯಾಗಶೀಲ ಅಹ್ಮದಿ ಎಂಬುದಕ್ಕೆ ಮಾದರಿಯಾಗಿದ್ದರು. ನನಗೆ ನಿಯತವಾಗಿ ದುಆಗಾಗಿ ಪತ್ರಗಳನ್ನು ಬರೆಯುತ್ತಿದ್ದರು.

ಆಗೋಮ ಅಗ್ ಅಬ್ದುರ್ರಹ್ಮಾನ್ ಸಾಹಿಬ್: ಶಹಾದತಿನ ಸಮಯದಲ್ಲಿ ಅವರಿಗೆ 44 ವರ್ಷ ಪ್ರಾಯವಿದ್ದಿತ್ತು. ಇವರು ಶಹೀದ್‌ರಲ್ಲಿ

ಅತ್ಯಂತ ಕಿರಿಯರಾಗಿದ್ದರು. 1999ರಲ್ಲಿ 20ನೇ ವಯಸ್ಸಿನಲ್ಲಿ ಅಹ್ಮದಿಯ್ಯತ್ ಸ್ವೀಕಾರ ಮಾಡಿಕೊಂಡಿದ್ದರು. ಅನಂತರ ಜಮಾಅತಿನೊಂದಿಗೆ ನಿಷ್ಠೆ ಮತ್ತು ಪ್ರಾಮಾಣಿಕತೆಯಲ್ಲಿ ಅಭಿವೃದ್ಧಿಗೊಂಡರು. ಅತ್ಯಂತ ನಿಷ್ಠಾವಂತ ಮತ್ತು ತ್ಯಾಗಶೀಲ ಅಹ್ಮದಿಯಾಗಿದ್ದರು. ಇಮಾಮ್ ಸಾಹಿಬ್‌ರಿಗೆ ಸಹಾಯಕರಾಗಿದ್ದರು. ನಾಇಬ್ ಇಮಾಂ ಆಗಿರುವೆನು ಎಂದು ಅವರು ಭಯೋತ್ಪಾದಕರೊಡನೆ ಯಾವುದೇ ಹಿಂಜರಿಕೆ ಇಲ್ಲದೆ ಹೇಳಿದರು. ಮಸೀದಿಗೆ ಮೊದಲೇ ತಲುಪುತ್ತಿದ್ದರು. ಬಹಳ ವಿನಮ್ರತೆಯಿಂದ ನಮಾಝ್ ನಿರ್ವಹಿಸುತ್ತಿದ್ದರು. ನಿಯತವಾಗಿ ತಹಜ್ಜುದ್ ನಿರ್ವಹಿಸುವವರಾಗಿದ್ದರು. ಮಸೀದಿಗೆ ತಮ್ಮ ಮಕ್ಕಳನ್ನು ಸಹ ತರುತ್ತಿದ್ದರು. ಅವರ ತರಬೇತಿಯ ಬಗ್ಗೆ ಬಹಳ ಕಾಳಜಿ ವಹಿಸುತ್ತಿದ್ದರು. ನನಗೆ ನಿಯತವಾಗಿ ಪತ್ರಗಳನ್ನು ಬರೆಯುತ್ತಿದ್ದರು. ಸೈಕಲ್ ಚಲಾಯಿಸುವುದರಲ್ಲಿ ಬಹಳ ನುರಿತರಾಗಿದ್ದರು. ಪೂರ್ತಿ ಪ್ರದೇಶದಲ್ಲಿ ದೀರ್ಘವಾದ ಸೈಕಲ್ ಯಾತ್ರೆ ನಡೆಸುತ್ತಿದ್ದರು. ನಾಲ್ಕು ಬಾರಿ 265 ಕಿ.ಮಿ. ಯಾತ್ರೆ ಮಾಡಿಕೊಂಡು ವಾಗಾಡಾಗೂ ಖುದ್ದಾಮುಲ್ ಅಹ್ಮದಿಯಾ ಇಜ್ತಿಮಾದಲ್ಲಿ ಭಾಗವಹಿಸಿದ್ದರು. 8 ವ್ಯಕ್ತಿಗಳನ್ನು ಶಹೀದ್ ಮಾಡಲಾದಾಗ ಕಿರಿಯವರಾಗಿ ಇವರು ಇದ್ದರು. ಆದರೆ ಬಹಳ ಧೈರ್ಯದಿಂದ ಅವರು ಹೀಗೆ ಹೇಳಿದರು: ಯಾವ ಮಾರ್ಗದಲ್ಲಿ ಹಿರಿಯರು ಜೀವತ್ಯಾಗ ಮಾಡಿರುವರೋ ನಾನು ಕೂಡ ಜೀವತ್ಯಾಗ ಮಾಡಲು ತಯಾರಾಗಿರುವೆನು. ಭಯೋತ್ಪಾದಕರು ಕ್ರೂರವಾಗಿ ಅವರ ಮುಖದ ಮೇಲೆ ಗುಂಡು ಹಾರಿಸಿಕೊಂಡು ಅವರನ್ನು ಶಹೀದ್ ಮಾಡಿದರು.

ಪ್ರತಿಯೊಬ್ಬರ ಹೆಸರಿನ ಜೊತೆಗೆ ಅಗ್ ಎಂಬ ಪದ ಇದೆ. ಈ ಪದದ ಅರ್ಥ ಪುತ್ರ ಎಂದಾಗಿದೆ.

ಒಟ್ಟಿನಲ್ಲಿ ಇವರು ಅಹ್ಮದಿಯ್ಯತ್ತಿನ ಬೆಳಗುವ ನಕ್ಷತ್ರಗಳಾಗಿರುವರು. ಇವರು ತಮ್ಮ ಹಿಂದೆ ಒಂದು ಮಾದರಿಯನ್ನು ಬಿಟ್ಟು ಹೋಗಿರುವರು. ಅಲ್ಲಾಹನು ಅವರ ಮಕ್ಕಳ ನಿಷ್ಠೆ ಮತ್ತು ಪ್ರಾಮಾಣಿಕತೆಯನ್ನು ವರ್ಧಿಸಲಿ. ಈ ಶಹಾದತಿನಿಂದ ಈ ಪ್ರದೇಶದಲ್ಲಿ ಅಹ್ಮದಿಯ್ಯತ್ ಕೊನೆಗೊಳ್ಳುವುದು ಎಂದು ಎದುರಾಳಿಗಳು ಭಾವಿಸಿರುವರು. ಆದರೆ ಇಲ್ಲಿ ಅಹ್ಮದಿಯ್ಯತ್ ಮುಂಚೆಗಿಂತ ಹೆಚ್ಚಾಗಿ ವರ್ಧಿಸುವುದು. ಇನ್‌ಶಾ ಅಲ್ಲಾಹ್.

ಅಲ್ಲಿಯ ಅಮೀರ್ ಸಾಹಿಬ್‌ರು ಯುಕ್ತಿಪರವಾಗಿ ಅಲ್ಲಿ ತಬ್ಲೀಗಿನ ಪ್ರೋಗ್ರಾಮುಗಳು ನಡೆಸಬೇಕು ಮತ್ತು ಆ ಜನರನ್ನು ಸಮಾಧಾನ ಪಡಿಸಬೇಕು. ಅಲ್ಲಾಹನು ಅವರಿಗೆ ಸಹನೆ ಮತ್ತು ಧೈರ್ಯವನ್ನು ದಯಪಾಲಿಸಲಿ. ಅವರ ಹಿರಿಯರು ಯಾವ ಉದ್ದೇಶಕ್ಕಾಗಿ ತಮ್ಮ ಜೀವಗಳನ್ನು ಸಮರ್ಪಿಸಿರುವರೋ ಅದನ್ನು ಮನವರಿಕೆ ಮಾಡಲು ಮಕ್ಕಳಿಗೆ ಸೌಭಾಗ್ಯ ಲಭಿಸಲಿ.

ಶಹೀದರ ಕುಟುಂಬಗಳ ಆವಶ್ಯಕತೆಗಳನ್ನು ಈಡೇರಿಸಲು ಮತ್ತು ತಮ್ಮ ಸ್ವಂತ ಕಾಲುಗಳಲ್ಲಿ ನಿಲ್ಲುವಂತಾಗಲು ನಾಲ್ಕನೇ ಖಿಲಾಫತ್ ಕಾಲದಲ್ಲಿ ಸಯ್ಯದುನಾ ಬಿಲಾಲ್ ಫಂಡ್ ಶುರು ಮಾಡಲಾಗಿತ್ತು. ಅದರಿಂದ ಶಹೀದ್‌ರಿಗೆ ಖರ್ಚು ಮಾಡಲಾಗುತ್ತದೆ. ಶಹೀದ್‌ರಿಗೆ ಕೊಡಲು ಬಯಸುವವರು ಈ ಫಂಡ್‌ನಲ್ಲಿ ಪಾವತಿ ಮಾಡಿರಿ. ಇದು ಆ ಶಹೀದ್‌ರೊಡನೆ ಮಾಡುವ ಔದಾರ್ಯವಲ್ಲ. ಬದಲಾಗಿ ಅವರ ಆವಶ್ಯಕತೆಗಳ ಬಗ್ಗೆ ಕಾಳಜಿ ವಹಿಸುವುದು ನಮ್ಮ ಕರ್ತವ್ಯವಾಗಿದೆ. ಅದನ್ನು ಈಡೇರಿಸಿರಿ.

ಕೊನೆಗೆ ನಾನು ಹಝ್ರತ್ ಮಸೀಹ್ ಮೌಊದ್(ಅ)ರ ಒಂದು ಉಲ್ಲೇಖವನ್ನು ಮುಂದಿರಿಸುತ್ತೇನೆ. ಅವರು ಹೇಳುತ್ತಾರೆ: ಅಲ್ಲಾಹನು ನಿಮ್ಮನ್ನು ವ್ಯರ್ಥಗೊಳಿಸುವನು ಎಂದು ಭಾವಿಸಬೇಡಿರಿ. ನೀವು ಅಲ್ಲಾಹನ ಕೈಯಿಂದ ನೆಲದಲ್ಲಿ ಬಿತ್ತಲ್ಪಟ್ಟ ಬೀಜವಾಗಿದ್ದೀರಿ. ಈ ಬೀಜ ಬೆಳೆಯುವುದು ಮತ್ತು ಫಲ ನೀಡುವುದು. ಅದರ ರೆಂಬೆಗಳು ಎಲ್ಲೆಡೆ ಹರಡುವುವು ಮತ್ತದು ದೊಡ್ಡದಾದ ಒಂದು ಮರವಾಗುವುದು. ಇನ್‌ಶಾ ಅಲ್ಲಾಹ್. ಅಲ್ಲಾಹನ ಮಾತನ್ನು ನಂಬುವವನು ಮತ್ತು ಮಧ್ಯದಲ್ಲಿ ಬರುವ ಆಪತ್ತುಗಳಿಗೆ ಹೆದರದೇ ಇರುವವನು ಅನುಗ್ರಹೀತನು. ಏಕೆಂದರೆ ನಿಮ್ಮನ್ನು ಪರೀಕ್ಷಿಸಲಿಕ್ಕಾಗಿ ಆಪತ್ತುಗಳು ಬರುವುದು ಅವಶ್ಯ.

(ಅಲ್‌ವಸಿಯ್ಯತ್, ರೂಹಾನಿ ಖಝಾಇನ್, ಸಂಪುಟ–20, ಪುಟ–309)

ಒಟ್ಟಿನಲ್ಲಿ ಈ ತ್ಯಾಗ ಮಾಡುವವರು ಈ ಪರೀಕ್ಷೆಯಲ್ಲಿ ತೇರ್ಗಡೆಯಾದರು. ಈಗ ಹಿಂದೆ ಉಳಿದವರ ದೃಢವಿಶ್ವಾಸದ ಪರೀಕ್ಷೆಯಾಗಿದೆ. ನಂಬಿಕೆ ಮತ್ತು ದೃಢವಿಶ್ವಾಸದಲ್ಲಿ ನೆಲೆನಿಲ್ಲಲು ಅಲ್ಲಾಹನು ನಮ್ಮೆಲ್ಲರಿಗೂ ಸೌಭಾಗ್ಯ ನೀಡಲಿ. ಅಲ್ಲಾಹನು ಈ ಶಹೀದ್‌ರ ಪದವಿಗಳನ್ನು ವರ್ಧಿಸಲಿ, ಅದನ್ನು ಫಲವತ್ತನ್ನಾಗಿ ಮಾಡಲಿ, ಅದರ ಪರಿಣಾಮವಾಗಿ ಹಝ್ರತ್ ಪೈಗಂಬರ್(ಸ)ರ ಅಧ್ಯಾಪನೆ ಲೋಕದಲ್ಲಿ ಹರಡುವುದನ್ನು ನಾವು ಕಾಣುವಂತಾಗಲಿ. ಮೌಢ್ಯತೆ ಲೋಕದಿಂದ ಕೊನೆಗೊಳ್ಳಲಿ ಮತ್ತು ಏಕದೇವನ ನೈಜ ಆಡಳಿತ ಲೋಕದಲ್ಲಿ ನೆಲೆನಿಲ್ಲಲಿ.

ಈ ಶಹಾದ್ ಹೊಂದಿರುವವರ ಜನಾಝವನ್ನು ನಾನು ನಿರ್ವಹಿಸುವೆನು ಅವರೊಂದಿಗೆ ಇನ್ನೆರು ನಿಷ್ಠಾವಂತರ ಪ್ರಸ್ತಾಪವೂ ಇದೆ, ಅವರಲ್ಲಿ ಒಬ್ಬರು ಡಾ॥ ಕರೀಮುಲ್ಲಾಹ್ ಝೆರ್ವಿ ಸಾಹಿಬ್ ಆಗಿದ್ದಾರೆ ಅವರು ಸೂಫಿ ಖುದಾಬಖ್ಷ್ ಝೆರ್ವಿ ಸಾಹಿಬ್ ಅವರ ಪುತ್ರರಾಗಿದ್ದಾರೆ. ಇವರು ಅಮೇರಿಕಾದಲ್ಲಿ ವಾಸಿಸುತ್ತಾರೆ. ಅವರು ಜನವರಿ 4 ರಂದು ಎಂಬತ್ತಮೂರನೇ ವಯಸ್ಸಿನಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್** ಅಲ್ಲಾಹನ ಅನುಗ್ರಹದಿಂದ ಅವರು ಮೂಸಿಯಾಗಿದ್ದರು.

ಅವರ ತಂದೆ ಸೂಫಿ ಖುದಾ ಬಕ್ಷ್ ಸಾಹಿಬ್ 1928 ರಲ್ಲಿ ಹದಿನೇಳನೇ ವಯಸ್ಸಿನಲ್ಲಿ ಖಾದಿಯಾನ್‌ಗೆ ಹೋಗಿ ಖಲೀಫತುಲ್ ಮಸೀಹ್ ಸಾನಿಯವರ ಕೈ ಮೇಲೆ ಬೈಅತ್ ಮಾಡಿದರು. ಕರೀಮುಲ್ಲಾ ಝೈರ್ವಿ ಸಾಹಿಬ್ ಅವರು ಹಝ್ರತ್ ಮಲಿಕ್ ಸೈಫುರ್ ರೆಹಮಾನ್ ಸಾಹಿಬ್ ಅವರ ಅಳಿಯ ಕೂಡ ಆಗಿದ್ದರು. ಅವರು ಮಹಾನ್ ವಿದ್ವಾಂಸರಾಗಿದ್ದರು. ಅವರು ಕೆಲವು ಪುಸ್ತಕಗಳನ್ನೂ ಬರೆದಿದ್ದಾರೆ. ಜಮಾಅತಿನ ಸೇವೆಯಲ್ಲೂ ಸಾಕಷ್ಟು ಯಶಸ್ಸು ಗಳಿಸಿದ್ದಾರೆ. ಅಲ್ಲಾಹನು ಅವರಿಗೆ ಮಗ್‌ಫಿರತ್ ಹಾಗೂ ಕರುಣೆಯನ್ನು ನೀಡಲಿ.

ಎರಡನೇಯ ಜನಾಝ ಕರೀಮುಲ್ಲಾ ಝೈರ್ವಿ ಸಾಹಿಬ್ ಅವರ ಪತ್ನಿ ಅಮತುಲ್ ಲತೀಫ್ ಝೈರ್ವಿ ಸಾಹಿಬರವರದ್ದಾಗಿದೆ. ಅವರು ಅಮೇರಿಕಾದಲ್ಲಿ ವಾಸಿಸುತ್ತಿದ್ದರು ಮತ್ತು ಮಲಿಕ್ ಸೈಫುರ್ ರೆಹಮಾನ್ ಸಾಹಿಬ್ ಅವರ ಪುತ್ರಿಯಾಗಿದ್ದರು. ಎಪ್ಪತ್ತೆಂಟನೇ ವಯಸ್ಸಿನಲ್ಲಿ ಪತಿಯ ಮರಣದ ಎರಡು ದಿನಗಳ ನಂತರ ಜನವರಿ 6 ರಂದು ಅವರು ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್.**

ದಿವಂಗತರು ಮೂಸಿಯಾ ಆಗಿದ್ದರು ಮತ್ತು ನಾನು ಹೇಳಿದಂತೆ ಅವರು ಮಲಿಕ್ ಸೈಫುರ್ ರೆಹಮಾನ್ ಸಾಹಿಬ್ ಅವರ ಪುತ್ರಿಯಾಗಿದ್ದರು. ಅವರ ತಾಯಿಯ ಹೆಸರು ಅಮತುರ‍್ರಶೀದ್ ಶೌಕತ್ ಆಗಿತ್ತು ಅವರು ಮಿಸ್ಬಾಹ್ ರಬ್ವಾಹ್ ನಿಯತಕಾಲಿಕದ ಸಂಪಾದಕರಾಗಿದ್ದರು. ಅವರು ಖಾದಿಯಾನ್‌ನಲ್ಲಿ ಜನಿಸಿದರು. ಅವರು ಉತ್ತಮ ಶೈಕ್ಷಣಿಕ ಅಭಿರುಚಿಯ ಮಹಿಳೆಯಾಗಿದ್ದರು. ಅವರು ಅಕ್ಷರಸ್ಥರಾಗಿದ್ದರು. ಎಂ.ಎಸ್ಸಿ ಪದವಿಯನ್ನು ಗಳಿಸಿದ್ದರು. ಜಮಾಅತಿನ ಸೇವೆಯನ್ನೂ ಸಹ ಸಲ್ಲಿಸಿದ್ದಾರೆ. ದಿವಂಗತರಿಗೆ ಅಲ್ಲಾಹನು ಮಗ್‌ಫಿರತ್ ಮತ್ತು ಕರುಣೆಯನ್ನು ನೀಡಲಿ. ಅವರ ಸಹೋದರ ಮಲಿಕ್ ಮುಜೀಬುರ್ ರೆಹಮಾನ್ ಸಾಹಿಬ್ ಅವರು ತಮ್ಮ ಸಹೋದರಿ ಮತ್ತು ಭಾವ ಅವರ ಬಗ್ಗೆ ಬರೆಯುತ್ತಾರೆ, ಅವರು ತುಂಬಾ ಪ್ರೀತಿಯ ಜೋಡಿಯಾಗಿದ್ದರು. ಅವರು ಅನೇಕ ಕಷ್ಟಗಳನ್ನು ಸಹಿಸಿಕೊಂಡರು ಆದರೆ ಯಾವುದರ ಬಗ್ಗೆಯೂ ದೂರಲಿಲ್ಲ. ಅವರು ಯಾರ ಬಗ್ಗೆಯೂ ನಕಾರಾತ್ಮಕವಾಗಿ ಮಾತನಾಡುವುದನ್ನು ನಾನು ನೋಡಿಲ್ಲ. ಅವರಿಬ್ಬರೂ ಸಹ ಜ್ಞಾನದ ಆಳವಾದ ಸಾಗರಗಳಾಗಿದ್ದವು. ಅವರು ಎಲ್ಲರನ್ನೂ ಪ್ರೀತಿಸುತ್ತಿದ್ದರು, ಅವರ ಅಗತ್ಯಗಳನ್ನು ನೋಡಿಕೊಳ್ಳುತ್ತಿದ್ದರು ಮತ್ತು ತಮ್ಮ ಜೀವನದ ಕೊನೆಯ ಕ್ಷಣಗಳವರೆಗೆ ಅಪಾರ ಪ್ರೀತಿಯನ್ನು ನೀಡುತ್ತಿದ್ದರು. ಮಾಶಾ ಅಲ್ಲಾಹ್ ಅವರು ಉತ್ತಮ ಜೀವನವನ್ನು ನಡೆಸಿದರು. ಅವರು ತಮ್ಮ ಸಮಾಜ ಮತ್ತು ಪರಿಸರದಲ್ಲಿ ಇತರರ ಮೇಲೆ ಬಹಳ ಧನಾತ್ಮಕ ಪ್ರಭಾವ ಬೀರುವವರಾಗಿದ್ದರು. ಅಲ್ಲಾಹನು ಅವರಿಗೆ ಮಗ್‌ಫಿರತ್ ನೀಡಲಿ.

...*...*...*...

*(ಪುಟ ಸಂಖ್ಯೆ 01ರ ಉಳಿದ ಭಾಗ)*

ಮತ್ತು ಅಲ್ಲಾಹೇತರ ನಾಮದಲ್ಲಿ ಅರ್ಪಿಸಲ್ಪಟ್ಟದ್ದನ್ನು ಅವನು ನಿಮಗೆ ನಿಷಿದ್ಧಗೊಳಿಸಿದ್ದಾನೆ. ಆದರೆ ಯಾರಾದರೂ ಸ್ವಯಂ ಇಚ್ಛಿಸದೆಯೂ ಮೇರೆ ಮೀರದೆಯೂ ನಿರ್ಬಂಧಿಸಲ್ಪಟ್ಟರೆ, ಆಗ ಖಂಡಿತವಾಗಿಯೂ ಅಲ್ಲಾಹನು ಕ್ಷಮಾಶೀಲನೂ ಕಾರುಣ್ಯವಂತನೂ ಆಗಿದ್ದಾನೆ.) ಇದರ ವ್ಯಾಖ್ಯಾನದಲ್ಲಿ ಹೇಳುತ್ತಾರೆ:

ವಸ್ತುಗಳ ಪಾವಿತ್ರ್ಯತೆ ಮತ್ತು ಪಾವಿತ್ರ್ಯವೇ ಮೂಲ ಪಾವಿತ್ರ್ಯತೆ ಆಗಿದೆ ಮತ್ತು ಪಾವಿತ್ರ್ಯವು ಬಂಧನವಾಗಿದೆ ಎಂದು ಪವಿತ್ರ ಖುರ್‌ಆನ್‌ನ ಪದಗಳು ಸೂಚಿಸುತ್ತವೆ. ಸರ್ವಶಕ್ತನಾದ ಅಲ್ಲಾಹನು ಅನುಮತಿಸಿರುವುದನ್ನು ಹೊರತುಪಡಿಸಿ ಎಲ್ಲವನ್ನೂ (ಹರಾಮ್)ನಿಷೇಧಿಸಲಾಗಿದೆ ಎಂದು ಕೆಲವರು ಭಾವಿಸುತ್ತಾರೆ, ಏಕೆಂದರೆ ಅಲ್ಲಾಹನೇ ಒಡೆಯನಾಗಿದ್ದಾನೆ ಮತ್ತು ಒಡೆಯನ ಅನುಮತಿಯಿಲ್ಲದೆ ಯಾವುದನ್ನಾದರೂ ಬಳಸುವುದು ಅನುಮತಿಸುವುದಿಲ್ಲ. ಆದರೆ ಇದು ನಿಜವಲ್ಲ ಏಕೆಂದರೆ ಸರ್ವಶಕ್ತನಾದ ಅಲ್ಲಾಹನು ಹೇಳಿದ್ದಾನೆ: ನಾನು ಸೃಷ್ಟಿಸಿರುವ ಪ್ರತಿಯೊಂದು ವಸ್ತು ಮನುಷ್ಯನಿಗಾಗಿ ರಚಿಸಲ್ಪಟ್ಟಿದೆ ಮತ್ತು ಅವನಿಗೆ ಅಧೀನವಾಗಿದೆ. ಆದ್ದರಿಂದ ಈ ಸಾಮಾನ್ಯ ಆದೇಶದೊಂದಿಗೆ, ಪಥ್ಯದಿಂದ ಅಥವಾ ಚಿಹ್ನೆಯಿಂದ ನಿಷೇಧಿಸಲ್ಪಟ್ಟಿರುವುದನ್ನು ಹೊರತುಪಡಿಸಿ ಎಲ್ಲವೂ ಮನುಷ್ಯನಿಗೆ ಅನುಮತಿಸಲ್ಪಟ್ಟಿತು.

ಈ ಆಯತ್‌ನಲ್ಲಿ **"ಲಹ್ಮುಲ್ ಖಿನ್‌ಝೀರ್"** ಎಂದು ಹೇಳಿರುವ ಬಗ್ಗೆ ನ್ಯಾಯಶಾಸ್ತ್ರಜ್ಞರಲ್ಲಿ ಭಿನ್ನಾಭಿಪ್ರಾಯವಿದೆ, ಮಾಂಸದಲ್ಲಿ ಕೊಬ್ಬು ಸೇರಿದೆಯೇ ಅಥವಾ ಇಲ್ಲವೇ. ಆದರೆ ನಿಘಂಟಿನಲ್ಲಿ **ಶಹ್‌ಮು** ಎಂದರೆ ಕೊಬ್ಬನ್ನು **ಲಹಮುನ್**‌ನಿಂದ ಬೇರೆ ರೀತಿ ಎಂದು ಪರಿಗಣಿಸಲಾಗುತ್ತದೆ ಆದರೆ ಮಾಂಸದ ಹೆಸರು ಕೊಬ್ಬನ್ನು ಒಳಗೊಂಡಿರುತ್ತದೆ ಎಂದು ವ್ಯಾಖ್ಯಾನಕಾರರು ಹೇಳುತ್ತಾರೆ. ವ್ಯಾಖ್ಯಾನಕಾರರ ವಾದವು ರುಚಿಕರವಾಗಿದೆ ಮತ್ತು ಈ ಸಂಚಿಕೆಯಲ್ಲಿ ನಿಘಂಟುಕಾರರ ಮಾತು ಹೆಚ್ಚು ವಿಶ್ವಾಸಾರ್ಹವಾಗಿದೆ. ಆದರೆ ಅದರ ಹೊರತಾಗಿಯೂ, ನನ್ನ ಪ್ರಕಾರ, ಹಂದಿಯ ಕೊಬ್ಬನ್ನು ಅನುಮತಿಸಲಾಗುವುದಿಲ್ಲ ಮತ್ತು ಇದಕ್ಕೆ ಕಾರಣವೆಂದರೆ ಪ್ರವಾದಿ ಸಲ್ಲಲ್ಲಾಹು ಅಲೈಹಿವಸಲ್ಲಮರು ಸತ್ತ ಪ್ರಾಣಿಯ ಕೊಬ್ಬನ್ನು ನಿಷೇಧಿಸಲಾಗಿದೆ ಎಂದು ಹೇಳಿದ್ದಾರೆ. ಹಂದಿಯ ನಿಷೇಧ ಮತ್ತು ಸತ್ತ ಪ್ರಾಣಿಯ ನಿಷಧವನ್ನು ಒಂದೇ ಆಯತ್ತಿನಲ್ಲಿ ಮತ್ತು ಒಂದೇ ಪದಗಳಲ್ಲಿ ವಿವರಿಸಲಾಗಿದೆ. ಆದ್ದರಿಂದ ಎರಡರ ಕ್ರಮವನ್ನು ಒಂದು ಪ್ರಕಾರವಾಗಿ ಪರಿಗಣಿಸಲಾಗುತ್ತದೆ. ಆದರೆ ಹಂದಿಯ ಚರ್ಮವನ್ನು ತಿನ್ನುವುದಿಲ್ಲವಾದ್ದರಿಂದ ಅದರ ಬಳಕೆಯನ್ನು ಅನುಮತಿಸಲಾಗುವುದು.

ಹಝ್ರತ್ ಉಮ್ಮೆ ಸಲ್ಮಾ(ರ) ಅವರ ಒಂದು ಮೇಕೆ ಸಾವನ್ನಪ್ಪಿದ ಘಟನೆಯನ್ನು ಹದೀಸ್‌ಗಳಲ್ಲಿ ವಿವರಿಸಲಾಗಿದೆ. ಕೆಲವು ಪುರುಷರು ಅದನ್ನು ಹೊರಗೆ ಹೊತ್ತೊಯ್ಯುತ್ತಿದ್ದರು. ಪ್ರವಾದಿ(ಸ) ರವರು ಅವರಿಗೆ, "ನೀವು ಅದರ ಚರ್ಮವನ್ನು ಏಕೆ ತೆಗೆದುಕೊಳ್ಳುತ್ತಿಲ್ಲ?" ಎಂದು ಹೇಳಿದರು ಅದಕ್ಕೆ ಅವರು ಓ ಅಲ್ಲಾಹನ ಸಂದೇಶವಾಹಕರೇ, ಇದು ಮೃತ ದೇಹವಾಗಿದೆ ಎಂದು ಹೇಳಿದರು ಅದಕ್ಕೆ ಪ್ರವಾದಿ(ಸ) ಕೇಳಿದರು ನೀವು ಅದನ್ನು ತಿನ್ನಲು ಬಯಸುತ್ತೀರಾ?

ಹಾಗಾಗಿ ಮಾಂಸ ನಿಷಿದ್ಧವಾಗಿರುವುದರ ಚರ್ಮವನ್ನು ಬಳಸುವುದರಲ್ಲಿ ಯಾವುದೇ ತೊಂದರೆ ಇಲ್ಲ ಎಂದು ತಿಳಿದುಬಂದಿದೆ. ಹೌದು, ಹಂದಿಯ ಕೂದಲಿನಿಂದ ಮಾಡಿದ ಕುಂಚಗಳನ್ನು ಅಸಹ್ಯಕರ ಎಂದು ಕರೆಯಲಾಗುತ್ತದೆ ಏಕೆಂದರೆ ಅವುಗಳನ್ನು ಬಾಯಿಗೆ ಹಾಕಲಾಗುತ್ತದೆ, ಇದು ಆಹಾರದ ಪ್ರವೇಶದ್ವಾರವಾಗಿದೆ. **(ತಫ್ಸೀರ್ ಕಬೀರ್, ಸಂಪುಟ-4, ಪುಟ-260, ಪ್ರಕಟಿತ ಖಾದಿಯಾನ್ 2010)**

**ವಾಖಿಫೀನೆ ಝಿಂದಗಿ ಹಾಗೂ ಧರ್ಮೋಪದೇಶ ಮತ್ತು ತರಬೇತಿಯ ಕರ್ತವ್ಯವನ್ನು ನಿರ್ವಹಿಸಬಲ್ಲ ಧಾರ್ಮಿಕ ಜ್ಞಾನವನ್ನು ಹೊಂದಿರುವವರ ಅಗತ್ಯವು ಹೆಚ್ಚುತ್ತಿದೆ. ಆದ್ದರಿಂದ, ಈ ಕೆಲಸವನ್ನು ವಿಶೇಷವಾಗಿ ಮಾಡುವ ಒಂದು ಗುಂಪು ಇರಬೇಕು.**
**ನಿಮ್ಮ ಮಕ್ಕಳನ್ನು ಜಾಮಿಯ ಅಹ್ಮದೀಯಾದಲ್ಲಿ ಶಿಕ್ಷಣವನ್ನು ಪಡೆಯಲು ಅರ್ಪಿಸಿ**

ಹಝ್ರತ್ ಅಮೀರ್-ಉಲ್-ಮುಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್(ಅತಬಿಅ)ರವರು ನುಡಿಯುತ್ತಾರೆ:

ಜಮಾಅತ್ತಿನ ಅಗತ್ಯಗಳು ಹೆಚ್ಚಾದಂತೆ ತಬ್ಲೀಗಿನ ಕ್ಷೇತ್ರ ಮತ್ತು ಇತರ ಸೇವಾ ಕ್ಷೇತ್ರಗಳಲ್ಲಿ ವಾಖಿಫೀನೆ ಝಿಂದಗಿಯರ ಮತ್ತು ಮುಬಲ್ಲಿಗೀನರ (ಪ್ರಚಾರಕರು) ಅಗತ್ಯವಿದೆ. ಈ ವಿಸ್ತರಣೆಯಾಗುತ್ತಿದ್ದಂತೆ ಕೆಲಸವು ಸಹ ಹೆಚ್ಚುತ್ತಿದೆ, ಅಹ್ಮದಿಯತ್‌ನ ಸಂದೇಶ ಹರಡುತ್ತಿದೆ. ಜಗತ್ತು ಕೂಡ ಅಹ್ಮದಿಯತ್ ಅನ್ನು ಸ್ವೀಕರಿಸುತ್ತಾ ಇದೆ. ಇದರೊಂದಿಗೆ, ವಾಖಿಫೀನೆ ಝಿಂದಗಿ ಹಾಗೂ ಧರ್ಮೋಪದೇಶ ಮತ್ತು ತರಬೇತಿಯ ಕರ್ತವ್ಯವನ್ನು ನಿರ್ವಹಿಸಬಲ್ಲ ಧಾರ್ಮಿಕ ಜ್ಞಾನವನ್ನು ಹೊಂದಿರುವವರ ಅಗತ್ಯವು ಹೆಚ್ಚುತ್ತಿದೆ......... ಜಮಾಅತ್ತಿನ ಪ್ರತಿಯೊಬ್ಬ ವ್ಯಕ್ತಿಯು ಯಾವಾಗಲೂ ತಬ್ಲೀಗ್‌ನಲ್ಲಿ ಅಥವಾ ತರಬೇತಿ ನೀಡುವುದರಲ್ಲಿ ನಿರತರಾಗಿರಲು ಸಾಧ್ಯವಿಲ್ಲ ಆದ್ದರಿಂದ, ಈ ಕೆಲಸವನ್ನು ವಿಶೇಷವಾಗಿ ಮಾಡುವ ಒಂದು ಗುಂಪು ಇರಬೇಕು ಎಂದು ಅಲ್ಲಾಹನು ಹೇಳಿರುವನು. ಇನ್ನೊಂದು ಸ್ಥಳದಲ್ಲಿ, ಉಮ್ಮತ್ತಿನ ಪ್ರತಿಯೊಬ್ಬ ವ್ಯಕ್ತಿಗೂ ಒಳ್ಳೆಯ ಕಾರ್ಯಗಳನ್ನು ಹರಡುವ, ಕೆಟ್ಟದ್ದನ್ನು ತಡೆಯುವ ಮತ್ತು ಅಲ್ಲಾಹನ ಕಡೆಗೆ ಆಹ್ವಾನಿಸುವ ಕರ್ತವ್ಯವನ್ನು ಪೂರೈಸುವ ಜವಾಬ್ದಾರಿಯನ್ನು ವಹಿಸಲಾಗಿದೆ. ಆದರೆ ಮತ್ತೆ ಹೇಳಿರುವುದು ಏಕೆಂದರೆ ಪ್ರಪಂಚದ ವ್ಯವಸ್ಥೆಯನ್ನು ಸಹ ನಡೆಸಬೇಕಾಗಿದೆ, ಆದ್ದರಿಂದ ಅದರಲ್ಲಿ ತೊಡಗಿರುವವರು ಯಾವಾಗಲೂ ಸಮಯವನ್ನು ನೀಡಲು ಸಾಧ್ಯವಿಲ್ಲ. ಧರ್ಮೋಪದೇಶ ಮತ್ತು ತರಬೇತಿಯ ಕೆಲಸವನ್ನು ಅತ್ಯುತ್ತಮ ರೀತಿಯಲ್ಲಿ ಮಾಡುವ ಮನೋಧರ್ಮ ಎಲ್ಲರಿಗೂ ಇರುವುದಿಲ್ಲ. ಮತ್ತು ಉಮ್ಮತ್ತಿನ ಎಲ್ಲಾ ಸದಸ್ಯರು ಧರ್ಮ ಮುಬಲ್ಲಿಗ್ ಮತ್ತು ಮುರಬ್ಬಿಯವರಿಗೆ ಅಗತ್ಯವಾದ ಧರ್ಮದ ತಿಳುವಳಿಕೆಯನ್ನು ಪಡೆಯಲು ಸಾಧ್ಯವಿಲ್ಲ. ಮತ್ತು ಎಲ್ಲಾ ಜನರಿಗೆ ವಿಶೇಷ ಗಮನದಿಂದ ತರಬೇತಿಯು ಸಹ ನೀಡಲು ಸಾಧ್ಯವಾಗುವುದಿಲ್ಲ. ಆದ್ದರಿಂದ, ಸರ್ವಶಕ್ತನಾದ ಅಲ್ಲಾಹನ ಆದೇಶಗಳನ್ನು, ಅನುಸರಿಸಬೇಕಾದ ಆಜ್ಞೆಗಳನ್ನು ಮತ್ತು ತಡೆಯಬೇಕಾದ ನಿಷೇಧಗಳನ್ನು ಪರಿಚಯ ಮಾಡಿಕೊಳ್ಳಲು, ಮತ್ತು ಅದರ ಆಳವಾದ ಬುದ್ಧಿವಂತಿಕೆಯನ್ನು ಕಲಿಯಲು ಮತ್ತು ನಂತರ ಅದನ್ನು ಹರಡಲು. ಧರ್ಮವನ್ನು ಪೂರ್ಣ ಗಮನದಿಂದ ಕಲಿಯುವ ಒಂದು ವಿಶೇಶ ಗುಂಪು ಇರಬೇಕು. ಮಾಶಾಅಲ್ಲಾಹ್, ತಮ್ಮ ಅಭಿರುಚಿ ಮತ್ತು ಹವ್ಯಾಸಗಳಿಂದ ಲೌಕಿಕ ಶಿಕ್ಷಣದ ಜೊತೆಗೆ ಧಾರ್ಮಿಕ ಜ್ಞಾನದ ಬಗ್ಗೆ ಉತ್ತಮ ತಿಳುವಳಿಕೆಯನ್ನು ಹೊಂದಿರುವ ಅನೇಕ ಜನರು ಜಮಾತ್‌ನಲ್ಲಿದ್ದಾರೆ. ಆದರೆ ಕೆಲವೊಮ್ಮೆ ಅಥವ ಸಾಮಾನ್ಯವಾಗಿಯೇ ಅವರ ಇತರ ಕಾರ್ಯಗಳ ಕಾರಣದಿಂದಾಗಿ ಸಮಯವನ್ನು ನೀಡುಲು ನಿರಂತರವಾಗಿ ಸಾಧ್ಯವಾಗುವುದಿಲ್ಲ. ಅದಾಗ್ಯೊ, ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ, ಧರ್ಮದ ಕೆಲಸಕ್ಕಾಗಿ ವಾಖಿಫೀನೆ ಝಿಂದಗಿಯರ ಗುಂಪು ಇರಬೇಕು ಮತ್ತು ಇಸ್ಲಾಂ ಸಾರ್ವತ್ರಿಕ ಧರ್ಮವಾಗಿರುವುದರಿಂದ ಅದು ಪ್ರತಿಯೊಂದು ಪಂಗಡದಿಂದ, ಅಂದರೆ ಪ್ರತಿಯೊಂದು ಗುಂಪಿನಿಂದ, ಪ್ರತಿ ವರ್ಗದಿಂದ, ಪ್ರತಿಯೊಂದು ವಿಭಾಗದಿಂದ ಜನರ ಜನರ ಗುಂಪು ಇರಬೇಕು. ತದನಂತರ ಮತ್ತಷ್ಟು ವಿಸ್ತರಿಸಿದರೆ, ಪ್ರತಿಯೊಂದು ಖೌಮಿನ(ಗೋತ್ರದಿಂದ) ಜನರು ಧರ್ಮವನ್ನು ಕಲಿಯಬೇಕು ಮತ್ತು ಮುಂದೆ ಕಲಿಸಬೇಕು ಎಂದು ಹೇಳಿರುವನು. ಪ್ರತಿಯೊಂದು ಖೌಮಿನವರು ಮತ್ತು ಪ್ರತಿಯೊಂದು ವರ್ಗವು ವಿಭಿನ್ನ ಮನೋಧರ್ಮ, ಮನೋವಿಜ್ಞಾನ ಮತ್ತು ವಿಧಾನವನ್ನು ಹೊಂದಿದೆ. ಅದಕ್ಕೆ ತಕ್ಕಂತೆ ಉಪದೇಶ ಮಾಡುವ ವಿಧಾನವನ್ನು ಕೈಗೊಳ್ಳಬೇಕು. ಈ ರೀತಿಯಲ್ಲಿ, ತಬ್ಲೀಗ್ ಮತ್ತು ತರಬೇತಿಯು ಸುಲಭವಾಗುತ್ತದೆ. ಏನೇ ಇರಲಿ, ಸರ್ವಶಕ್ತನಾದ ಅಲ್ಲಾಹನು ತಬ್ಲೀಗಿಗಾಗಿ ಮತ್ತು ತರಬೇತಿಗಾಗಿ ಕಾರ್ಯವನ್ನು ನಿರ್ವಹಿಸುವ ವಿಶ್ವಾಸಿಗಳ ಗುಂಪು ಇರಬೇಕು ಮತ್ತು ನಂತರ ಪ್ರತಿಯೊಂದು ಖೌಮು ಮತ್ತು ಪ್ರತಿಯೊಂದು ವರ್ಗದ ಜನರು ಇರಬೇಕು ಇದರಿಂದ ಈ ಕಾರ್ಯವನ್ನು ಸುಗಮಗೊಳಿಸಬಹುದು ಎಂದು ನಮಗೆ ಮಾರ್ಗದರ್ಶನ ನೀಡಿರುವನು.

ಆದುದರಿಂದ ಅಹ್ಮದಿಯಾ ಜಮಾಅತ್ ಈ ತತ್ವದಡಿಯಲ್ಲಿ ಧರ್ಮಕ್ಕಾಗಿ ತನ್ನ ಜೀವನವನ್ನು ಮುಡಿಪಾಗಿಡುವ ವ್ಯವಸ್ಥೆಯನ್ನು ಹೊಂದಿದೆ. ಮತ್ತು ನಾನು ಹೇಳಿದಂತೆ, ಅಲ್ಲಾಹನ ಅನುಗ್ರಹದಿಂದ ವಿವಿಧ ಖೌಮುಗಳು ಮತ್ತು ವರ್ಗಗಳ ಜನರು ಈಗ ಈ ವ್ಯವಸ್ಥೆಯ ಭಾಗವಾಗಿದ್ದಾರೆ ಮತ್ತು ಆಗುತ್ತಿದ್ದಾರೆ. ಮತ್ತು ನಾನು ಹೇಳಿದಂತೆ, ಜಮಾಅತ್ತಿನ ಅಗತ್ಯತೆಗಳು ಹೆಚ್ಚಾದಂತೆ, ಈ ಸಂಖ್ಯೆಯ ಅಗತ್ಯವು ಹೆಚ್ಚಾಗುತ್ತದೆ ಮತ್ತು ಈ ಅಗತ್ಯವು ಬೆಳೆಯುತ್ತಲೇ ಇರುತ್ತದೆ. ಇದೀಗ ಪ್ರಸ್ತುತ ಕಾಲದಲ್ಲಿ ಅಗತ್ಯವಿರುವುದು ಮಾತ್ರವಲ್ಲದೆ ಭವಿಷ್ಯದಲ್ಲಿಯು ಇದರ ಅಗತ್ಯವು ಹೆಚ್ಚಾಗಲಿದೆ.

**(ಖುತ್‌ಬ ಜುಮುಅ, ಅಕ್ಟೋಬರ್ 22, 2010)**

**(ಇಂಚಾರ್ಜ್ ನಖ್ಫೆ ನೌ ವಿಭಾಗ ಭಾರತ)**

**ಬದರ್ ಸಂಚಿಕೆ-08ರ ಪುಟ ಸಂಖ್ಯೆ-12ರ ಉಳಿದ ಭಾಗ**

ಮುಂದಿನದ್ದು ಹಝ್ರತ್ ಖಾಲಿದ್ ಬಿನ್ ಬುಕೈರ್(ರ)ರ ಪ್ರಸ್ತಾಪವಿದೆ. ಇವರು ಬನೂ ಸಅದ್ ಗೋತ್ರರೊಂದಿಗೆ ಸಂಬಂಧವನ್ನು ಹೊಂದಿದ್ದರು. ಬನೀ ಅದಿಯವರ ಪ್ರತಿಜ್ಞಾ ಬದ್ಧರಾಗಿದ್ದರು.
(ಉಸದುಲ್‌ಗಬ, ಸಂಪುಟ-2, ಪುಟ-194, ದಾರುಲ್ ಕುತುಬ್ ಇಲ್ಮಿಯ ಬೈರೂತ್)

ಹಝ್ರತ್ ಇಬ್ನೆ ಇಸ್ಹಾಖ್ ಹೇಳುತ್ತಾರೆ ನಮಗೆ ಅಯ್ಯಸ್ ಮತ್ತು ಅವರ ಸಹೋದರರಾದ ಅಖಿಲ್, ಖಾಲಿದ್ ಮತ್ತು ಅಮೀರ್ ಹೊರತುಪಡಿಸಿ ಬದ್ರ್ ಯುದ್ಧದಲ್ಲಿ ಭಾಗವಹಿಸಿದ ನಾಲ್ವರು ಸಹೋದರರು ನಮಗೆ ತಿಳಿದಿಲ್ಲ. ಈ ನಾಲ್ವರು ಸಹೋದರರು ಒಟ್ಟಿಗೆ ವಲಸೆ ಹೋಗಿ ರಿಫಾಅ ಬಿನ್ ಅಬ್ದುಲ್ ಮುಂಝಿರ್ ಅವರೊಂದಿಗೆ ಮದೀನಾದಲ್ಲಿ ಉಳಿದುಕೊಂಡರು. (ಅಲ್-ಅಸಬಾ ಫಿ ತಮೀಜ್ ಅಲ್-ಸಹಾಬಾ, ಭಾಗ-1, ಪುಟ-310, ಇಯಾಸ್ ಬಿನ್ ಅಬಿ ಬುಕೈರ್, ದಾರ್ ಅಲ್-ಕಿತಾಬ್ ಅಲ್-ಉಲಮಿಯಾಹ್, ಬೈರುತ್)

ಅವರನ್ನು ಹಝ್ರತ್ ಪೈಗಂಬರ್(ಸ) ದೀನಿನ ಶಿಕ್ಷಣ ನೀಡಲಿಕ್ಕಾಗಿ ಮತ್ತು ಪವಿತ್ರ ಖುರ್‌ಆನ್ ಕಲಿಸಲಿಕ್ಕಾಗಿ ಒಂದು ಸಮುದಾಯದ ಕಡೆಗೆ ಇತರ ಐದು ಸಹಾಬಿಯರ ಜೊತೆಗೆ ಕಳುಹಿಸಿದರು. ಆ ಸಮುಯದಾಯದವರು ದೀನ್ ಕಲಿಸಲಿಕ್ಕಾಗಿ ಅವರನ್ನು ಜೊತೆಗೆ ಕೊಂಡು ಹೋಗಿದ್ದರು. ಅನಂತರ ಮೋಸದಿಂದ ಶಹೀದ್ ಮಾಡಿದ್ದರು.
(ಅಸ್ಸೀರತುಲ್ ಹಲ್‌ಬೀಯ ಲಿಇಬ್ನೆ ಹಿಶ್ಶಾಮ್, ಪುಟ-591-592, ದರುಲ್ ಕುತುಬ್ ಇಲ್ಮಿಯ ಬೈರೂತ್ 2001)

ನಂತರ ಹಝ್ರತ್ ಅಮ್ಮಾರ್ ಬಿನ್ ಯಾಸಿರ್(ರ)ರವರ

ಪ್ರಸ್ತಾಪವಿದೆ. ಅವರ ಉಪನಾಮ ಅಬು ಯಕ್ಜಾನ್ ಆಗಿತ್ತು. (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್, ಭಾಗ-3, ಪುಟ-187, "ಅಮ್ಮಾರ್ ಬಿನ್ ಯಾಸಿರ್," ದಾರ್ ಅಲ್-ಕಿತಾಬ್ ಅಲ್-ಉಲಮಿಯಾ ಬೈರುತ್, 1990)

ಅವರ ಬಗ್ಗೆ, ಹಝ್ರತ್ ಮುಸ್ಲೆಹ್ ಮೌಊದ್(ರ) ರವರು ಇತಿಹಾಸದ ಪುಸ್ತಕಗಳ ಅಧ್ಯಾಯನದ ನಂತರ ಬರೆದಿದ್ದಾರೆ: ಒಂದು ಬಾರಿ ಹಝ್ರತ್ ಪೈಗಂಬರ್(ಸ) ಗುಲಾಮನಾದ ಅಮ್ಮಾರ್‌ನ ಸಮೀಪದಿಂದ ದಾಟಿ ಹೋದರು ಮತ್ತು ಅವರ ಯೋಗಕ್ಷೇಮ ವಿಚಾರಿಸಿಕೊಂಡರು. ಅಮ್ಮಾರ್ ಹೇಳಿದರು: ಶತ್ರುಗಳು ನನ್ನನ್ನು ಹೊಡೆಯುತ್ತಾ ಹೋದರು ಮತ್ತು ನಿಮ್ಮ ವಿರುದ್ಧ ಹೇಳುವ ತನಕ ನನ್ನನ್ನು ಬಿಡಲಿಲ್ಲ. ಹಝ್ರತ್ ಪೈಗಂಬರ್(ಸ) ಕೇಳಿದರು: ನಿನ್ನ ಹೃದಯದಲ್ಲಿ ಏನಿತ್ತು? ಅಮ್ಮಾರ್(ರ) ಹೇಳಿದರು: ಹೃದಯದಲ್ಲಿ ಅಚಂಚಲವಾದ ಸತ್ಯವಿಶ್ವಾಸ. ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: ಹೃದಯ ಸತ್ಯವಿಶ್ವಾಸದಲ್ಲಿ ಸಂತೃಪ್ತಗೊಂಡಿತ್ತು ಎಂದಾದರೆ, ಅಲ್ಲಾಹನು ನಿಮ್ಮ ಬಲಹೀನತೆಯನ್ನು ಕ್ಷಮಿಸುವನು. (ದೀಬಾಚ ತಫ್ಸೀರುಲ್ ಖುರ್‌ಆನ್, ಅನ್ವಾರುಲ್ ಉಲೂಮ್, ಸಂಪುಟ-20, ಪುಟ-195)

ಹಝ್ರತ್ ಅಮ್ಮಾರ್ ಬಿನ್ ಯಾಸಿರ್(ರ) ರವರ ಹಬ್‌ಶದ ಕಡೆಗೆ ವಲಸೆ ಹೋಗುವ ಬಗ್ಗೆ ಭಿನ್ನಭಿಪ್ರಾಯವಿದೆ. ಕೆಲವರು ಅವರು ಹಿಜ್ರತೆ ಹಬ್‌ಶ ಸಾನಿಯಾದಲ್ಲಿ (ಹಬ್‌ಶದ ಕಡೆ ಎರಡನೇಯ ವಲಸೆ) ಭಾಗವಹಿಸಿದ್ದರು ಎಂದು ಅಭಿಪ್ರಾಯಪಟ್ಟರು. (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್, ಭಾಗ-3, ಪುಟ-189, ದಾರುಲ್ ಕುತುಬ್ ಇಲ್‌ಮಿಯ ಬೈರೂತ್)

ಹಝ್ರತ್ ಉಸ್ಮಾನ್(ರ) ಅವರ ಖಿಲಾಫತ್ ಅವಧಿಯಲ್ಲಿ ನಡೆದ ಪಿತೂರಿಯನ್ನು ಉಲ್ಲೇಖಿಸುತ್ತಾ, ಹಝ್ರತ್ ಖಲೀಫತುಲ್ ಮಸೀಹ್ ಸಾನಿ ಹಝ್ರತ್ ಮುಸ್ಲಿಹ್ ಮೈಊದ್(ರ) ಹೀಗೆ ಹೇಳುತ್ತಾರೆ: 'ಈ ದಂಗೆಯು ಉಲ್ಬಣಗೊಳ್ಳಲು ಪ್ರಾರಂಭಿಸಿದಾಗ ಮತ್ತು ಸಹಾಬರರಿಗೂ ಸಹ ರಾಜ್ಯಪಾಲರ ದೂರುಗಳನ್ನು ದಾಖಲಿಸಿದ ಪತ್ರಗಳನ್ನು ಸ್ವೀಕರಿಸಲು ಪ್ರಾರಂಭಿಸಿದರು, ಅವರು ಒಟ್ಟಾಗಿ ಹಝ್ರತ್ ಉಸ್ಮಾನ್(ರ) ಅವರನ್ನು ಹೇಳಿದರು, "ನಿಮಗೆ(ರ) ಹೊರಗೆ ಏನಾಗುತ್ತಾ ಇದೆ ಎಂಬುದು ತಿಳಿದಿಲ್ಲವೇ? ಅದಕ್ಕೆ ಅವರು ಹೇಳಿದರು ನನಗೆ ಬರುವ ವರದಿಗಳು ಉತ್ತಮತೆಯನ್ನು ತೋರಿಸುತ್ತವೆ. ಹೊರಗಿನಿಂದ ಬರುತ್ತಿರುವ ಈ ಲೇಖನದ ಪತ್ರಗಳು ನಮ್ಮಲ್ಲಿವೆ ಮತ್ತು ಅದನ್ನು ಸಂಶೋಧಿಸಬೇಕು ಎಂದು ಸಹಾಬರವರು ಉತ್ತರಿಸಿದರು. ತನಿಖೆಯನ್ನು ಹೇಗೆ ನಡೆಸಬೇಕೆಂದು ಹಝ್ರತ್ ಉಸ್ಮಾನ್(ರ) ಅವರಲ್ಲಿ ಸಲಹೆಯನ್ನು ಕೇಳಿದರು ಮತ್ತು ಅವರ ಸಲಹೆಯ ಪ್ರಕಾರ ಉಸಾಮಾ ಬಿನ್ ಝೈದ್(ರ) ಅವರನ್ನು ಬಸ್ರಾಗೆ, ಮುಹಮ್ಮದ್ ಬಿನ್ ಮುಸಲ್ಲಮ್ ಅವರನ್ನು ಕೂಫಾಗೆ, ಅಬ್ದುಲ್ಲಾ ಬಿನ್ ಉಮರ್ ಅವರನ್ನು ಸೀರಿಯಾಕ್ಕೆ, ಮತ್ತು ಅಮ್ಮಾರ್ ಬಿನ್ ಯಾಸಿರ್(ರ) ಅವರನ್ನು ಮಿಸರ್‌ಗೆ ಕಳುಹಿಸಲಾಯಿತು. ಅಲ್ಲಿನ ಪರಿಸ್ಥಿತಿಗಳು ಮತ್ತು ವಾಸ್ತವದಲ್ಲಿ ವರಿಷ್ಠರು ಪ್ರಜೆಗಳ ಮೇಲೆ ದಬ್ಬಾಳಿಕೆ ಮಾಡುತ್ತಿದ್ದಾರೆಯೇ ಮತ್ತು ನಿರ್ದಾಕ್ಷಿಣ್ಯವಾಗಿ ವರ್ತಿಸುತ್ತಿದ್ದಾರೆ ಮತ್ತು ಜನರ ಹಕ್ಕುಗಳನ್ನು ಕೊಲ್ಲುತ್ತಿದ್ದಾರೆಯೇ ಎಂದು ವರದಿ ಮಾಡಿ. ಅಲ್ಲಿನ ಪರಿಸ್ಥಿತಿಯ ಬಗ್ಗೆ ತಿಳಿಸಲು ಕಳುಹಿಸಿ. (ತಬರಿ, ಸಂಪುಟ-6, ಪುಟ-2943, ಬೈರುತ್‌ನಲ್ಲಿ ಪ್ರಕಟಿತ)

ಈ ಜನರು ಹೋಗಿ ತನಿಖೆಯ ನಂತರ ಹಿಂತಿರುಗಿದರು ಮತ್ತು ಅವರೆಲ್ಲರೂ ವರದಿ ಮಾಡಿದರು ಮತ್ತು ಎಲ್ಲೆಡೆ ಶಾಂತಿ ನೆಲೆಸಿದೆ ಮತ್ತು ಮುಸ್ಲಿಮರು ಸಂಪೂರ್ಣ ಸ್ವಾತಂತ್ರ್ಯದಿಂದ ಬದುಕುತ್ತಿದ್ದಾರೆ ಮತ್ತು ಅವರ ಹಕ್ಕುಗಳು ಉಲ್ಲಂಘನೆಯಾಗುತ್ತಿಲ್ಲ ಮತ್ತು ಅಧಿಕಾರಿಗಳು ನ್ಯಾಯಯುತವಾಗಿ ವರ್ತಿಸುತ್ತಿದ್ದಾರೆ. ಆದರೆ ಅಮ್ಮಾರ್ ಬಿನ್ ಯಾಸಿರ್(ರ) ತಡವಾಗಿ ಬಂದಿದ್ದು ಅವರಿಂದ ಯಾವ ಸುದ್ದಿಯೂ ಬರಲಿಲ್ಲ... ಅವರಿಂದ ಸುದ್ದಿ ತಿಳಿಯುವುದು ತಡವಾಯಿತು ಎಂದು ಮದೀನಾದ ಜನರು ಯೋಚಿಸಿದರು. ಅವರು ಎಲ್ಲೋ ಕೊಲ್ಲಲ್ಪಟ್ಟರು, ಆದರೆ ನಿಜವಾದ ವಿಷಯವೆಂದರೆ ಅವರ ಸರಳತೆ ಮತ್ತು ರಾಜಕೀಯದ ಅಜ್ಞಾನದಿಂದಾಗಿ ಅವರು ಅಬ್ದುಲ್ಲಾ ಬಿನ್ ಸಬಾ ಅವರ ಶಿಷ್ಯರ ಗಲಭೆಗಾರರ ಮುಷ್ಠಿಯಲ್ಲಿ ಸಿಲುಕಿಕೊಂಡಿದ್ದರು.

ಅಬ್ದುಲ್ಲಾ ಬಿನ್ ಸಬಾ ಸ್ವತಃ ಈಜಿಪ್ಟ್‌ನಲ್ಲಿ ಇದ್ದುದರಿಂದ ಮತ್ತು ಈ ತನಿಖಾ ನಿಯೋಗವು ಇಡೀ ದೇಶದಲ್ಲಿ ಶಾಂತಿ ಮತ್ತು ಸುವ್ಯವಸ್ಥೆಯ ಬಗ್ಗೆ ತೀರ್ಪು ನೀಡಿದರೆ, ಎಲ್ಲಾ ಜನರು ನಮ್ಮ ವಿರುದ್ಧ ತಿರುಗುತ್ತಾರೆ ಎಂಬ ಅಂಶವನ್ನು ಅವರು ಗಮನಿಸಲಿಲ್ಲ. ಈ ನಿಯೋಗವನ್ನು ಕಳುಹಿಸುವ ನಿರ್ಧಾರವು ತುಂಬಾ ಹಠಾತ್ ಆಗಿತ್ತು, ಅವರು ಇತರ ಪ್ರದೇಶಗಳಲ್ಲಿ ಯಾವುದೇ ವ್ಯವಸ್ಥೆಗಳನ್ನು ಮಾಡಲು ಸಾಧ್ಯವಾಗಲಿಲ್ಲ, ಆದರೆ ಈಜಿಪ್ಟಿನ ನಿರ್ವಹಣೆ ಅವರಿಗೆ ಸುಲಭವಾಯಿತು. ಅಮ್ಮಾರ್ ಬಿನ್ ಯಾಸಿರ್(ರ) ಈಜಿಪ್ಟ್ ಅನ್ನು ಪ್ರವೇಶಿಸಿದ ತಕ್ಷಣ, ಅವರು ಅವರನ್ನು ಸ್ವಾಗತಿಸಿದರು ಮತ್ತು ಈಜಿಪ್ಟ್‌ನ ಗವರ್ನರ್ ಅಮ್ರ್ ಬಿನ್ ಅಸ್(ರ) ಅವರ ದುಷ್ಕೃತ್ಯಗಳು ಮತ್ತು ದೌರ್ಜನ್ಯಗಳನ್ನು ವಿವರಿಸಲು ಪ್ರಾರಂಭಿಸಿದರು. ಅವರ ಭಾಷಾ ಮಾಂತ್ರಿಕತೆಯ ಪ್ರಭಾವದಿಂದ ಅವರು ಸುರಕ್ಷಿತವಾಗಿರಲು ಸಾಧ್ಯವಾಗಲಿಲ್ಲ. ಅವನು ದೊಡ್ಡ ಮಾತುಗಾರರಾಗಿದ್ದನು ಮತ್ತು ಸರಳವಾದ ನಿಸ್ವಾರ್ಥ ಸಂಶೋಧನೆ ಮಾಡುವ ಬದಲು. ಗವರ್ನರ್ ಈಜಿಪ್ಟ್‌ನ ಬಳಿಗೆ ಹೋಗಲೇ ಇಲ್ಲ ಮತ್ತು ಸಾಮಾನ್ಯ ತನಿಖೆಯನ್ನು ಸಹ ನಡೆಸಲಿಲ್ಲ. ಆದರೆ ಅದೇ ಭ್ರಷ್ಟ ಗುಂಪಿನೊಂದಿಗೆ ಹೋಗಿ ಅವರೊಂದಿಗೆ ಆಕ್ಷೇಪಿಸಲು ಪ್ರಾರಂಭಿಸಿದರು.

ಸಹಾಬಿಗಳಲ್ಲಿ ಯಾರಾದರೂ ಈ ಭ್ರಷ್ಟ ಗುಂಪಿನ ಬಲೆಗೆ ಸಿಕ್ಕಿಹಾಕಿಕೊಂಡಿರುವುದು ಖಚಿತವಾಗಿ ಸಾಬೀತಾದರೆ ಅದು ಅಮ್ಮಾರ್ ಬಿನ್ ಯಾಸಿರ್(ರ) ಮಾತ್ರ. ಅವರನ್ನು ಹೊರತುಪಡಿಸಿ, ಈ ಚಳುವಳಿಯಲ್ಲಿ ಯಾವುದೇ ಪ್ರಸಿದ್ಧ ಸಹಾಬಿಯೂ ಭಾಗಿಯಾಗಿಲ್ಲ. ಮತ್ತು ಯಾರೊಬ್ಬರ ಒಳಗೊಳ್ಳುವಿಕೆ ಹೇಳಿದ್ದರೆ, ಅದನ್ನು ಇತರ ವರದಿಗಳಿಂದ ತಿರಸ್ಕರಿಸಲಾಗಿದೆ. ಅಮ್ಮಾರ್ ಬಿನ್ ಯಾಸಿರ್(ರ) ವಿಶೇಷ ಕಾರಣಕ್ಕಾಗಿ ಈ ಜನರಿಂದ ಮೋಸಗೊಂಡರು, ಅವರನ್ನು ಬಹಳ ವಾಗ್ಮಿಗಳ ಗುಂಪು ಭೇಟಿಯಾಯಿತು ಮತ್ತು ಅವರಿಗೆ ಈಜಿಪ್ಟಿನ ದೂರುಗಳನ್ನು ಬಹಳ ಕೌಶಲ್ಯದಿಂದ ಹೇಳಲು ಪ್ರಾರಂಭಿಸಿತು. ಕಾಕತಾಳೀಯವಾಗಿ, ಮಿಸರ್ ವ್ಯಕ್ತಿಯೂ ಒಂದು ಕಾಲದಲ್ಲಿ ರಸೂಲುಲ್ಲಾಹ್(ಸ) ಅವರ ಪ್ರಬಲ ವಿರೋಧಿಯಾಗಿದ್ದನು ಮತ್ತು ಅವನ ಬಗ್ಗೆ ರಸೂಲುಲ್ಲಾಹ್(ಸ) ರವರು ಮಕ್ಕದ ವಿಜಯದ ನಂತರ ಅವನು ಕಾಅ್‌ಬಾದಲ್ಲಿ ಸಿಕ್ಕಿಬಿದ್ದರೂ ಅವನನ್ನು ಕೊಲ್ಲಬೇಕು ಎಂದು ಆದೇಶಿಸಿದ್ದರು ಮತ್ತು ನಂತರ ಪ್ರವಾದಿ(ಸ) ಅವರು ಅವನನ್ನು ಕ್ಷಮಿಸಿದ್ದರು ಆದರೆ ಅವನ ಮೊದಲ ವಿರೋಧವು ಇನ್ನೂ ಕೆಲವು ಸಹಾಬರವರ ಮನಸ್ಸಿನ ಮೇಲೆ ಪರಿಣಾಮ ಬೀರಿತು ಅವರಲ್ಲಿ ಅಮ್ಮಾರ್ ಸಹ ಉದ್ದರು. ಆದ್ದರಿಂದ, ಅಂತಹ ವ್ಯಕ್ತಿಯ ವಿರುದ್ಧದ ಮಾತುಗಳನ್ನು ಕೇಳಿದ ನಂತರ, ಅಮ್ಮಾರ್ ಬಹಳ ಬೇಗ ಪ್ರಭಾವಿತರಾದರು ಮತ್ತು ಅವರ ವಿರುದ್ಧ ಮಾಡಿದ ಆರೋಪಗಳನ್ನು ನಿಜವೆಂದು ಒಪ್ಪಿಕೊಂಡರು ಮತ್ತು ಅವರ ಸಹಜ ಪ್ರವೃತ್ತಿಯ ಲಾಭವನ್ನು ಪಡೆದರು, ಸಬಾಯಿ ಅಂದರೆ ಅಬ್ದುಲ್ಲಾ ಬಿನ್ ಸಾಬ ಅವನ ಸಹಚರರು ಅವರ ವಿರುದ್ಧ ಈ ಅಂಶವನ್ನು ಒತ್ತಿಹೇಳುತ್ತಿದ್ದರು." (ಇಸ್ಲಾಮ್ ಮೇ ಇಖ್ತಿಲಾಫಾತ್ ಕಾ ಆಗ್ಹಾಝ್, ಅನ್ವಾರುಲ್ ಉಲೂಮ್, ಸಂಪುಟ-4, ಪುಟ-280, 281 ಮತ್ತು 283-284)

ಅವರೊಂದಿಗೆ ಇವರೂ ಸಹ ಸೇರಿಕೊಂಡರು, ಆದರೆ ಸಫ್ಫೈನ್ ಯುದ್ಧದ ಸಂದರ್ಭದಲ್ಲಿ, ಹಝ್ರತ್ ಅಮ್ಮಾರ್ ಬಿನ್ ಯಾಸಿರ್(ರ) ಜನರನ್ನು ಉದ್ದೇಶಿಸಿ ಹೇಳಿದರು: ಅಲ್ಲಾಹನ ಸಂತೃಪ್ತಿಯನ್ನು ಬಯಸುವವರು ಮತ್ತು ಸಂಪತ್ತು ಮತ್ತು ಮಕ್ಕಳ ಕಡೆಗೆ ಮರಳಲು ಬಯಸದವರು ಎಲ್ಲಿದ್ದಾರೆ? ಆಗ ಅವರ ಬಳಿ ಜನರ ಒಂದು ಸಮೂಹವೇ ಬಂದು ಸೇರಿತು. ಹಝ್ರತ್ ಅಮ್ಮಾರ್(ರ) ಅವರನ್ನು ಉದ್ದೇಶಿಸಿ ಹೇಳಿದರು. ಓ ಜನರೇ! ಹಝ್ರತ್ ಉಸ್ಮಾನ್ ಬಿನ್ ಅಫ್ಫಾನ್(ರ) ರವರ ರಕ್ತವನ್ನು ಬೇಡುವ ಜನರ ಬಳಿಗೆ ನಮ್ಮೊಂದಿಗೆ ಬನ್ನಿ ಮತ್ತು ಅವರು ಹಝ್ರತ್ ಉಸ್ಮಾನ್(ರ) ರವರು ಅನ್ಯಾಯವಾಗಿ ಕೊಲ್ಲಲ್ಪಟ್ಟರು ಎಂದು ಭಾವಿಸುತ್ತಿದ್ದರು. ಅಲ್ಲಾಹನಆಣೆ!! ಅವರು ಹಝ್ರತ್ ಉಸ್ಮಾನ್(ರ) ರವರ ಹತ್ಯೆಗೆ ಒತ್ತಾಯಿಸುತ್ತಿಲ್ಲ ಆದರೆ ಈ ಜನರು ಜಗತ್ತನ್ನು ರುಚಿ ನೋಡಿದ್ದಾರೆ. ಈಗ ಅವರಿಗೆ ಗಲಭೆಕೋರರು ಎಷ್ಟು ಪ್ರಲೋಭನೆಯನ್ನು ಸೃಷ್ಟಿಸುತ್ತಿದ್ದಾರೆಂದು ಅವರು ಅರ್ಥಮಾಡಿಕೊಂಡರು ಮತ್ತು ನಂತರ ಹೇಳಿದರು ಈಗ ಇದರಿಂದ, ಅಂದರೆ, ಈ ಪ್ರಪಂಚದಿಂದ ಈ ಜನರು ಪ್ರೀತಿ ಮಡುತ್ತಿದ್ದಾರೆ ಮತ್ತು ಅದರ ಹಿಂದೆಯೇ ಬಿದ್ದಿದ್ದಾರೆ. ಸತ್ಯವು ಅವರಿಗೆ ಅಂಟಿಕೊಂಡಿದೆ, ಆ ಸತ್ಯವು ಅವರ ಮತ್ತು ಅವರ ಪ್ರಾಪಂಚಿಕ ವ್ಯವಹಾರಗಳ ನಡುವೆ ತಡೆಗೋಡೆಯಾಗುತ್ತದೆ ಎಂದು ಅವರು ಅರಿತುಕೊಂಡರು. ಮತ್ತು ಈ ಜನರಿಗೆ ಇಸ್ಲಾಂನಲ್ಲಿ ಯಾವುದೇ ಶ್ರೇಷ್ಠತೆ ಇಲ್ಲ, ಇದರಿಂದಾಗಿ ಈ ಜನರು ಜನರಿಗೆ ವಿಧೇಯರಾಗುವುದಿಲ್ಲ ಮತ್ತು ಅವರನ್ನು ಪಾಲಿಸುವುದಿಲ್ಲ ಎಂದು ತಿಳಿದುಕೊಂಡರು. ಈ ಜನರಿಗೆ ಅಮೀರ್‌ನನ್ನಾಗಲು ಯಾವುದೇ ಪ್ರಯೋಜನವಿಲ್ಲ ಅವರು ಕೇವಲ ಪ್ರಲೋಭನೆಯನ್ನು ಸೃಷ್ಟಿಸುತ್ತಿದ್ದಾರೆ. ಅವರು ತಮ್ಮ ಅನುಯಾಯಿಗಳಿಗೆ ಹೀಗೆ ಹೇಳಿ ವಂಚಿಸಿರುವುದು ಎಂದರೆ ನಮ್ಮ ಇಮಾಮ್ ದೌರ್ಜನ್ಯ ಮತ್ತು ದಬ್ಬಾಳಿಕೆ ಮಾಡುವವನು ಕೊಲಲ್ಪಟ್ಟಿದ್ದಾರೆ ಇದರಿಂದಾಗಿ ಇವರು ದೌರ್ಜನ್ಯ ಮಾಡುವವರು ರಾಜರಾಗಲು ಬಯಸಿದ್ದರು ಮತ್ತು ಇದು ನೀವು ನೋಡುತ್ತಿರುವ ಹಂತಕ್ಕೆ ತಲುಪಿದ ತಂತ್ರವಾಗಿತ್ತು. ಈ ಜನರು ಹಝ್ರತ್ ಉಸ್ಮಾನ್(ರ) ಅವರ ಕಿಸಾಸ್ ಅನ್ನು ಬೇಡದಿದ್ದರೆ ಜನರಲ್ಲಿ

ಇಬ್ಬರು ಸಹ ಅವರನ್ನು ಅನುಸರಿಸುತ್ತಿರಲಿಲ್ಲ.

ಆಗ ಅವರು ಹೇಳಿದರು: ಓ ಅಲ್ಲಾಹನೇ! ನೀವು ನಮಗೆ ಸಹಾಯ ಮಾಡಿದರೆ, ನೀವು ನಮಗೆ ಅನೇಕ ಬಾರಿ ಸಹಾಯ ಮಾಡಿದಂತೆ ಮತ್ತು ನೀವು ಅವರ ಉದ್ದೇಶದಲ್ಲಿ ಅವರನ್ನು ಯಶಸ್ವಿಗೊಳಿಸಿದರೆ, ಅವರು ನಿಮ್ಮ ಸೇವಕರಲ್ಲಿ ಹೊಸ ವಿಷಯಗಳನ್ನು ಸೃಷ್ಟಿಸಿದ ಕಾರಣ ಅವರಿಗೆ ನೋವಿನ ಶಿಕ್ಷೆಯನ್ನು ಸಂಗ್ರಹಿಸು. (ತಾರಿಖ್ ಅತ್ತಬರಿ, ಸಂಪುಟ–3, ಪುಟ–98, ದಾರ್ ಅಲ್–ಕಿತಾಬ್ ಅಲ್–ಇಲ್‌ಮಿಯಾ ಬೈರುತ್ 1987)

ಮುಹಮ್ಮದ್ ಬಿನ್ ಅಮ್ರ್ ಮತ್ತು ಇತರರಿಂದ ಸಫ್ಫೈನ್ ಕದನದಲ್ಲಿ ಭೀಕರ ಯುದ್ಧವು ಸಂಭವಿಸಿತು ಮತ್ತು ಎರಡೂ ಕಡೆಯವರು ನಾಶವಾಗುವುದು ಹತ್ತಿರವಾಗಿತ್ತು. ಈ ಗುಲಾಮರ ಅಂದರೆ ಅಮ್ಮಾರ್ ಬಿನ್ ಯಾಸಿರ್(ರ) ಅವರ ದೌರ್ಬಲ್ಯವನ್ನು ಪಡೆಯದ ಹೊರತು ಅರಬ್ಬರು ನಾಶವಾಗುವ ದಿನ ಇದು ಎಂದು ಮುಆವಿಯಾ ಹೇಳಿದರು. ಅಂದರೆ ಹಝ್ರತ್ ಅಮ್ಮಾರ್(ರ) ಹುತಾತ್ಮರಾಗಬೇಕು. ಮೂರು ದಿವಸ ಹಗಲು ರಾತ್ರಿ ಘೋರ ಯುದ್ಧ ನಡೆಯಿತು. ಮೂರನೆಯ ದಿನ, ಹಝ್ರತ್ ಅಮ್ಮಾರ್(ರ) ಅವರು ಅಂದು ಧ್ವಜವನ್ನು ಹೊಂದಿದ್ದ ಹಾಶಿಮ್ ಬಿನ್ ಉತ್ಬಾ ಬಿನ್ ಅಬಿ ವಕ್ಕಾಸ್ ಅವರಿಗೆ ಹೇಳಿದರು, ನನ್ನ ಹೆತ್ತವರು ನಿನಗಾಗಿ ಬಲಿಯಾಗುತ್ತಾರೆ, ನನ್ನನ್ನು ನಿಮ್ಮೊಂದಿಗೆ ಕರೆದುಕೊಂಡು ಹೋಗು. ಹಾಶಿಮ್ ಹೇಳಿದರು, ಓ ಅಮ್ಮಾರ್! ದೇವರ ಕರುಣೆ ನಿಮ್ಮ ಮೇಲೆ ಇರಲಿ. ನೀವು ಅಂತಹ ಮನುಷ್ಯ, ಯುದ್ಧವು ನಿಮ್ಮನ್ನು ಲಘುವಾಗಿ ತೆಗೆದುಕೊಳ್ಳುತ್ತದೆ. ಅದರ ಮೂಲಕ ನನ್ನ ಗುರಿ ತಲುಪುತ್ತೇನೆ ಎಂಬ ಭರವಸೆಯೊಂದಿಗೆ ಧ್ವಜಾರೋಹಣ ಮಾಡುತ್ತೇನೆ. ನಾನು ದೌರ್ಬಲ್ಯವನ್ನು ತೋರಿಸಿದರೆ, ನನಗೆ ಇನ್ನೂ ಸಾವಿನೊಂದಿಗೆ ಸಮಾಧಾನವಿಲ್ಲ. ಅವರು ಸವಾರಿ ಮಾಡುವವರೆಗೂ ಅವರೊಂದಿಗೆ ಇದ್ದರು. ಅವರು ಅದನ್ನು ತನ್ನೊಂದಿಗೆ ತೆಗೆದುಕೊಂಡರು. ಆಗ ಹಝ್ರತ್ ಅಮ್ಮಾರ್(ರ) ಅವರು ತಮ್ಮ ಸೈನ್ಯದಲ್ಲಿ ನಿಂತುಕೊಂಡರು. ಧುಲ್ ಖಲಾ ತನ್ನ ಸೈನ್ಯದೊಂದಿಗೆ ಅವರ ವಿರುದ್ಧ ನಿಂತನು. ಇಬ್ಬರೂ ಹೋರಾಡಿ ಮರಣ ಹೊಂದಿದರು. ಎರಡೂ ಸೇನೆಗಳು ನಾಶವಾದವು.

ಹಝ್ರತ್ ಅಮ್ಮರ್(ರ) ಅವರ ಮೇಲೆ ಹವಿ ಅಲ್–ಸಕ್ಸಾಕಿ ಮತ್ತು ಅಬು ಗಾದಿಯಾ ಮುಝಾನಿ ದಾಳಿ ಮಾಡಿದರು ಮತ್ತು ಅವರಿಬ್ಬರೂ ಹುತಾತ್ಮರಾದರು.

ಅಬುಲ್–ಗಾದಿಯಾ ಅವರನ್ನು ಅವರು ಹೇಗೆ ಕೊಂದರು? ಎಂದು ಕೇಳಲಾಯಿತು. ಅದಕ್ಕೆ ಅವರು ಹೇಳಿದರು ಅವರು ತಮ್ಮ ಸೈನ್ಯದೊಂದಿಗೆ ಸಮೀಪಿಸಿದ್ದಾಗ ಮತ್ತು ನಾವು ಅವರ ಬಳಿಗೆ ಹೋದಾಗ ಅವರು ಯಾರಾದರೂ ಹೋರಾಡಲು ಇದ್ದಾರೆಯೇ ಎಂದು ಕೂಗಿದರು. ಸಕಾಸಕ್ ಎಂಬುದು ಯೆಮೆನ್‌ನ ಒಂದು ಗೋತ್ರದ ಹೆಸರಾಗಿದೆ. ಆ ಗೋತ್ರದ ಓರ್ವ ವ್ಯಕ್ತಿ ಹೊರ ಬಂದನುಬು. ಅವರಿಬ್ಬರೂ ಪರಸ್ಪರ ಕತ್ತಿಗಳನ್ನು ಎಸೆದರು. ನಂತರ ಹಝ್ರತ್ ಅಮ್ಮರ್(ರ) ಆ ಸಕ್ಸಕೀಯನ್ನಿ ಕೊಂದರು. ನಂತರ ಅವರು ಮತ್ತೆ ಹೋರಾಡಲು ಯಾರಾದರೂ ಇದ್ದಾರೆಯೇ ಎಂದು ಕೂಗಿದರು. ಹಮೀರ್ ಎಂಬುದು ಯಮನ್‌ನ ಒಂದು ಗೋತ್ರದ ಹೇಸರಾಗಿದೆ ಅದರಿಂದ ಓರ್ವ ವ್ಯಕ್ತಿ ಹೋರಾಡಲು ಬಂದನು. ಅವರೊಬ್ಬರೂ ಪರಸ್ಪರ ಕತ್ತಿಗಳನ್ನು ತೆಗೆದು ಹೋರಾಡಿದರು. ಅಮ್ಮರ್(ರ)ರವರು ಹಮೀರಿಯನ್ನು ಸಹ ಕೊಂದರು. ಹಮೀರಿ ಅವರನ್ನು ಗಾಯಗೊಳಿಸಿದ್ದನು. ನಂತರ ಅವರು ಬೇರೆ ಯಾರು ಹೋರಾಡಲು ಬಯಸುತ್ತಾರೆ? ನಾನು ಅವರ ಕಡೆಗೆ ಹೋದೆ. ಅಂದರೆ ಗುಲಾಮ ಮತ್ತು ನಾವಿಬ್ಬರೂ ಒಬ್ಬರಿಗೊಬ್ಬರು ಕತ್ತಿ ಮಸೆಯುತ್ತಿದ್ದೆವು. ಅವರ ಕೈ ದುರ್ಬಲವಾಗಿತ್ತು. ನಾನು ಅವರಿಗೆ ಎರಡನೆ ಏಟು ಕೊಟ್ಟೆ, ಅವರು ಕೆಳಗೆ ಬಿದ್ದರು. ಆಗ ನಾನು ಅವರಿಗೆ ತಣ್ಣಗಾಗುವ ರೀತಿಯಲ್ಲಿ ಕತ್ತಿಯಿಂದ ಹೊಡೆದೆನು. ವರದಿಗಾರರು ಹೇಳುತ್ತಾರೆ ಹಝ್ರತ್ ಅಮ್ಮಾರ್(ರ) ಅವರನ್ನು ಹುತಾತ್ಮಗೊಳಿಸಿದಾಗ ಹಝ್ರತ್ ಅಲಿ(ರ) ಅವರು ಹಝ್ರತ್ ಅಮ್ಮಾರ್ ಬಿನ್ ಯಾಸಿರ್(ರ) ಅವರ ಹುತಾತ್ಮತೆಯನ್ನು ಅಸಾಮಾನ್ಯವೆಂದು ಪರಿಗಣಿಸುವುದಿಲ್ಲ ಮತ್ತು ಅದರ ಬಗ್ಗೆ ದುಃಖಿಸುವುದಿಲ್ಲವೋ ಅವರು ಖಂಡಿತವಾಗಿಯೂ ಮಾರ್ಗದರ್ಶಕನಲ್ಲ ಎಂದು ಹೇಳಿದರು.

ಅಮ್ಮಾರ್ ಅವರು ಇಸ್ಲಾಂ ಧರ್ಮವನ್ನು ಸ್ವೀಕರಿಸಿದ ದಿನದಂದು ಅಲ್ಲಾಹನು ಕರುಣಿಸಲಿ ಮತ್ತು ಅಮ್ಮಾರ್ ಮೇಲೆ ಅಲ್ಲಾಹನು ದಯೆದೋರಲಿ, ರಸೂಲುಲ್ಲಾಹ್(ಸ) ಅವರ ನಾಲ್ಕು ಸಹಾಬರರನ್ನು ಉಲ್ಲೇಖಿಸಿದಾಗ, ಅವರು ನಾಲ್ಕನೆಯವರಾಗಿದ್ದರು ಮತ್ತು ಐವರು ಉಲ್ಲೇಖಿಸಲಾಗಿದೆ, ಅವರು ಐದನೆಯವರಾಗಿದ್ದರು.

ಅವರು ರಸೂಲುಲ್ಲಾಹ್(ಸ) ಅವರು ಹಿರಿಯ ಸಹಾಹಬರಲ್ಲಿ ಒಬ್ಬರಾಗಿದ್ದರು. ಅವರು ಸ್ವರ್ಗೀಯರು ಎಂಬುದರ ಬಗ್ಗೆ ಓಬ್ಬರನ್ನು ಸಹ ಸಂದೇಹವಿರಲಿಲ್ಲ. ಆದ್ದರಿಂದ ಅಮ್ಮಾರ್‌ಗೆ ಸ್ವರ್ಗ ಧನ್ಯವಾಗಿದೆ ಮತ್ತು ಅವರ ಬಗ್ಗೆ ಅಮ್ಮಾರ್ ಸತ್ಯದೊಂದಿಗೆ ಮತ್ತು ಸತ್ಯವು ಅಮ್ಮರ್‌ನೊಂದಿಗೆ ಎಂದು ಹೇಳಲಾಗಿದೆ. ಅಮ್ಮಾರ್ ಎಲ್ಲಿ ಹೋದರೂ ಸತ್ಯದೊಂದಿಗೆ ಹೋಗುತ್ತಾರೆ ಮತ್ತು ಅಮ್ಮಾರ್‌ನ ಕೊಲೆಗಾರ ಬೆಂಕಿಯಲ್ಲಿದ್ದಾನೆ. (ಅತ್ತಬಖಾತುಲ್ ಕುಬ್ರ, ಸಂಪುಟ–3, ಪುಟ–197–198, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1990)

ಸೀದ್ ಬಿನ್ ಅಬ್ದುರ್ರಹ್ಮಾನ್ ತಮ್ ತಂದೇಯಿಂದ ವರದಿ ಮಾಡುತ್ತಾರೆ ಒಬ್ಬ ವ್ಯಕ್ತಿ ಹಝ್ರತ್ ಉಮರ್ ಬಿನ್ ಖತ್ತಾಬ್(ರ) ಅವರ ಬಳಿಗೆ ಬಂದು ನಾನು ಜುಂಬಿ (ಅಶುದ್ಧ) ಆಗಿದ್ದೇನೆ ಮತ್ತು ನನಗೆ ನೀರು ಸಿಗಲಿಲ್ಲ. ನಾನು ಮತ್ತು ನೀವು ಒಂದು ಪ್ರವಾಸದಲ್ಲಿ ಜೋತೆಗಿದ್ದದ್ದು ನಿಮಗೆ ನೆನಪಿಲ್ಲವೇ? ಎಂದು ಹೇಳಿದನು. ನೀವು(ರ) ಅಂತೂ ನಮಾಝ್ ನಿರ್ವಹಿಸಲಿಲ್ಲ ಮತ್ತು ನಾನು ಮಣ್ಣಿನಲ್ಲಿರುವ ಪ್ರಾಣಿಯಂತೆ ಆದೆ ಮತ್ತು ನಮಾಝ್ ನಿರ್ವಃಇಸಿದೆ. ನೀರಿಲ್ಲದ ಕಾರಣ ತಾಯಮ್ಮುಮ್ ಮಾಡಿದೆ. ನಾನು ಅದನ್ನು ರಸೂಲುಲ್ಲಾಹ್(ಸ) ರವರಿಗೆ ಇದರ ಬಗ್ಗೆ ಪ್ರಸ್ತಾಪಿಸಿದೆ ಮತ್ತು ರಸೂಲುಲ್ಲಾಹ್(ಸ.ಅ) ಹೇಳಿದರು: ನೀವು ಕೇವಲ ಇಷ್ಟು ಮಾಡುತ್ತಿದ್ದರೆ ಅದು ಸಾಕಾಗಿತ್ತು ಎಂದು ಹೇಳಿ ರಸೂಲುಲ್ಲಾಹ್(ಸ)ರವರು ತಮ್ಮ ಎರಡು ಕೈಗಳನ್ನು ಭೂಮಿ ಮೇಲೆ ಹೊಡೆದ ನಂತರ ಅದರ ಮೇಲೆ ಊದಿದರು ಮತ್ತು ತಮ್ಮ ಮುಖ ಹಾಗೂ ಎರಡೂ ಕೈಗಳ ಮೆಲೆ ಮಸಹ್ ಮಾಡಿದರು. (ಸಾಹೀಹ್ ಅಲ್–ಬುಖಾರಿ, ಕಿತಾಬ್ ಅಲ್–ತಯಾಮ್ಮುಮ್, ಹದೀಸ್ ಸಂಖ್ಯೆ. 338)

ಅಬುವಾಎಲ್ ಹೇಳುತ್ತಾರೆ ಹಝ್ರತ್ ಅಮ್ಮಾರ್(ರ) ಅವರು ನಮಗೆ ಸಂಕ್ಷಿಪ್ತ ಹಾಗೂ ನಿರರ್ಗಳ ಖುತ್‌ಬ ನೀಡಿದರು. ಅವರು ಧರ್ಮಪೀಠದಿಂದ ಕೆಳಗೆ ಬಂದಾಗ, ನಾವು, ಓ ಅಬು ಯಕ್ಜಾನ್! ನೀವು ಬಹಳ ನಿರರ್ಗಳವಾಗಿ ಆದರೆ ಸಂಕ್ಷಿಪ್ತವಾಗಿ ಮಾತನಾಡಿದ್ದೀರಿ. ನೀವು ಅದನ್ನು ಏಕೆ ಹೆಚ್ಚು ಮಾಡಲಿಲ್ಲ? ಅದಕ್ಕೆ ಅವರು ಹೇಳಿದರು, ರಸೂಲುಲ್ಲಾಹ್(ಸ) ಅವರನ್ನು ಹೀಗೆ ಹೇಳುತ್ತಿರುವುದನ್ನು ನಾನು ಆಲಿಸಿದೆ ಅಂದರೆ ಒಬ್ಬ ಮನುಷ್ಯನ ಸುದೀರ್ಘವಾದ ನಮಾಝ್ ಹಾಗೂ ಸಣ್ಣ ಉಪದೇಶವು ಅವನ ಬುದ್ಧಿವಂತಿಕೆಯ ಸಂಕೇತವಾಗಿದೆ. ಆದ್ದರಿಂದ ನಮಾಝನ್ನು ದೀರ್ಘವಾಗಿ ನಿರ್ವಹಿಸಿರಿ ಮತ್ತು ಧರ್ಮೋಪದೇಶವನ್ನು ಚಿಕ್ಕದಾಗಿ ಮಾಡಿರಿ ಮತ್ತು ಖಂಡಿತವಾಗಿಯೂ ಕೆಲವು ಉಪದೇಶಗಳು ಮ್ಯಾಜಿಕ್ ಆಗಿರುತ್ತವೆ. (ಸಹೀಹ್ ಮುಸ್ಲಿಂ, ಕಿತಾಬ್ ಅಲ್–ಜುಮುಅ, ಹದೀಸ್ ಸಂಖ್ಯೆ. 2009)

ಅಮ್ರ್ ಬಿನ್ ಗಾಲಿಬ್ ಅವರು ವರದಿ ಮಾಡುತ್ತಾರೆ ಒಬ್ಬ ವ್ಯಕ್ತಿಯು ಅಮ್ಮಾರ್ ಬಿನ್ ಯಾಸಿರ್(ರ) ಅವರನ್ನು ಹಝ್ರತ್ ಆಯಿಷಾ(ರ) ಅವರ ದೋಷಗಳನ್ನು ಹೇಳಿದನು ಅದಕ್ಕೆ ಅವರು ದೂರ ನಿಂತಿಕೊ ಕೆಟ್ಟ ಸ್ವಭಾವದವನೇ ಎಂದು ಹೇಳಿದರು. ನೀವು ರಸೂಲುಲ್ಲಾಹ್(ಸ) ಅವರ ಪ್ರೀತಿಯ ಧರ್ಮಪತ್ನಿಯನ್ನು ನೋಯಿಸುತ್ತಿದ್ದೀಯ? (ಜಾಮೆ ಅಲ್–ತಿರ್ಮಿದಿ, ಹದೀಸ್ ಸಂಖ್ಯೆ. 3888)

ಇವು ಕೆಲವು ಉಲ್ಲೇಖಗಳಾಗಿವೆ. ಉಳಿದವರ ಬಗ್ಗೆ ಇನ್‌ಶಾಅಲ್ಲಾಹ್ ಮುಂದೆ ವಿವರಸಲಾಗುವುದು.

ಒಂದು ದುಃಖಕರವಾದ ವಾರ್ತೆಯೂ ಇದೆ. ಬುರ್ಕಿನಾಫಾಸೋದಲ್ಲಿ ಮೊನ್ನೆ ನಮ್ಮ ಒಂಬತ್ತು ಅಹ್ಮದಿಯರನ್ನು ಶಹೀದ್ ಮಾಡಲಾಯಿತು. ಇದು ಅತ್ಯಂತ ದುಃಖಕರವದ ಘಟನೆಯಾಗಿದೆ. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಅವರು ಅತ್ಯಂತ ಕ್ರೂರ ರೀತಿಯಲ್ಲಿ ಶಹೀದ್ ಮಾಡಿದರು ಆದರೆ ಅವರ ಸತ್ಯವಿಶ್ವಾಸದ ಪರೀಕ್ಷೆ ಸಹ ಆಗಿತ್ತು.

ಅವರು ಅದರಲ್ಲಿ ಸ್ಥಿರಚಿತ್ತರಾದರು. ಭಯೋತ್ಪಾದಕರು ಒಂದೇ ಸವನೇ ಫೈರಿಂಗ್ ಮಾಡಿರಲಿಲ್ಲ. ಬದಲಾಗಿ, ಪ್ರತಿಯೊಬ್ಬರನ್ನು ಕರೆದುಕೊಂಡು ಶಹೀದ್ ಮಾಡಲಾಗಿತ್ತು. ಅವರ ವಿಶದ ವಿವರಣೆಗಳು ಸ್ವಲ್ಪ ಬಂದಿವೆ. ಸ್ವಲ್ಪ ಈಗ ಬರುತ್ತಿವೆ. ಅವರ ಪ್ರಸ್ತಾಪ ನಾನು ಮುಂದಿನ ಖುತ್ಬದಲ್ಲಿ ಮಾಡುವೆನು. ಇನ್‌ಶಾ ಅಲ್ಲಾಹ್. ಅಲ್ಲಾಹನು ಹುತಾತ್ಮರ ಪದವಿಯನ್ನು ಉನ್ನತಗೊಳಿಸಲಿ. ಅಲ್ಲಿನ ಸ್ಥಿತಿಗಳು ಈಗಲೂ ಕೆಟ್ಟಿವೆ. ಭಯೋತ್ಪಾದಕರು ಬೆದರಿಕೆ ನೀಡಿ ಹೋಗಿರುವರು. ಅವರಿಗಾಗಿಯೂ ದುಆ ಮಾಡುತ್ತಿರಿ. ಅಲ್ಲಾಹನು ಎಲ್ಲ ಕೆಡುಕಿನಿಂದ ಅವರನ್ನು ಸಂರಕ್ಷಿಸಲಿ. ಆಮೀನ್.

...*...*...*...

*ವಿಶೇಷ ಸೂಚನೆ*

"ಬದರ್" ವಾರಪತ್ರಿಕೆಯ ಚಂದಾದಾರರಲ್ಲಿ ತಮ್ಮ ಬಾಕಿ ಇರುವ ವಾರ್ಷಿಕ ಶುಲ್ಕವನ್ನು ಶೀಘ್ರವೇ ಪಾವತಿಸಲು ವಿನಂತಿ.
ಮೊಬೈಲ್ ಸಂಖ್ಯೆ: 9866358609 (ವ್ಯವಸ್ಥಾಪಕರು)

EDITOR
TARIQ AHMED IDRIS.
Mobile : +91 9902678609
e-mail: kannadabadar@gmail.com
website:www.akhbarbadarqadian.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613

Weekly **BADAR** Qadian

Distt: Gurdaspur (Pb.) INDIA Qadian - 143516

Postal Reg. No: 3000039689/2023-25 Vol No.04, Thursday, 23 February 2023, Issue No. 08

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION: Rs.600/- (Per Issue: 10/- ) (WEIGHT: 20-50, grms / issue)

# ಇಸ್ಲಾಂ ಮತ್ತು ಸೈಯ್ಯದ್‌ನಾ ಹಝ್ರತ್ ಮಸಿಹ್ ಮೌಊದ್ ಅಲೈಹಿಸ್ಸಲಾಮ್‌ರವರ ಕಟು ವಿರೋಧಿಯಾದ ಅಲೆಕ್ಸಾಂಡರ್ ಡೂಯಿಯ ಝಿಯಾನ್ ನಗರದಿಂದ ಪ್ರಾರಂಭವಾದ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್(ಅತಬಿಅ)ರವರ ಅಸಾಧಾರಣ ಅನುಗ್ರಹದಾಯಕ ಅಮೇರಿಕದ ಐತಿಹಾಸಿಕ ಪ್ರವಾಸ ಸೆಪ್ಟೆಂಬರ್, ಅಕ್ಟೋಬರ್ 2022

**28 ಸೆಪ್ಟೆಂಬರ್ ಬುಧವಾರ :**

ಹುಝೂರ್ ಅನ್ವರ್(ಅತಬಿಅ) ಮುಂಜಾನೆ 5 ಗಂಟೆ 50 ನಿಮಿಷಕ್ಕೆ "ಮಸ್ಜಿದ್ ಫತ್ಹೇ ಅಝೀಮ್" ನಲ್ಲಿ ಬಂದು ಫಜರ್ ನಮಾಝ್ ನಿರ್ವಹಿಸಿಕೊಟ್ಟರು.

ನಮಾಝ್ ಆದ ನಂತರ ಹುಝೂರ್ ಅನ್ವರ್(ಅಬಿಅ) ತಮ್ಮ ವಸತಿಯತ್ತ ತೆರಳಿದರು. ಮುಂಜಾನೆ ಹುಝೂರ್ ಅನ್ವರ್(ಅಬಿಅ) ವಿವಿಧ ಕಚೇರಿ ಕಾರ್ಯಗಳನ್ನು ನೆರವೇರಿಸುವುದರಲ್ಲಿ ತಲ್ಲೀನರಾದರು. ಕಾರ್ಯಕ್ರಮದನ್ವಯ 11 ಗಂಟೆಗೆ ಹುಝೂರ್ ಅನ್ವರ್(ಅಬಿಅ) ತನ್ನ ಕಚೇರಿಗೆ ಆಗಮಿಸಿ ಕುಟುಂಬಾಧಾರಿತ ಭೇಟಿಗಳನ್ನು ಪ್ರಾರಂಭಿಸಿದರು.

**ಕುಟುಂಬಗಳ ಭೇಟಿ ಮತ್ತು ಅನಿಸಿಕೆಗಳು**

ಇಂದು ಮುಂಜಾನೆ ಈ ಅಧಿವೇಶನದಲ್ಲಿ 42 ಕುಟುಂಬಗಳ 186 ಜನರು ತನ್ನ ಪ್ರೀತಿಯ ಇಮಾಮರೊಂದಿಗೆ ಭೇಟಿಯಾಗುವ ಭಾಗ್ಯ ಪಡೆದರು. ಇವೆಲ್ಲ ಕುಟುಂಬಗಳು ಹುಝೂರ (ಅತಬಿಅ) ಅವರ ಜೊತೆ ಚಿತ್ರ ತೆಗೆಯಿಸಿಕೊಂಡರು. ಹುಝೂರೆ ಅನ್ವರ್ ಪ್ರೀತಿಪೂರ್ವಕವಾಗಿ ವಿದ್ಯಾರ್ಥಿ ವಿದ್ಯಾರ್ಥಿನಿಯರನ್ನು ಪೆನ್ನು (ಲೇಖನಿ) ನೀಡಿದರು. ಮತ್ತು ಸಣ್ಣ ವಯಸ್ಸಿನ ಬಾಲಕ ಬಾಲಕಿಯರಿಗೆ ಚಾಕ್ಲೇಟ್ ನೀಡಿದರು.

ಇಂದು Zion ಜಮಾಅತ್ ಅಲ್ಲದೇ.

Detroit, Miami, Los Angeles, Chicago, Sacramneto, Dayton, Minnesota, Silicon valley, Georgia, Milwaukee, Oshkosh, St. Louis, Kansas city, Austin ಜಮಾಅತುಗಳಿಂದ ಬಂದಿರುವ ಜಮಾಅತ್ ಬಾಂಧವರು ಮತ್ತು ಕುಟುಂಬಗಳು ಭೇಟಿಯಾಗುವ ಭಾಗ್ಯ ಪಡೆದರು.

ಕೆಲ ಬಾಂಧವರು ಬಹುದೂರದ ಸ್ಥಳಗಳಿಂದ ಸುದೀರ್ಘವಾದ ಪ್ರಯಾಣವನ್ನು ಬೆಳೆಸಿ ಭೇಟಿ ಮಾಡಲು ತಲುಪಿದ್ದರು. ಕೆನ್ಸಾಸ್‌ನಿಂದ ಬರುವ ಕುಟುಂಬಗಳು 556 ಮೈಲು, ಜಾರ್ಜಿಯದಿಂದ ಬರುವವರು 748 ಮೈಲು, ಲಾಸ್ ಎಂಜಲೀಸ್‌ನಿಂದ ಬರುವ ಕುಟುಂಬಗಳು 2046 ಮೈಲಿನ ಸುದೀರ್ಘವಾದ ಪ್ರಯಾಣ ಕೈಗೊಂಡು ಇಲ್ಲಿ ತಲುಪಿದ್ದರು.

ಇಂದು ಭೇಟಿ ಮಾಡುವ ಕುಟುಂಬಗಳಲ್ಲಿ ಬಹುದೊಡ್ಡ ಸಂಖ್ಯೆ ಪಾಕಿಸ್ತಾನದಿಂದ ವಲಸೆ ಬಂದವರದ್ದಾಗಿತ್ತು. ಅವರು ತಮ್ಮ ಜೀವನದಲ್ಲಿ ಮೊದಲ ಬಾರಿಗೆ ಹುಝೂರ ಅವರನ್ನು ಭೇಟಿಯಾಗುತ್ತಿದ್ದರು. ಅವರ ಸಂತೋಷ ಹೇಳತೀರದ ರೀತಿಯದ್ದಾಗಿತ್ತು. ಅವರು ಹುಝೂರರ ಜೊತೆ ಕಳೆದ ಆ ಕೆಲ ಕ್ಷಣಗಳು ಅವರ ಜೀವನದ ಬಂಡವಾಳವಾಗಿತ್ತು. ಅವರಲ್ಲಿ ಪ್ರತಿಯೊಬ್ಬರು ಅನುಗ್ರಹಿತರಾಗಿ ಹೊರಬಂದರು. ಅವರ ಕಷ್ಟಕಾರ್ಪಣ್ಯಗಳು, ಸಂತಸ ನೆಮ್ಮದಿಯಲ್ಲಿ ಪರಿವರ್ತನೆಗೊಂಡವು.

ಶಿಕಾಗೋ (ಪೂರ್ವ)ದಿಂದ ಬಂದಿದ್ದವರಾದ ಅಬ್ದುನ್ನೂರ್ ಸಲ್ಮಾನ್ ಸಾಹಿಬ್ ಹೇಳುತ್ತಿದ್ದರು: ನಾನು ಭೇಟಿಯ ಅನಿಸಿಕೆಗಳು ಶಬ್ದಗಳಲ್ಲಿ ವರ್ಣಿಸಲು ಸಾಧ್ಯವಿಲ್ಲ. ಇದು ನನ್ನ ಜೀವನದ ಒಂದು ಅವಿಸ್ಮರಣೀಯ ಘಟನೆಯಾಗಿದೆ. ನಾನು ಹುಝೂರರ ಮುಖಚಹರೆಯಿಂದ ಪ್ರಕಾಶ ಉಮ್ಮಡಿಸುತ್ತಿದ್ದನ್ನು ಕಂಡಿದ್ದೇನೆ.

ಶಿಕಾಗೋದಿಂದ ಬಂದ ಇನ್ನೋರ್ವ ಬಂಧು ಭೇಟಿ ಮಾಡಿ ಹೊರಗೆ ಬಂದಾಗ ಅಳುತ್ತಿದ್ದರು. ಅವರ ಕಣ್ಣುಗಳಿಂದ ಕಂಬನೀರು ಸುರಿಯುತ್ತಿತ್ತು. ಅವರಿಂದ ಮಾತು ಹೊರಡುವುದೇ ಕಷ್ಟವಾಗುತಿತ್ತು. ಅವರು ಹೇಳಿದರು. ಹುಝೂರ್ ನನಗೆ ಹೇಳಿದರು. ನಮಾಝ್ ನಿರ್ವಹಿಸುತ್ತೀರಿ, ನಮಾಝ್‌ನ ಕಡೆ ಗಮನವಿರಲಿ. ಅದು ಎಲ್ಲ ಸಮಸ್ಯೆಗಳ ಪರಿಹಾರವಾಗಿದೆ.

ಓರ್ವ ಮಹಿಳೆ ಬೆನಿಷ್ ಅಹ್ಮದ್ ಸಾಹಿಬ ಹೇಳಿದರು. ಇಂದಿನ ಈ ಭೇಟಿ ನನ್ನ ಜೀವನದ ಬಹುದೊಡ್ಡ ಆಸೆಯಾಗಿತ್ತು. ಅದು ಇಂದು ಈಡೇರಿದಂತಾಗಿದೆ. ಈ ಮಾತನ್ನು ಹೇಳುತ್ತಾ ಅವರು ಅಳತೊಡಗಿದರು. ಹೇಳಿದರು. ನಾನು ಎಷ್ಟು ಅದೃಷ್ಟವಂತೆಯಾಗಿದ್ದೇನೆ. ಇಷ್ಟು ದೊಡ್ಡ ಜಮಾಅತ್‌ಯಿದೆ. ಅಲ್ಲಾಹನು ನನಗೆ ಈ ಸದಾವಕಾಶ ದೊರಕಿಸಿಕೊಟ್ಟಿದ್ದಾನೆ.

ಶಾಹಿದ್ ಅಹ್ಮದ್ ಸಾಹಿಬ್ ಎಂಬುವರು ಹೇಳಿದರು. ನಾನು 46 ವರ್ಷದವನಾಗಿದ್ದೇನೆ ಎಂದು ಭೇಟಿಯಾಗಿರಲಿಲ್ಲ. ನನಗೆ ನನ್ನ ಇಡೀ ಜೀವನದಲ್ಲಿ ಈ ದಿನವನ್ನು ನಿರೀಕ್ಷಿಸುತ್ತಿದ್ದೆ. ಇಂದು ನನಗೆ ಆದ ಆ ಆಧ್ಯಾತ್ಮಿಕ ಅನುಭವ ಹೇಳಲು ಅಸಾಧ್ಯ.

ಇನ್ನೊರ್ವ ಝೀರಕ್ ಮಹ್ಮೂದ್ ಸಾಹಿಬ್ ಹೇಳಿದರು. ನಾನು ತುಂಬಾ ಅದೃಷ್ಟವಂತನಾಗಿದ್ದೇನೆ. ನಾನು ಪಾಕಿಸ್ತಾನದಲ್ಲಿದದೆ. ಅಲ್ಲಾಹನು ನನಗೆ ಅಮೇರಿಕಾಕ್ಕೆ ಕರೆತಂದನು. ಮತ್ತು ಇಲ್ಲಿ ನನಗೆ ಭೇಟಿ ಮಾಡುವ ಭಾಗ್ಯ ದೊರೆಯಿತು.

ಇನ್ನೋರ್ವ ಮಿತ್ರರು ಸಯ್ಯದ್ ಜಮ್‌ಶೆದ್ ಅಲಿ ಸಾಹಿಬ್ ಭೇಟಿ ಮಾಡಿ ಹೊರಗೆ ಬಂದಾಗ ಅವರ ಕಣ್ಣುಗಳಲ್ಲಿ ಭಾಷ್ಪಗಳಿದ್ದವು. ತುಂಬಾ ಸಂತೋಷವನ್ನು ವ್ಯಕ್ತಪಡಿಸುತ್ತಿದ್ದರು. ನಾನು ನನ್ನ ವ್ಯಾಪಾರದ ಯಶಸ್ವಿಗಾಗಿ ಪ್ರಾರ್ಥನೆಯನ್ನು ಪಡೆದು ಬರುತ್ತಿದ್ದೇನೆ.

Zion ಜಮಾಅತಿನ ಮಿತ್ರರು ಇಜಾಝುಲ್ ಹಖ್ ಸಾಹಿಬ್ ಹೇಳಿದರು. ಹುಝೂರ್ ಅನ್ವರ್ ನನಗೆ ಹೇಳಿದರು. ಈಗ ನೀವು ಈ ಮಸೀದಿಯನ್ನು ಆಬಾದ್ ಮಾಡಬೇಕಾಗಿದೆ ಮತ್ತು ಐದು ಹೊತ್ತಿನ ನಮಾಝ್‌ಗಳಲ್ಲಿಯೂ ಗಮನ ನೀಡಬೇಕಾಗಿದೆ.

ರ್‍ಶೈದ್ ಅಹ್ಮದ್ ಎಂಬ ಮಿತ್ರರು ಸ್ಕಾರಮೆಂಡೊಯಿಂದ 2072 ಮೈಲು ದೂರದ ಪ್ರಯಾಣವನ್ನು ಬೆಳೆಸಿ ಭೇಟಿಗೋಸ್ಕರ ಬಂದಿದ್ದರು. ಅವರು ಹೇಳಿದರು. ನನಗೆ ಎಷ್ಟು ಸಂತೋಷವಗಿದೆ ಎಂದರೆ ಅದು ಹೇಳಲು ಸಾಧ್ಯವಿಲ್ಲ. ನನ್ನ ಬಳಿ ಆ ಶಬ್ದಗಳೇ ಇಲ್ಲ. ಇಂದು ನಾನು ಅಮೇರಿಕಾದಲ್ಲಿದ್ದು ಹುಝೂರರ ಕಾರಣದಿಂದಲೇ, ಹುಝೂರ್ ಪಾಕಿಸ್ತಾನದಲ್ಲಿ ನನ್ನ ಕುಟುಂಬಕ್ಕೆ ಧನಸಹಾಯ (ವಝೀಫ) ನಿಯುಕ್ತಗೊಳಿಸಿದರು. ಅದರ ಅನುಗ್ರಹದಿಂದಲೇ ನನ್ನ ನಾಲ್ಕು ಸಹೋದರರು ಡಿಗ್ರಿಗಳನ್ನು ಪಡೆದರು. ಅದೇ ವಝೀಫದಿಂದ ನಾನು ಐಟಿಯಲ್ಲಿ ಮಾಸ್ಟರ್ ಡಿಗ್ರಿ ಪಡೆದೆ. ಇಂದು ಆ ಡಿಗ್ರಿ ಪಡೆದ ಕಾರಣ ಅಮೇರಿಕಾದಲ್ಲಿ ನೌಕರಿ ಮಾಡುತ್ತಿದ್ದೇನೆ.

ಇನ್ನೊರ್ವರು ಮೇಜರ್ ನಯೀಮ್ ಅಹ್ಮದ್ ಸಾಹಿಬ್ ಶಿಕಾಗೋದಿಂದ ಬಂದಿದ್ದರು. ಹೇಳಿದರು. ನಾವು ಈ ಮಸೀದಿಯನ್ನು ನಿರ್ಮಿಸಿದದೇವೆ. ಹುಝೂರ್ ಅನ್ವರ್(ಅಬಿಅ) ಈ ಮಸೀದಿಯ ನಿರ್ಮಾಣ ಕುರಿತು ತುಂಬಾ ಸಂತೋಷವನ್ನು ವ್ಯಕ್ತಪಡಿಸಿದರು ಮತ್ತು ಹೇಳಿದರು. ನೀವು ಅತ್ಯಂತ ಉತ್ತಮ ಮಸೀದಿಯನ್ನು ನಿರ್ಮಿಸಿದ್ದೀರಿ. ಅತಿಥಿಗೃಹ ಮತ್ತು ಮಸೀದಿ ನಿರ್ಮಾಣದಲ್ಲಿ ಯಾವ ಕೊರತೆಯೂ ಮಾಡಲಿಲ್ಲ.

ಹಾಫಿಝ್ ಅಲಿ ಅಸ್ಗರ್ ಸಾಹಿಬ್ ಅವರು ಲಾಸ್‌ಎಂಜಿಲೀಸ್‌ನಿಂದ 2046 ಮೀಲಿನಷ್ಟು ದೂರದ ಪ್ರಯಾಣ ಬೆಳೆಸಿ ಭೇಟಿಗಾಗಿ ಬಂದಿದ್ದರು. ಅವರು ಹೇಳಿದರು. ಹುಝೂರ್ ಅನ್ವರ್(ಅಬಿಅ) ನನಗೆ ಉಪದೇಶ ಮಾಡಿದರು. ಹೆಚ್ಚೆಚ್ಚು ಖುರ್‌ಆನ್ ಆಲಿಸುತ್ತೀರಿ ಮತ್ತು ಪಠಿಸುತ್ತೀರಿ ಎಂದು. ಅದರಿಂದ ನೆನಪಿನಶಕ್ತಿ ವೃದ್ಧಿಸುವುದು.

**(ಮುಂದುವರಿಯುವುದು)**

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**
**NATIONAL TOLL FREE : 1800–103–2131**
**ಸಮಯ: ಬೆಳಿಗ್ಗೆ 08:30 ಯಿಂದ ರಾತ್ರಿ 10:30ಯವರೆಗೆ**
**(ಶುಕ್ರವಾರ ರಜೆ)**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.